ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 5 ಮಂಗಳವಾರ 2022

ಸಂಪುಟ: 43 | ಸಂಚಿಕೆ: 80 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪಿಎಸ್‌ಐ ನೇಮಕಾತಿ ಅಕ್ರಮ: ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಎಡಿಜಿಪಿ ಹುದ್ದೆ ಅಧಿಕಾರಿ ಅಮೃತ್ ಪೌಲ್ ಬಂಧನ, ಅಮಾನತು!




ಬೆಂಗಳೂರು: 545 ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಎಡಿಜಿಪಿ ಅಮೃತ್ ಪೌಲ್ ಅವರನ್ನು ಸಿಐಡಿ ಬಂಧಿಸಿದೆ. ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಕರ್ನಾಟಕ ಕೇಡರ್‌ನ ಇತಿಹಾಸದಲ್ಲಿ ಎಡಿಜಿಪಿ ಶ್ರೇಣಿಯ ಅಧಿಕಾರಿಯೊಬ್ಬರನ್ನು ಬಂಧಿಸಿರುವುದು ಇದೇ ಮೊದಲು. ಹತ್ತು ದಿನ ಸಿಐಡಿ ವಶಕ್ಕೆ ಕೋರ್ಟ್ ಒಪ್ಪಿಸಿದೆ. ಪಿಎಸ್‌ಐ ನೇಮಕಾತಿ ಹಗರಣದಲ್ಲಿ ನಡೆಯುತ್ತಿರುವ ತನಿಖೆಗೆ ಸಂಬಂಧಿಸಿದಂತೆ ಇಂದು ಕಾರ್ಲ್‌ಟನ್ ಹೌಸ್‌ನಲ್ಲಿರುವ ಸಿಐಡಿ ಕಚೇರಿಗೆ 1995ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಪೌಲ್ ಅವರನ್ನು ಮೂರನೇ ಬಾರಿ ವಿಚಾರಣೆಗೆ ▶ 5ನೇ ಪುಟಕ್ಕೆ

5 ಲಕ್ಷ ರೂ. ಲಂಚ ಪಡೆದ ಪ್ರಕರಣ: ಎಸಿಬಿಯಿಂದ ಬಂಧಿತ ಐಎಎಸ್ ಅಧಿಕಾರಿ ಮಂಜುನಾಥ್ ಅಮಾನತು



ಬೆಂಗಳೂರು: ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ವೇಳೆ ಜಮೀನು ವ್ಯಾಜ್ಯ ಇತ್ಯರ್ಥಪಡಿಸಲು ವ್ಯಕ್ತಿಯೊಬ್ಬರಿಂದ ಐದು ಲಕ್ಷ ರೂ. ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿ ಜೆ.ಮಂಜುನಾಥ್ ಅವರನ್ನು ಎಸಿಬಿ ಸೋಮವಾರ ಬಂಧಿಸಿದೆ. ಲಂಚ ಪ್ರಕರಣದಲ್ಲಿ ಮೂರನೇ ಆರೋಪಿಯಾಗಿರುವ ಮಂಜುನಾಥ್ ಅವರನ್ನು ಎಸಿಬಿ ಅಧಿಕಾರಿಗಳು ಇಂದು ಯಶವಂತಪುರದ ಅವರ ನಿವಾಸದಲ್ಲಿ ಬಂಧಿಸಿದ್ದಾರೆ. ಲಂಚ ಪ್ರಕರಣದಲ್ಲಿ ಮಂಜುನಾಥ್ ಅವರನ್ನು ಮೂರನೇ ಆರೋಪಿಯನ್ನಾಗಿ ▶ 5ನೇ ಪುಟಕ್ಕೆ

ಮುಂಚೆನೇ ಹೇಳಿದ್ದೆ, ಯಾರು ಎಷ್ಟೇ ದೊಡ್ಡವರಿದ್ರೂ ಕ್ರಮ ತಗೋತೀವಿ ಅಂತ



ಬೆಂಗಳೂರು: ನಾನು ಮುಂಚೆನೇ ಹೇಳಿದ್ದೆ, ಯಾರು ಎಷ್ಟೇ ದೊಡ್ಡವರಿದ್ರೂ ಕ್ರಮ ತಗೋತೀವಿ ಅಂತ ಹೀಗಾಗಿ ಸಾಕ್ಷ್ಯಾಧಾರಗಳ ಆಧಾರದಲ್ಲಿ ಅಮೃತ್ ಪೌಲ್ ಬಂಧನವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಅಮೃತ್ ಪೌಲ್ ಬಂಧನದಿಂದ ಸರ್ಕಾರಕ್ಕೆ ಮುಖಭಂಗ ಆಗಿಲ್ಲ. ಪ್ರಕರಣದ ತನಿಖೆ ಮಾಡಿಸಿದವರು ನಾವು. ಬೇರೆ ಸರ್ಕಾರ ಆಗಿದ್ದರೆ ತನಿಖೆ ಆಗುತ್ತಿರಲಿಲ್ಲ. ಹಿಂದಿನ ಸರ್ಕಾರ ಇದ್ದಾಗ ಇದೇ ಪೊಲೀಸ್ ಅಕ್ರಮ ಪ್ರಕರಣದಲ್ಲಿ ತನಿಖೆ ಮಾಡದೇ ಮುಚ್ಚಿ ಹಾಕಿದರು. ನಾವು ಇರುವುದರಿಂದ ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಿದ್ದೀವಿ ಎಂದು ಸ್ಪಷ್ಟಪಡಿಸಿದ್ದಾರೆ. ಸಿಐಡಿಗೆ ತನಿಖೆ ಸರ್ಕಾರ ಮುಕ್ತ ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ ಸಾಕ್ಷ್ಯಾಧಾರಗಳಿಂದ ಅಮೃತ್ ಪೌಲ್ ಬಂಧನವಾಗಿದೆ ಎಂದು ಹೇಳಿದ್ದಾರೆ.

ನೇರ ಪಾವತಿ, ಗುತ್ತಿಗೆ ರದ್ದು ಭರವಸೆ

ಪೌರಕಾರ್ಮಿಕರ ಮುಷ್ಕರ ಅಂತ್ಯ

●ನೇರ ಪಾವತಿ ಪೌರಕಾರ್ಮಿಕರ ಖಾಯಂಗೆ ಸಮಿತಿ ರಚನೆ, ಅದರ ವರದಿ ಅನುಸಾರ ಖಾಯಂ ●ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ಅಧ್ಯಕ್ಷತೆಯ ಸಭೆ ಬಳಿಕ ಹೋರಾಟ ಕೈಬಿಡಲು ನಿರ್ಧಾರ



ಮೈಸೂರಲ್ಲಿ ಸೋಮವಾರವೂ ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಮೈಸೂರು,ಜು.4(ಪಿಎಂ)– ಸಮಿತಿ ರಚಿಸಿ ಅದರ ವರದಿ ಅನುಸಾರ ನೇರ ಪಾವತಿ ಪೌರಕಾರ್ಮಿಕರನ್ನು 3 ತಿಂಗಳೊಳಗೆ ಖಾಯಂ ಪ್ರಕ್ರಿಯೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವ ಸರ್ಕಾರದ ಭರವಸೆ ಹಿನ್ನೆಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರಕಾರ್ಮಿಕರು ಸೇರಿದಂತೆ ಸ್ವಚ್ಛತಾ ಕಾರ್ಮಿಕರು ರಾಜ್ಯಾದ್ಯಂತ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಮುಷ್ಕರ ಸೋಮವಾರ ಅಂತ್ಯಗೊಂಡಿದೆ.

ವರದಿ ನೀಡಲು ಸದರಿ ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನೀಡಲು ನಿರ್ಣಯಿಸಿದ್ದು, ಸಮಿತಿ ವರದಿ ನೀಡಿದ ಬಳಿಕ ಅದರ ಅನುಸಾರ ನೇರ ಪಾವತಿ ಪೌರಕಾರ್ಮಿಕರ ಖಾಯಂ ಪ್ರಕ್ರಿಯೆಯನ್ನು ಮತ್ತೆ 3 ತಿಂಗಳಲ್ಲಿ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಅಲ್ಲದೆ, ನೇಮಕಾತಿ ನಿಯಮಗಳಲ್ಲಿ ಮಾರ್ಪಾಡು ಹಾಗೂ ಸಚಿವ ಸಂಪುಟ ಸೇರಿದಂತೆ ▶ 8ನೇ ಪುಟಕ್ಕೆ

ಮುಖ್ಯಮಂತ್ರಿಗಳ ಸಭೆಯ ಪರಿಷ್ಕೃತ ನಡಾವಳಿಗಳು

ರಾಜ್ಯದಲ್ಲಿ ಬಿಬಿಎಂಪಿ ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ಪೌರಕಾರ್ಮಿಕರನ್ನು ಖಾಯಂಗೆ ಸರ್ಕಾರದ ತಾತ್ವಿಕ ಒಪ್ಪಿಗೆ ಇದೆ. ಇದನ್ನು ಕಾನೂನುಬದ್ಧವಾಗಿ ಜಾರಿಗೊಳಿಸಲು ಸರ್ಕಾರದ ಹಿರಿಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರು, ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಕಾನೂನು ಇಲಾಖೆ ಹಾಗೂ ಪೌರಕಾರ್ಮಿಕರ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ರಚಿಸಿ, ಈ ಸಮಿತಿಯು ಮೂರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಕ್ರಮ ವಹಿಸಲು ಸಭೆಯಲ್ಲಿ ನಿರ್ಣಯಿಸಲಾಗಿದೆ.

ವರದಿಯ ಅನುಸಾರ ನೇರ ನೇಮಕಾತಿ ಪೌರಕಾರ್ಮಿಕರನ್ನು ಖಾಯಂ ಪ್ರಕ್ರಿಯೆಯನ್ನು 3 ತಿಂಗಳೊಳಗೆ ಪ್ರಾರಂಭಿಸುವುದು. ನೇಮಕಾತಿ ನಿಯಮಗಳಲ್ಲಿ ಮಾರ್ಪಾಡು ಹಾಗೂ ಸಚಿವ ಸಂಪುಟದ ಅನುಮೋದನೆ ಹಾಗೂ ಉಭಯ ಸದನಗಳ ಅನುಮೋದನೆಯನ್ನು ಮೂರು ▶ 8ನೇ ಪುಟಕ್ಕೆ

ಕೊಡಗಲ್ಲಿ ವರುಣನ ಆರ್ಭಟ: ಆರೆಂಜ್ ಅಲರ್ಟ್ ಘೋಷಣೆ

●ತುಂಬಿಹರಿಯುತ್ತಿವೆ ನದಿ–ತೊರೆಗಳು ●ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಜನಜೀವನ ಅಸ್ತವ್ಯಸ್ತ ●ಮಡಿಕೇರಿ–ಭಾಗಮಂಡಲ ರಸ್ತೆ ಸಂಪರ್ಕ ಕಡಿತ



ಮಡಿಕೇರಿ,ಜು.4–ಕೊಡಗು ಜಿಲ್ಲೆಯಾದ್ಯಂತ ಸೋಮವಾರ ಮಳೆ ಮತ್ತಷ್ಟು ಬಿರುಸು ಪಡೆದುಕೊಂಡಿದ್ದು, ಮಂಗಳವಾರ ಬೆಳಗ್ಗೆ 8.30ರವರೆಗೆ ಜಿಲ್ಲೆಯಾದ್ಯಂತ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ 64.5 ಮಿಮೀನಿಂದ 115.5 ಮಿಮೀ ಮಳೆ ಸುರಿಯಬಹುದು ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.

ಮಡಿಕೇರಿ–ಭಾಗಮಂಡಲ ರಸ್ತೆಯಲ್ಲಿ ಎರಡು ಅಡಿಗೂ ಹೆಚ್ಚು ನೀರು ಹರಿಯುತ್ತಿರುವುದರಿಂದ ಇಲ್ಲಿನ ರಸ್ತೆ ಸಂಪರ್ಕ ಕಡಿತಗೊಂಡಿದೆ. ಮಡಿಕೇರಿಯಲ್ಲಿರುವ ಎನ್‌ಡಿಆರ್‌ಎಫ್ ತಂಡ ಸಂಭಾವ್ಯ ಭೂ ಕುಸಿತ ಘಟಿಸಬಹುದಾದ ಚಾಮುಂಡೇಶ್ವರಿ ನಗರ, ಇಂದಿರಾ ನಗರ, ಮಂಗಳೂರು ರಸ್ತೆ ಸಮೀಪದ ತಾಳತ್ ಮನೆ ವ್ಯಾಪ್ತಿಗೆ ತೆರಳಿ ಪರಿಶೀಲನೆ ನಡೆಸಿದೆ. ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರಾದ ಆರ್.ಎಂ. ಅನನ್ಯ



> **“ ಕೊಡಗಿನ 5 ತಾಲೂಕುಗಳ 10 ಹೋಬಳಿಗಳ 100 ಕಡೆಗಳಲ್ಲಿ ವಿಪತ್ತು ಸಂಭವಿಸುವ ಸಾಧ್ಯತೆಗಳಿವೆ ಎಂದು ಈ ಹಿಂದಿನ ಘಟನೆಗಳನ್ನು ಆಧರಿಸಿ ಅಂದಾಜು ಮಾಡಲಾಗಿದೆ. ಈ ಸ್ಥಳಗಳನ್ನು 'ಸೂಕ್ಷ್ಮ ಪ್ರದೇಶ' ಎಂದು ಗುರುತಿಸಿ ಅಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಜಿಲ್ಲಾಡಳಿತ ಈಗಾಗಲೇ 49 ಭೂ ಕುಸಿತ, 50 ಪ್ರವಾಹ, 1 ಅಂತರ್‌ಜಲದಿಂದ ಸಮಸ್ಯೆಯಾಗುವ ಸಂಭವನೀಯ ಸ್ಥಳಗಳನ್ನು ಗುರುತು ಮಾಡಿದ್ದು, ಅಗತ್ಯವಿದ್ದಲ್ಲಿ ಎಲ್ಲಾ ರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.**

ವಾಸುದೇವ್, ಎನ್.ಡಿ.ಆರ್.ಎಫ್ ಇನ್ಸ್‌ಪೆಕ್ಟರ್ ರಾಮ್ ಭಜ್, ಸಬ್‌ಇನ್ಸ್‌ಪೆಕ್ಟರ್ ಶಾಂತಿ ಲಾಲ್ ಜಾಟಿಯ ಮತ್ತು ತಂಡ ರಕ್ಷಣಾ ಕಾರ್ಯ ▶ 6ನೇ ಪುಟಕ್ಕೆ

ಕೊಡಗಲ್ಲಿ ಪದೇ ಪದೆ ಭೂಕಂಪನ; ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ನಿಷೇಧ

●ಕಂದಾಯ ಸಚಿವ ಆರ್. ಅಶೋಕ್ ಘೋಷಣೆ ●ಶೀಘ್ರದಲ್ಲೇ ಅಧಿಕಾರಿಗಳೊಂದಿಗೆ ಕೊಡಗಿಗೆ ಭೇಟಿ ●ಭೂ ಕುಸಿತಕ್ಕೆ ಅತೀ ವಾಣಿಜ್ಯೀಕರಣವೇ ಕಾರಣ; ಕಠಿಣ ನಿಲುವಿಗೆ ಸರ್ಕಾರ ನಿರ್ಧಾರ

ಬೆಂಗಳೂರು, ಜು.4(ಕೆಎಂಶಿ)– ನಿರಂತರ ಮಳೆಯ ನಡುವೆ ಪದೇ ಪದೆ ಭೂಕಂಪದಂತಹ ವಿಕೋಪಕ್ಕೆ ಗುರಿಯಾಗುತ್ತಿರುವುದನ್ನು ಗಂಭೀರವಾಗಿ



ಪರಿಗಣಿಸಿರುವ ರಾಜ್ಯ ಸರ್ಕಾರ ಇನ್ನು ಮುಂದೆ ಕೊಡಗು ಜಿಲ್ಲೆಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವುದನ್ನು ನಿಷೇಧಿಸಲು ಉದ್ದೇಶಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್. ಅಶೋಕ್, ಭೂ ಗರ್ಭ ಶಾಸ್ತ್ರಜ್ಞರ ತಂಡದೊಂದಿಗೆ ಒಂದೆರಡು ದಿನಗಳಲ್ಲಿ ತಾವೇ ಖುದ್ದಾಗಿ ಕೊಡಗು ಜಿಲ್ಲೆಗೆ ಭೇಟಿ ನೀಡುತ್ತಿರುವುದಾಗಿ ಹೇಳಿದರು. ಜಿಲ್ಲೆಯಲ್ಲಿ ಆಗಾಗ್ಗೆ ▶ 8ನೇ ಪುಟಕ್ಕೆ


> **“ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ನೀಡುವ ಸಂಬಂಧ ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಕಾಯ್ದೆ ಮಂಡಿಸುವುದಾಗಿ ಇದೇ ಸಂದರ್ಭದಲ್ಲಿ ನುಡಿದರು. ರಾಜ್ಯದಲ್ಲಿ ಡೀಮ್ಡ್ ಫಾರೆಸ್ಟ್ ಹೆಸರಿನಲ್ಲಿ ಅರಣ್ಯ ಇಲಾಖೆಯ ಕೈಲಿದ್ದ ಆರು ಲಕ್ಷ ಹೆಕ್ಟೇರ್ ಭೂಮಿ ರಾಜ್ಯ ಸರ್ಕಾರಕ್ಕೆ ಮರಳುತ್ತಿದ್ದು, ಈ ಪೈಕಿ ದಶಕಗಳ ಕಾಲದಿಂದ ವ್ಯವಸಾಯ ಮಾಡುವವರಿಗೆ ಒಂದಷ್ಟು ಪ್ರಮಾಣದ ಭೂಮಿ ನೀಡಿ ಉಳಿದ ಭೂಮಿಯನ್ನು ಸರ್ಕಾರದ ವಶದಲ್ಲಿಟ್ಟುಕೊಳ್ಳುತ್ತೇವೆ.**
> –ಆರ್.ಅಶೋಕ್

ಕೊಡಗಲ್ಲಿ ಧಾರಾಕಾರ ಮಳೆ: ಕೆಆರ್‌ಎಸ್ ಅಣೆಕಟ್ಟೆಗೆ ಒಳಹರಿವು ಹೆಚ್ಚಳ

●ಜಲಾಶಯದಲ್ಲಿ ಹಾಲಿ 111.12 ಅಡಿ ನೀರು ಸಂಗ್ರಹ
●ನಿರೀಕ್ಷಿತ ಅವಧಿಗೂ ಮುನ್ನವೇ ಭರ್ತಿ ಸಾಧ್ಯತೆ


ಮೈಸೂರು, ಜು. 4(ಆರ್‌ಕೆ)– ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕೆಲ ದಿನಗಳಿಂದ ಮಳೆ ಧಾರಾಕಾರವಾಗಿ ಸುರಿಯುತ್ತಿರುವುದರಿಂದ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುತ್ತಿದೆ. ಸೋಮವಾರ ಬೆಳಗ್ಗೆ 22,466 ಕ್ಯೂಸೆಕ್ ಇದ್ದ ಒಳಹರಿವಿನ ಪ್ರಮಾಣ, ಸಂಜೆ ವೇಳೆಗೆ 24,000 ಕ್ಯೂಸೆಕ್‌ಗೇರಿತ್ತು. ಇಂದು ಕೆಆರ್‌ಎಸ್ ಅಣೆಕಟ್ಟೆಯಲ್ಲಿ 111.12 ಅಡಿ ನೀರು ಸಂಗ್ರಹವಾಗಿದ್ದು, ಒಳಹರಿವಿನ ಪ್ರಮಾಣ ಇನ್ನೂ ಅಧಿಕವಾಗುವ ನಿರೀಕ್ಷೆ ಇರುವುದರಿಂದ ಈ ಬಾರಿ ಅವಧಿಗೂ ಮುನ್ನವೇ ಜಲಾಶಯ ಭರ್ತಿಯಾಗುವ ಸಾಧ್ಯತೆ ಇದೆ ಎಂದು ಕಾವೇರಿ ನೀರಾವರಿ ನಿಗಮ (ಸಿಎನ್‌ಎನ್)ದ ಎಗ್ಸಿಕ್ಯೂಟಿವ್ ಇಂಜಿನಿಯರ್ ರಾಮಮೂರ್ತಿ ತಿಳಿಸಿದ್ದಾರೆ.

ಗರಿಷ್ಠ 124.80 ಅಡಿ ನೀರು ಸಂಗ್ರಹ ಸಾಮರ್ಥ್ಯ (49.452 ಟಿಎಂಸಿ) ವಿರುವ ಅಣೆಕಟ್ಟೆಯಲ್ಲಿ ಸೋಮವಾರ 111.12 ಅಡಿ (32.370 ಟಿಎಂಸಿ) ತಲುಪಿದೆ. ಕಳೆದ ವರ್ಷ ಇದೇ ದಿನ 91.42 ಅಡಿ ಇದ್ದು, ಕೇವಲ 1,161 ಕ್ಯೂಸೆಕ್ಸ್ ನೀರು ಜಲಾಶಯಕ್ಕೆ ಹರಿದು ಬರುತ್ತಿತ್ತು. ಇಂದು 1,210 ಕ್ಯೂಸೆಕ್ಸ್ ನೀರನ್ನು ಕಾವೇರಿ ನದಿಗೆ ಹರಿ ಬಿಡುತ್ತಿದ್ದು, ▶ 5ನೇ ಪುಟಕ್ಕೆ



ಮರೀಚಿಕೆಯಾದ ಡಿಸ್ನಿಲ್ಯಾಂಡ್ ಮಾದರಿ ಬೃಂದಾವನ ಅಭಿವೃದ್ಧಿ

ಮೈಸೂರು, ಜು.4(ಆರ್‌ಕೆ)–ಬಹು ನಿರೀಕ್ಷಿತ ಡಿಸ್ನಿಲ್ಯಾಂಡ್ ಮಾದರಿ ಕೃಷ್ಣರಾಜ ಸಾಗರ (ಕೆಆರ್‌ಎಸ್)ದ ಬೃಂದಾವನ ಗಾರ್ಡನ್ ಅಭಿವೃದ್ಧಿಗೊಳಿಸುವ ಉದ್ದೇಶಿತ ಮಹತ್ವದ ಯೋಜನೆ ಮರೀಚಿಕೆಯಾಗಿಯೇ ಉಳಿದಿದೆ.



ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಸಾರಥ್ಯದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವು ಅಧಿಕಾರಕ್ಕೆ ▶ 5ನೇ ಪುಟಕ್ಕೆ

ಆನಂದೂರು ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ಆರೋಪ; ಪ್ರತಿಭಟನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ಪ್ರದೇಶ ದಲಿತ ಜಾಗೃತಿ ಸಮಿತಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜು.4(ಪಿಎಂ)– ತಾಲೂಕಿನ ಇಲವಾಲ ಹೋಬಳಿಯ ಆನಂದೂರು ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ನಿರಂತರವಾಗಿ ನಡೆಯುತ್ತಿದ್ದು, ಜೊತೆಗೆ ಆನಂದೂರು ಗ್ರಾಮ ಪಂಚಾಯಿತಿ ಪಿಡಿಓ ಅವರು ದಲಿತರಾದ ಕಾರಣ ಅವರ ಮೇಲೆ ನಿರಂತರ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ಪ್ರದೇಶ ದಲಿತ ಜಾಗೃತಿ ಸಮಿತಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಈ ಗ್ರಾಮದಲ್ಲಿ ದಲಿತರ ಮೇಲಿನ ದೌರ್ಜನ್ಯ ಮಿತಿ ಮೀರಿದೆ. ಇಲ್ಲಿನ ಸವರ್ಣೀಯರು, ದಲಿತ ಸಮುದಾಯಕ್ಕೆ ದೇವಸ್ಥಾನ, ಹೋಟೆಲ್ ಹಾಗೂ ಕ್ಷೌರದ ಅಂಗಡಿಗಳಿಗೆ ಪ್ರವೇಶ ನಿರ್ಬಂಧಿಸಿದ್ದಾರೆ. ಅಲ್ಲದೆ, ದಲಿತ ಸಮುದಾಯದವರು ಕೊಳವೆ ಬಾವಿ, ಕೊಳವೆಗಳನ್ನು ಉಪಯೋಗಿಸಲು ಅವಕಾಶ ನೀಡುತ್ತಿಲ್ಲ. ಒಂದು ವೇಳೆ ಉಪಯೋಗಿಸಿದರೆ ಸಗಣಿ ಮತ್ತು ಗೋ ಮೂತ್ರದಿಂದ ತೊಳೆದು ಶುದ್ಧಿ ಎಂಬ ಹೆಸರಿನಲ್ಲಿ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ದಲಿತರ ಮೇಲಿನ ಇಂತಹ ದೌರ್ಜನ್ಯ ದಿನೇ ದಿನೆ ಹೆಚ್ಚಾಗುತ್ತಿದ್ದು, ಇದರಿಂದ ದಲಿತರು ಮಾನಸಿಕವಾಗಿ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ ತಯಾರಿಕೆಗೆ ದಲಿತ ಮಹಿಳೆ ನಿಯೋಜಿಸಬೇಕೆಂಬುದು ಕಡ್ಡಾಯವಿದೆ. ಆದರೆ ಇಲ್ಲಿನ ಸರ್ಕಾರಿ ಶಾಲೆಗೆ ಈವರೆಗೆ ಯಾವುದೇ ದಲಿತ ಮಹಿಳೆಗೂ ಬಿಸಿಯೂಟ ತಯಾರಿಕೆಗೆ ಅವಕಾಶ ನೀಡಿಲ್ಲ ಎಂದು ದೂರಿದರು. ಆನಂದೂರು ಗ್ರಾಪಂನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಎಂ.ಮಂಜುಳಾ ಅವರು ಪಿಡಿಓ ಆಗಿ ಉತ್ತಮ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಇವರು ದಲಿತರು ಎಂಬ ಕಾರಣಕ್ಕೆ ಸವರ್ಣೀಯರು ನಿರಂತರ ಕಿರುಕುಳ ನೀಡುತ್ತಿದ್ದಾರೆ. ಇಲ್ಲಿ ಮಹಿಳಾ ಗ್ರಾಪಂ ಸದಸ್ಯರ ಪತಿಯರ ಉಪಟಳವೇ ಹೆಚ್ಚಾಗಿದೆ. ಕಾನೂನಿನಂತೆ ಮಾಡಲಾಗದ ಕೆಲಸಗಳನ್ನು ಮಾಡುವಂತೆ ಎಂ. ಮಂಜುಳಾ ಅವರಿಗೆ ಒತ್ತಡ ಹಾಕುವುದು, ಅವರ ವಿರುದ್ಧ ವಿನಾಕಾರಣ ಪ್ರತಿಭಟನೆ ನಡೆಸಿ, ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದರು. ಗ್ರಾಮದಲ್ಲಿ ನಡೆಯುತ್ತಿರುವ ಅಸ್ಪೃಶ್ಯತಾ ಆಚರಣೆ ವಿರುದ್ಧ ಶೀಘ್ರವೇ ಕ್ರಮ ಕೈಗೊಳ್ಳಬೇಕು. ಮಂಜುಳಾ ಅವರಿಗೆ ಕಿರುಕುಳ ನೀಡುತ್ತಿರುವವರು, ಇದಕ್ಕೆ ಕುಮ್ಮಕ್ಕು ನೀಡುತ್ತಿರುವವರ ವಿರುದ್ಧ ಪರಿಶಿಷ್ಟ ಜಾತಿ ಪ್ರತಿಬಂಧಕ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ಕೋರ್ಟ್ ಎದುರಿನ ಗಾಂಧಿ ಪುತ್ಥಳಿಯಿಂದ ಕೃಷ್ಣರಾಜ ಬುಲೇವಾರ್ಡ್ ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಸಮಿತಿಯ ಜಿಲ್ಲಾಧ್ಯಕ್ಷ ಮಂಜುನಾಥ ತುಂಬಲ, ಪ್ರಧಾನ ಕಾರ್ಯದರ್ಶಿ ಬಸವರಾಜು, ಜಿಲ್ಲಾ ಸಂಚಾಲಕರಾದ ಶಿವಪ್ರಸಾದ್, ಶಿವಕುಮಾರ್, ಸಮಿತಿ ಮುಖಂಡರಾದ ನರೇಂದ್ರ, ಪುಟ್ಟಸ್ವಾಮಿ ವಾಜಮಂಗಲ, ಮಂಜುನಾಥ್ ಕುಪ್ಪೇಗಾಲ, ಆಲಗೂರು ಶಿವಣ್ಣ, ಮಧು ತಾಯೂರು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿ ಅಸ್ತಿತ್ವಕ್ಕೆ ಆಪರೇಷನ್ ಆಗುವ ಕಾಲ ಹತ್ತಿರದಲ್ಲೇ ಇದೆ...

● ಬಿಜೆಪಿ ಹೈದರಾಬಾದ್ ರಾಷ್ಟ್ರೀಯ ಕಾರ್ಯಕಾರಿಣಿ ಬಗ್ಗೆ ಮಾಜಿ ಸಿಎಂ ಕುಮಾರಸ್ವಾಮಿ ತೀಕ್ಷ್ಣ ಟ್ವೀಟಾಸ್ತ್ರ ಪ್ರಯೋಗ

● ಅಬ್ಬರ ಜಾಸ್ತಿ, ಅಭಿವೃದ್ಧಿ ನಾಸ್ತಿ, ಇದು ಬಿಜೆಪಿ ನೀತಿ...!

ಬೆಂಗಳೂರು, ಜು.4(ಕೆಎಂಶಿ)– ಹೈದರಾಬಾದ್ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಭಾವನಾತ್ಮಕ ವಿಚಾರಗಳನ್ನು ಮುನ್ನೆಲೆಗೆ ತಂದು, ಜನರ ಮನಸ್ಸುಗಳನ್ನು ಒಡೆದು, ರಾವಣ ರಾಜಕೀಯದ ವಿನಾಶಕಾರಿ ದಾರಿಗೆ ಹಿಡನ್ ಅಜೆಂಡಾ ಸಿದ್ಧ ಮಾಡಲಾಯಿತೇ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಜೆಡಿಎಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದ್ದಾರೆ.

ರವಿ ಅವರೇ, ಆಂತರಿಕ ಪ್ರಜಾಪ್ರಭುತ್ವ ಎಂದರೆ, ಪ್ರಧಾನಿ ನರೇಂದ್ರ ಮೋದಿ ಮುಂದೆ ಸತ್ತ ಸೊಂಟದವರಂತೆ ನಡುಬಗ್ಗಿಸಿ ತಲೆ ಅಲ್ಲಾಡಿಸುವುದಾ? ಜೀ ಜೀ ಎನ್ನುತ್ತಾ ಜೀ ಹುಜೂರ್ ಎನ್ನುವುದಾ? 25 ಸಂಸದರ ಯೋಗ್ಯತೆ ಏನು? ಅವರಿಗೆಷ್ಟು ಸ್ವಾತಂತ್ರ್ಯ ಕೊಟ್ಟಿದ್ದೀರಿ ಎಂದು ವಾಗ್ದಾಳಿ ನಡೆಸಿದ್ದಾರೆ. ನೆಮ್ಮದಿಯ ಸಮಾಜಕ್ಕೆ ಕೋಮು ವಿಷ ಪ್ರಾಶನ ಮಾಡುವ ಇಂಜೆಕ್ಷನ್. ಧರ್ಮ, ದೇವರು, ಜಾತಿ, ಭಾಷೆ, ಆಚಾರ, ಆಹಾರ, ವ್ಯಾಪಾರಗಳನ್ನು ಎಳೆ ತಂದು, ಅಸಹಿಷ್ಣುತೆ ಸೃಷ್ಟಿಸಿ ಭಾರತವನ್ನು ಧರ್ಮದ ಆಧಾರದಲ್ಲಿ ಒಡೆದು ಹಾಕುವುದಾ? ಕರ್ನಾಟಕದ ನಂತರ ನಿಮ್ಮ ಮುಂದಿನ ಗುರಿ ದಕ್ಷಿಣ ಭಾರತ. ಹೌದಲ್ಲವೇ ಎಂದಿದ್ದಾರೆ.

ಆಪರೇಷನ್ ಕಮಲದ ರಾಷ್ಟ್ರೀಕರಣ ಮತ್ತು ತುಷ್ಟೀಕರಣ. ಶಾಸಕರ ಖರೀದಿ, ಕುದುರೆ ವ್ಯಾಪಾರ, ಕರ್ನಾಟಕದ ನಂತರ ತಮಿಳುನಾಡು, ಕೇರಳ, ತೆಲಂಗಾಣ ಮತ್ತು ಆಂಧ್ರ ಪ್ರದೇಶಕ್ಕೂ ವಿಸ್ತರಿಸುವ ಡೋಂಗೀ ರಾಷ್ಟ್ರಪ್ರೇಮಿಗಳ ರಾಜಕಾರಣ. ದಕ್ಷಿಣದ ಮೇಲೆ ಆಪರೇಷನ್ ಕಮಲದ ದುರಾಕ್ರಮಣವಲ್ಲವೇ?

ಆಪರೇಷನ್ ಕಮಲಕ್ಕೆ ಬ್ರ್ಯಾಂಡ್ ಅಂಬಾಸಿಡರ್ ಒಬ್ಬರು ಬೇಕಲ್ಲವೇ? ಬಿ.ಎಸ್.ಯಡಿಯೂರಪ್ಪ ಅವರನ್ನೇ ಬ್ರ್ಯಾಂಡ್ ರಾಯಭಾರಿ ಮಾಡುತ್ತೀರಾ? ಕಾರ್ಯಕಾರಿಣಿಯಲ್ಲಿ ಇದೂ ಚರ್ಚೆಗೆ ಬಂತಾ? ಮೋದಿ ಸಾಹೇಬರು ಒಪ್ಪಿದರಾ? ಎಷ್ಟಾದರೂ ನಿಮ್ಮ ಅಮಿತೋತ್ಸಾಹಕ್ಕೆ ಆಪರೇಷನ್ ಕಮಲವೇ ಕಾರಣ, ಅಲ್ಲವೇ?



ಅಂದರೆ, ಬಿಜೆಪಿ ಪರಿವಾರ ರಾಜಕಾರಣವನ್ನು ಮತ್ತಷ್ಟು ಬಲಪಡಿಸುವುದಾ? ಆಗ ಕಾಂಗ್ರೆಸ್ ಮುಕ್ತ ಭಾರತ. ಈಗ ಪರಿವಾರ ಮುಕ್ತ ಭಾರತ. ನಂತರ ಪ್ರತಿಪಕ್ಷ ಮುಕ್ತ ಭಾರತ. ಮುಂದೆ ಸಂಪೂರ್ಣ ಪ್ರಜಾಪ್ರಭುತ್ವ ಮುಕ್ತ ಭಾರತ್ ನಿರ್ಮಾಣ ಎಂದು ಪ್ರಹಾರ ನಡೆಸಿದ್ದಾರೆ.

ಇದಲ್ಲವೇ ನಿಮ್ಮ ಬಿಜೆಪಿಯ ಭವ್ಯಗುರಿ? ಉತ್ತರಿಸಿ

ದಕ್ಷಿಣದಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಶಕ್ತಿ. ಇಲ್ಲಿ ಹೆಜ್ಜೆ ಇಡಲು ಬಿಜೆಪಿಗೆ ಆಗುತ್ತಿಲ್ಲ. ಆಪರೇಷನ್ ಕಮಲದಿಂದ ಕರ್ನಾಟಕದಲ್ಲಿ ಅಧಿಕಾರ ಹಿಡಿದಿರಿ. ಒಡಿಶಾ, ತೆಲಂಗಾಣ, ಆಂಧ್ರ, ತಮಿಳುನಾಡು, ಕೇರಳದಲ್ಲಿ ನಿಮ್ಮ ಬೇಳೆ ಬೇಯಲಿಲ್ಲ. ಅದಕ್ಕೀಗ ಪರಿವಾರಮುಕ್ತ ರಾಜಕೀಯ ಎಂದು ರಾಗ ತೆಗೆಯುತ್ತಿದ್ದೀರಿ. ಸತ್ಯ ಹೇಳಿ ಸಿ.ಟಿ.ರವಿಯವರೇ?

ಪ್ರಾದೇಶಿಕ ಪಕ್ಷಗಳನ್ನು ಎದುರಿಸಲಾಗದ ಬಿಜೆಪಿ, ಈಗ ಪರಿವಾರ ಜಪ ಮಾಡುತ್ತಿದೆ. ಮಹಾರಾಷ್ಟ್ರದಲ್ಲಿ ಆಪರೇಷನ್ ಕಮಲ ಮಾಡಿ ನೀವು ಮುಖ್ಯಮಂತ್ರಿ ಮಾಡಿದ ಏಕನಾಥ ಶಿಂಧೆ ಅವರ ಏಕಪರಿವಾರ ಪಾಲಿಟಿಕ್ಸ್ ಗೊತ್ತಿರಲಿಲ್ಲವೇ? ಬೋಧನೆ ಒಂದು. ಭೋಜನ ಇನ್ನೊಂದು. ಛೀ, ಹೇಸಿಗೆ.

ಯಡಿಯೂರಪ್ಪ ಮತ್ತು ಸನ್ಸ್, ರವಿ ಸುಬ್ರಹ್ಮಣ್ಯ–ತೇಜಸ್ವಿಸೂರ್ಯ, ಅಶೋಕ್–ರವಿ, ಸೋಮಣ್ಣ–ಅರುಣ್ ಸೋಮಣ್ಣ, ಲಿಂಬಾವಳಿ–ರಘು, ವಿಶ್ವನಾಥ್–ವಾಣಿ ವಿಶ್ವನಾಥ್, ಶೆಟ್ಟರ್–ಪ್ರದೀಪ್ ಶೆಟ್ಟರ್, ನಿರಾಣಿ–ಹಣಮಂತ ನಿರಾಣಿ, ಜಿ.ಎಸ್.ಬಸವರಾಜು–ಜ್ಯೋತಿ ಗಣೇಶ್ ಮತ್ತು ಜಾರಕಿಹೊಳಿ, ಕತ್ತಿ, ಅಂಗಡಿ, ಉದಾಸಿ ಕುಟುಂಬಗಳು.. ಇದೆಲ್ಲಾ ಏನು?

ಪರಿವಾರ ರಾಜಕಾರಣಕ್ಕೆ ಬಿಜೆಪಿ ಅತೀತವಲ್ಲ. ರಾಜ್ಯದ ಲೆಕ್ಕ ಕೊಟ್ಟಿದ್ದೇನೆ. ಭಾರತದ ಪಟ್ಟಿ ಕೊಡಲೇ? ಅಬ್ಬರ ಜಾಸ್ತಿ, ಅಭಿವೃದ್ಧಿ ನಾಸ್ತಿ. ಇದು ಬಿಜೆಪಿ ನೀತಿ. ಆಪರೇಷನ್ ದಕ್ಷಿಣ್ ಅಲ್ಲ, ಬಿಜೆಪಿ ಅಸ್ತಿತ್ವಕ್ಕೇ ಆಪರೇಷನ್ ಆಗುವ ಕಾಲ ಹತ್ತಿರದಲ್ಲೇ ಇದೆ ಎಂದು ಟೀಕಿಸಿದ್ದಾರೆ.

ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರ

ಮೈಸೂರು, ಜು. 4– ಮೈಸೂರಿನ ಕಾಳಮ್ಮನಗುಡಿ ಬೀದಿ ರಸ್ತೆಯಲ್ಲಿರುವ ಶ್ರೀ ಕಾಳಿಕಾಂಬ ಕಮಠೇಶ್ವರಸ್ವಾಮಿಯವರ ದೇವಾಲಯದಲ್ಲಿ 37ನೇ ವರ್ಷದ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಯುಕ್ತ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 500 ಅಂಕ ಮತ್ತು ದ್ವಿತೀಯ ಪಿಯುಸಿಯಲ್ಲಿ 480 ಅಂಕಗಳಿಗಿಂತ ಮೇಲ್ಪಟ್ಟು ತೆಗೆದುಕೊಂಡಿರುವ ಜಿಲ್ಲೆಯ ವಿಶ್ವಕರ್ಮ ವಿದ್ಯಾರ್ಥಿಗಳಿಗೆ ಜು. 18 ರಂದು ಸಂಜೆ 5.30 ಕ್ಕೆ ಎಂ.ಆರ್. ರಘುರಾಂ ಸ್ಮರಣಾರ್ಥ ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರ ಮತ್ತು ಪ್ರೋತ್ಸಾಹ ಧನ ನೀಡಲಾಗುವುದು.

ಅರ್ಹ ವಿಶ್ವಕರ್ಮ ಜನಾಂಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮಾತ್ರ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಅಂಕಪಟ್ಟಿ ಜೆರಾಕ್ಸ್, ಜಾತಿ ದೃಢೀಕರಣ ಪತ್ರವನ್ನು ಅರ್ಜಿ ಜೊತೆ ಲಗತ್ತಿಸಿ ದೇವಸ್ಥಾನದ ಕಚೇರಿಯಲ್ಲಿ ಜು.10ರೊಳಗೆ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ. 9900665995 ಸಂಪರ್ಕಿಸಬಹುದು.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಜು. 4– ಮೈಸೂರು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ವಾರ್ಷಿಕ ಕ್ರೆಡಿಟ್ ಯೋಜನೆ 2022–23 ಬಿಡುಗಡೆ ಮತ್ತು ಮೈಸೂರು ಜಿಲ್ಲಾ ಬ್ಯಾಂಕುಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಜು. 7 ರಂದು ಮಧ್ಯಾಹ್ನ 12.30 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸಭೆಯಲ್ಲಿ ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್ ಮತ್ತು ಸುಮಲತಾ ಅಂಬರೀಷ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಜು. 4– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು. 7 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಕುವೆಂಪು ಸಿರಿಗನ್ನಡ ಸಾಹಿತ್ಯ ಪ್ರಶಸ್ತಿಗೆ ಸಾಹಿತಿ ಸತೀಶ್ ಜವರೇಗೌಡ ಆಯ್ಕೆ



ಮೈಸೂರು, ಜು. 4– ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ, ಸಾಹಿತಿ ಹಾಗೂ ಶಿಕ್ಷಕ ಟಿ. ಸತೀಶ್ ಜವರೇಗೌಡ ರಾಜ್ಯ ಮಟ್ಟದ 'ಕುವೆಂಪು ಸಿರಿಗನ್ನಡ ಸಾಹಿತ್ಯ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ ಎಂದು ಬೆಂಗಳೂರಿನ ಕುವೆಂಪು ಸಿರಿಗನ್ನಡ ವೇದಿಕೆ ಅಧ್ಯಕ್ಷ ವಿ.ಟಿ. ರಾಮಕೃಷ್ಣಯ್ಯ ತಿಳಿಸಿದ್ದಾರೆ. ಜು.10 ರಂದು ಅಪರಾಹ್ನ 3 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ನಡೆಯಲಿರುವ ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್‌ಕುಮಾರ್ ಎಸ್.ಹೊಸಮನಿ, ಖ್ಯಾತ ವೈದ್ಯ ಡಾ.ವಿ.ಎನ್. ಹೆಗಡೆ, ಖ್ಯಾತ ಸಾಹಿತಿ ವೈ.ಬಿ.ಹೆಚ್. ಜಯದೇವ್ ಕವಿ ಸಜಗೌ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕ್ರೈಂ ಬಾಕ್ಸ್

ದೇವಸ್ಥಾನ ಬಾಗಿಲು ಮುರಿದು ಬೆಳ್ಳಿ ಪದಾರ್ಥ ಕಳವು

ಮೈಸೂರು, ಜು.4– ಮೈಸೂರಿನ ಜೆ.ಪಿ.ನಗರ 'ಇ' ಬ್ಲಾಕ್‌ನಲ್ಲಿರುವ ವಿಠಲಧಾಮ ದೇವಸ್ಥಾನದ ಬಾಗಿಲನ್ನು ಗ್ಯಾಸ್ ಕಟರ್ ಮೂಲಕ ಮುರಿದು ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ದೇವಸ್ಥಾನದ ಅರ್ಚಕ ಭಾರತಿ ರಮಣಾಚಾರ್ ಅವರು ಜು.2ರಂದು ರಾತ್ರಿ ದೇವಸ್ಥಾನದ ಬಾಗಿಲು ಹಾಕಿಕೊಂಡು ಹೋಗಿದ್ದು, ಜು.3ರಂದು ಬೆಳಗ್ಗೆ ಬಂದಾಗ ಕಳವು ಪ್ರಕರಣ ಗೊತ್ತಾಗಿದೆ. ದೇವಸ್ಥಾನದ ಹೊರಗಿನ ಕಿಟಕಿಯನ್ನು ಗ್ಯಾಸ್ ಕಟರ್‌ನಿಂದ ಕಟ್ ಮಾಡಿ ಒಳನುಗ್ಗಿರುವ ಖದೀಮರು, ಗರ್ಭಗುಡಿಯ ಕೊಲಾಪ್ಸರ್ ಗೇಟ್‌ನ್ನು ಕೂಡ ಕಟ್ ಮಾಡಿ, ವಿಠಲ ದೇವರ ಬೆಳ್ಳಿ ಕವಚ, ಆರತಿ ತಟ್ಟೆಗಳು, ತೀರ್ಥದ ಚೆಂಬು, ಪೂಜಾ ಸಾಮಗ್ರಿಗಳು ಹಾಗೂ ಸ್ಟೀಲ್ ಹುಂಡಿ ಕಳವು ಮಾಡಿದ್ದಾರೆ ಎಂದು ದೇವಸ್ಥಾನದ ಕಾರ್ಯದರ್ಶಿ ಅಶೋಕ್ ಚಿಟಗುಪ್ಪಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕುಟುಕು ಕಾರ್ಯಾಚರಣೆ: ಖಾಸಗಿ ಚಾನೆಲ್ ಮುಖ್ಯಸ್ಥರ ವಿರುದ್ಧ ಪವಿತ್ರಾ ಲೋಕೇಶ್ ದೂರು



ಮೈಸೂರು, ಜು.4– ತನ್ನ ವಿರುದ್ಧ ಕುಟುಕು ಕಾರ್ಯಾಚರಣೆ ನಡೆಸಿದ ಖಾಸಗಿ ಸುದ್ದಿವಾಹಿನಿವೊಂದರ ಮುಖ್ಯಸ್ಥರ ವಿರುದ್ಧ ನಟಿ ಪವಿತ್ರಾ ಲೋಕೇಶ್ ದೂರು ದಾಖಲಿಸಿದ್ದಾರೆ.

ಖಾಸಗಿ ಸುದ್ದಿವಾಹಿನಿಯ ಮುಖ್ಯಸ್ಥರು ಜೂ.24ರಂದು ತನ್ನ ಮನೆಗೆ ಅನುಮತಿಯಿಲ್ಲದೆ ನುಗ್ಗಿ, ನಯವಾಗಿ ಮಾತನಾಡಿಸಿ ನನ್ನ ಅನುಮತಿಯಿಲ್ಲದೆ ನನ್ನ ಮಾತುಗಳನ್ನು ಕ್ಯಾಮರಾದಲ್ಲಿ ರೆಕಾರ್ಡ್ ಮಾಡಿಕೊಂಡು ರಮ್ಯಾ ರಘುಪತಿಭಟ್ ಎಂಬ ಮಹಿಳೆಯ ಉಪಯೋಗಕ್ಕಾಗಿ ಬಳಸಿಕೊಂಡು ಪ್ರಸಾರ ಮಾಡಿದ್ದಾರೆ. ನಂತರ ನಾನು ಎಲ್ಲಿಗೆ ಹೋದರೂ ನನ್ನ ವಾಹನವನ್ನು ಹಿಂಬಾಲಿಸುವುದು, ನಾನು ಜೀವನ ನಿರ್ವಹಿಸದ ಹಾಗೆ ನನ್ನ ಮಕ್ಕಳ ಫೋಟೋ ತೆಗೆಯುವುದು ಸೇರಿದಂತೆ ನಾನಾ ರೀತಿಯ ಹಿಂಸೆ ನೀಡುತ್ತಿದ್ದಾರೆ ಎಂದು ಪವಿತ್ರಾ ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 506, 448ರ ರೀತ್ಯಾ ದಾಖಲಿಸಿಕೊಂಡು ವಿವಿ ಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಯುಪಿಎಸ್ ಬ್ಯಾಟರಿ ಕಳವು

ಮೈಸೂರು, ಜು.4–ಮನೆಯ ಹೊರಗಿನ ಮೆಟ್ಟಿಲ ಕೆಳಗೆ ಅಳವಡಿಸಿದ್ದ ಯುಪಿಎಸ್ ಬ್ಯಾಟರಿ ಕಳವು ಮಾಡಿರುವ ಬಗ್ಗೆ ಮೈಸೂರಿನ ಕಲ್ಯಾಣಗಿರಿಯಿಂದ ವರದಿಯಾಗಿದೆ. ಅಲ್ಲಿನ 4ನೇ ಕ್ರಾಸ್ ನಿವಾಸಿ ಕೆ.ಎಲ್.ಶೌಕತ್ ಪಾಷ ಎಂಬುವರು ತಮ್ಮ ಮನೆಯ ಹೊರಗಿನ ಮೆಟ್ಟಿಲುಗಳ ಕೆಳಗೆ ಯುಪಿಎಸ್ ಬ್ಯಾಟರಿ ಅಳವಡಿಸಿದ್ದರು. ಜು.2ರಂದು ವಿದ್ಯುತ್ ಕಡಿತಗೊಂಡಾಗ ಯುಪಿಎಸ್ ಕಾರ್ಯನಿರ್ವಹಿಸಿಲ್ಲವೆಂದು ಗಮನಿಸಿದಾಗ ಯುಪಿಎಸ್‌ನ ಬ್ಯಾಟರಿ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಎಸಿಬಿ ವಿರುದ್ಧ ಅಪಪ್ರಚಾರ: ವಾಟ್ಸಾಪ್ ಗ್ರೂಪ್ ಅಡ್ಮಿನ್‌ಗಳ ವಿರುದ್ಧ ಕೇಸ್ ದಾಖಲು

ಮೈಸೂರು, ಜು.4– ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದ ವಿರುದ್ಧ ಅಪಪ್ರಚಾರದ ಸಂದೇಶ ರವಾನೆಯಾದ ಆರೋಪದ ಮೇರೆಗೆ ಎರಡು ವಾಟ್ಸಾಪ್ ಗ್ರೂಪ್‌ಗಳ ಅಡ್ಮಿನ್‌ಗಳ ವಿರುದ್ಧ ಎನ್.ಆರ್.ಠಾಣೆ ಪೊಲೀಸರು ನ್ಯಾಯಾಲಯದ ಅನುಮತಿ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಎಸಿಬಿ ಇನ್ಸ್‌ಪೆಕ್ಟರ್ ಚಿತ್ತರಂಜನ್ ಅವರು ಈ ಸಂಬಂಧ ದೂರು ನೀಡಿದ್ದು, ವಿಎಲ್‌ಜಿಪಿ ಮತ್ತು ಮೈಸೂರು ಡಿಸಿಆರ್‌ಇ ಎಂಬ ಎರಡು ವಾಟ್ಸಾಪ್ ಗ್ರೂಪ್‌ಗಳಲ್ಲಿ ಎಸಿಬಿ ಕಾರ್ಯವೈಖರಿಯ ಬಗ್ಗೆ ಅಪಪ್ರಚಾರದ ಸಂದೇಶಗಳನ್ನು ರವಾನೆ ಮಾಡಲಾಗುತ್ತಿತ್ತು. ಎಸಿಬಿ ಘಟಕ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲು ಅಡ್ಡಿಪಡಿಸುವ ಉದ್ದೇಶದಿಂದ ಈ ವಾಟ್ಸಾಪ್ ಗ್ರೂಪ್‌ಗಳಲ್ಲಿ ಎಸಿಬಿ ಹಿರಿಯ ಅಧಿಕಾರಿಗಳು ಮತ್ತು ಎಸಿಬಿ ಬಗ್ಗೆ ತಪ್ಪು ಸಂದೇಶಗಳನ್ನು ಸಾರ್ವಜನಿಕರಿಗೆ ರವಾನೆ ಮಾಡಲಾಗುತ್ತಿದೆ. ಹೀಗಾಗಿ ಈ ಗ್ರೂಪ್‌ಗಳಿಗೆ ಸಂದೇಶ ರವಾನೆ ಮಾಡಿರುವವರು ಮತ್ತು ಅಡ್ಮಿನ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಕೋರಿದ್ದರು. ಈ ದೂರಿನ ಬಗ್ಗೆ ನ್ಯಾಯಾಲಯದ ಅನುಮತಿ ಪಡೆದ ನಂತರ ಎನ್.ಆರ್.ಠಾಣೆ ಪೊಲೀಸರು ಎರಡು ವಾಟ್ಸಾಪ್ ಗ್ರೂಪ್‌ಗಳ ಅಡ್ಮಿನ್‌ಗಳ ವಿರುದ್ಧ ಭಾರತೀಯ ದಂಡ ಸಂಹಿತೆ 504, 505, 507ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಸ ಸುರಿಯಲು ಬಂದ ಮಹಿಳೆ ಸರಕಳವು

ಮೈಸೂರು, ಜು.4– ಕಸ ಸುರಿಯಲು ಹೋದ ಮಹಿಳೆಯ ಚಿನ್ನದ ಸರವನ್ನು ಸರಗಳ್ಳರು ಕಿತ್ತುಕೊಂಡು ಹೋದ ಘಟನೆ ಮೈಸೂರಿನ ಉತ್ತರಾದಿ ಮಠ ರಸ್ತೆಯಲ್ಲಿ ನಡೆದಿದೆ. ಈ ರಸ್ತೆಯ ನಿವಾಸಿ ಎಸ್. ಮಂಜುಳ (42) ಟೈಲರ್ ವೃತ್ತಿ ಮಾಡುತ್ತಿದ್ದು, ಜು.1ರಂದು ರಾತ್ರಿ 10.15ರ ವೇಳೆಯಲ್ಲಿ ತಮ್ಮ ಪುತ್ರಿ ಕೆ. ರಕ್ಷಿತಾ ಜೊತೆ ಕಸ ಸುರಿಯುವ ಸಲುವಾಗಿ ಹೊರ ಬಂದಿದ್ದಾರೆ. ಕಸ ಸುರಿದು ಮನೆಗೆ ಹಿಂತಿರುಗುತ್ತಿದ್ದ ವೇಳೆ ಉತ್ತರಾದಿ ಮಠ ರಸ್ತೆಯ ಶ್ರೀಕಾಂತ ಸ್ಕೂಲ್ ಬಳಿ ಸ್ಕೂಟರ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಅವರ ಕತ್ತಿನಲ್ಲಿದ್ದ 15 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಜು.2ರಂದು ಮಂಜುಳಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಜು. 4–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿರುವ ಪ್ರತಿಭಾವಂತ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜು. 16 ರೊಳಗೆ ಸಲ್ಲಿಸಲು ಕೋರಲಾಗಿದೆ. ಸಿ. ಮಹದೇವಪ್ರಸಾದ್, ಮೊ. 9449030588

ಅಂಬೇಡ್ಕರ್ ಅಭಿವೃದ್ಧಿ ನಿಗಮವೂ ಸೇರಿ ವಿವಿಧ ನಿಗಮ ರದ್ದಿಗೆ ಸರ್ಕಾರ ಹುನ್ನಾರ ಆರೋಪ; ಪ್ರತಿಭಟನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜು.4(ಪಿಎಂ)– ಸಾರ್ವಜನಿಕ ಉದ್ದಿಮೆಗಳ ಇಲಾಖೆ ರದ್ದುಪಡಿಸಿರುವ ರಾಜ್ಯ ಸರ್ಕಾರ, ಆ ಮೂಲಕ ಇದರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ತಳ ಸಮುದಾಯ ಮತ್ತು ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಸ್ಥಾಪನೆಯಾದ ವಿವಿಧ ನಿಗಮಗಳನ್ನು ರದ್ದುಪಡಿಸಲು ಹುನ್ನಾರ ನಡೆಸಿದೆ ಎಂದು ಆರೋಪಿಸಿ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಹಿಂದಿನ ಸರ್ಕಾರಗಳ ಅವಧಿಯಲ್ಲಿ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ರಚಿಸಿದ್ದ ನಿಗಮಗಳನ್ನು ರಾಜ್ಯ ಬಿಜೆಪಿ ಸರ್ಕಾರ ರದ್ದುಪಡಿಸಲು ಹುನ್ನಾರ ನಡೆಸಿದೆ. ಆ ಮೂಲಕ ಬಡವರನ್ನೇ ನಿರ್ಮೂಲನೆ ಮಾಡಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ಒಂದೊಂದಾಗಿ ಖಾಸಗೀಕರಣದ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದು, ಆ ಮೂಲಕ ಮೀಸಲಾತಿ ರದ್ದು ಮಾಡುವ ಹುನ್ನಾರ ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ರಾಜ್ಯ ಬಿಜೆಪಿ ಸರ್ಕಾರವೂ ನಡೆದುಕೊಳ್ಳುತ್ತಿದೆ ಎಂದು ಆಪಾದಿಸಿದರು.

ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಅಧೀನದಲ್ಲಿ ವಿವಿಧ ಸೇವಾ ಕ್ಷೇತ್ರದ ನಿಗಮಗಳೂ ಸೇರಿದಂತೆ ಹಲವು ಸಾರ್ವಜನಿಕ ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡರೂ ನಮ್ಮದೇನೂ ಆಕ್ಷೇಪವಿಲ್ಲ. ಆದರೆ ಸೇವಾ ಕ್ಷೇತ್ರದ ನಿಗಮಗಳನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು ಎಂದು ಒತ್ತಾಯಿಸಿದರು. ಇದೀಗ ಸದರಿ ಇಲಾಖೆ ರದ್ದುಪಡಿಸಿರುವ ಸರ್ಕಾರ, ಈ ಇಲಾಖೆ ನಿರ್ವಹಿಸುತ್ತಿದ್ದ ಕಾರ್ಯಗಳನ್ನು ಆರ್ಥಿಕ ಇಲಾಖೆಗೆ ವರ್ಗಾಯಿಸಿದೆ. ಆ ಮೂಲಕ ಸೇವಾ ಕ್ಷೇತ್ರದ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ನಿಗಮ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಗಳನ್ನು ಮುಚ್ಚಲು ಹುನ್ನಾರ ನಡೆಸಿದೆ ಎಂದು ದೂರಿದರು. ಒಕ್ಕೂಟದ ಸಂಚಾಲಕ ಪಿ.ರಾಜು, ಮುಖಂಡರಾದ ವಿಜಯಕುಮಾರ್, ಕೆ.ಶಿವಕುಮಾರ್, ಮಹೇಶ್, ಎಸ್.ಸಿದ್ದಪ್ಪಾಜಿ, ಎಂ.ಎ.ಕಮಲಾ, ಬಿ.ಅಂಕಣ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪಿಎಚ್.ಡಿ ಪದವೀಧರರು

ಅಬ್ದುಲ್ ಮಜೀದ್



ಮೈಸೂರು, ಜು. 4–ಡಾ.ಪೂರ್ಣಿಮಾ ಪ್ರಿಯದರ್ಶಿನಿ ಸಿ.ಜಿ. ಅವರ ಮಾರ್ಗದರ್ಶನದಲ್ಲಿ ಅಬ್ದುಲ್ ಮಜೀದ್ ಅವರು ಜೀವರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎಚ್.ಎಂ.ಮಣಿಕಂಠ



ಡಾ. ವಿಜಯಕುಮಾರಿ ಎಸ್.ಕರಿಕಲ್ ಅವರ ಮಾರ್ಗದರ್ಶನದಲ್ಲಿ ಎಚ್.ಎಂ. ಮಣಿಕಂಠ ಅವರು ಜೀವ ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕೆ.ತ್ರಿವೇಣಿ



ಡಾ. ಟಿ.ವಿ. ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಕೆ.ತ್ರಿವೇಣಿ ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಿ.ಅಶ್ವಿನಿ



ಡಾ.ಜೆ.ರಾಜೇಶ ಅವರ ಮಾರ್ಗದರ್ಶನದಲ್ಲಿ ಬಿ. ಅಶ್ವಿನಿ ಅವರು ಜೈವಿಕ ತಂತ್ರಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ



ಪಿ.ಎನ್.ಗೋದಾವರಿಬಾಯಿ

ಮೈಸೂರು, ಜು.4– ಮೈಸೂರಿನ ತಿಲಕ್‌ನಗರದ ವೆಸ್ಲಿ ಮುಖ್ಯ ರಸ್ತೆಯ ನಿವಾಸಿ ಲೇ.ಪಿ.ಆರ್.ನಾಗೇಶ್‌ರಾವ್ ಪತಂಗೆ ಅವರ ಪತ್ನಿ ಪಿ.ಎನ್.ಗೋದಾವರಿಬಾಯಿ (93) ಅವರು ಸೋಮವಾರ ಸಂಜೆ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ಪಾದದ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.07.2022 ಮಂಗಳವಾರ, ಮಳೆ ನಕ್ಷತ್ರ : ಆರ್ದ್ರ, 22.06.2022 ರಿಂದ 05.07.2022

ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ

ತಿಥಿ: ಷಷ್ಠೀ, ನಕ್ಷತ್ರ : ಪೂಷ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ–2022, ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಭಾಷಾಶಾಸ್ತ್ರ ಮತ್ತು ಭಾಷಾಂತರ ಕುರಿತು ರಾಷ್ಟ್ರ ಮಟ್ಟದ ಒಂದು ದಿನದ ಕಾರ್ಯಾಗಾರ, ಉದ್ಘಾಟನೆ : ಲೇಖಕ ಪ್ರೊ. ಸಿ. ನಾಗಣ್ಣ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಉಪಸ್ಥಿತರು : ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಸಂತ ಫಿಲೋಮಿನಾ ಕಾಲೇಜು, ನವಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ರಿಂದ

■ **ಶಾರದಾ ವಿಲಾಸ ಕಾನೂನು ಕಾಲೇಜು :** ವಿದ್ಯಾರ್ಥಿ ಸಾಂಸ್ಕೃತಿಕ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಪ್ರೊ. ಕೃಷ್ಣೇಗೌಡ, ಅಧ್ಯಕ್ಷತೆ : ಶಾರದಾ ವಿಲಾಸ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಉಪಸ್ಥಿತರು : ಕಾರ್ಯದರ್ಶಿ ಎನ್. ಚಂದ್ರಶೇಖರ್, ಶೈಕ್ಷಣಿಕ ಸಲಹೆಗಾರ ಡಾ. ಎಂ.ಎನ್. ಭೀಮೇಶ್, ಸ್ಥಳ: ವೆಂಕಟಕೃಷ್ಣಯ್ಯ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ಭಾವಗೀತೆ, 6.50 ವನಮಹೋತ್ಸವ, ಪ್ರಾಯೋಜಕರು– ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.30 ವೃತ್ತಿ ಮಾರ್ಗದರ್ಶನ–ಶುಶ್ರೂಷಾ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಪರಮೇಶ್ ಎ.ಇ. ಅವರೊಂದಿಗೆ ಮಾತುಕತೆ, 10.00 ಗಾನ ರಸೋತ್ತುಂಗ ಶ್ರೀಶ್ಯಾಮಕೃಷ್ಣ –ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ

ಮಧ್ಯಾಹ್ನ: 12.05ವನಿತಾ ವಿಹಾರ, ಸ್ತ್ರೀಚೇತನ–ಲಿಂಗತ್ವ ಅಲ್ಪ ಸಮುದಾಯಕ್ಕೆ ಸೇರಿದ ದೀಪಾಬುದ್ದೆ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಶಬಾನಾ, 12.30 ದೇವರನಾಮ–ಪುಷ್ಪಾ ವಿ. ಶಂಕರ್, 12.45 ಓದುವ ಹವ್ಯಾಸ–ಮಾತನಾಡುವವರು ಬೆಟ್ಟಸ್ವಾಮಿ ಹೆಚ್.ಬಿ., 1.20 ಭಾವಗೀತೆ–ಅಮೃತಾ ನಿತಿನ್ ಶಾಸ್ತ್ರಿ, 3.00 ಹೆಚ್.ಟಿ. ಹರೀಶ್–ಸ್ಯಾಕ್ಸೋಫೋನ್ ವಾದನ, 4.00 ಕಥಾ ಕಾಲಕ್ಷೇಪ "ಶ್ರೀ ಸುಬ್ರಹ್ಮಣ್ಯೇಶ್ವರ", ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ– ಕಿಸಾನ್‌ವಾಣಿ, ಜಾನುವಾರು ವಿಮಾ ಯೋಜನೆಯ ಸೌಲಭ್ಯಗಳು ಕುರಿತು ಡಾ.ಬಿ.ಎನ್. ಷಡಕ್ಷರಮೂರ್ತಿ ಅವರೊಂದಿಗೆ ಸಂದರ್ಶನ, 9.30 ಎನ್.ಆರ್. ಪ್ರಶಾಂತ್ – ಹಾಡುಗಾರಿಕೆ, 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪಾತ್ರ ಸ್ಟ್ರೈಕೆ, ನಿರ್ಮಾಣ– ದಿವಾಕರ್ ಹೆಗಡೆ, 10.30 ಸವಿನೆನಪು

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಡಾ. ವೇದವ್ಯಾಸಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮೀಣಿಶ ವಿಜಯ'ದ ವಿಶೇಷ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ: 6.30ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಅರಮನೆ ಆವರಣದಲ್ಲಿರುವ ಕೋಟೆ ತ್ರಿಣೇಶ್ವರ ದೇವಾಲಯದಲ್ಲಿ ಬುಧಕಾಲ ಹೊರೆಯಲ್ಲಿ ವರಪೂಜಾ ಮಹೋತ್ಸವ, ಸಂಜೆ 7.30ಕ್ಕೆ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 8ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ. ರಾಮದಾಸ್, ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರಂಪೂರೆ, ವಿಠ್ಠಲ ರುಕ್ಮಿಣಿ ಕನ್ವೆನ್ಷನ್ ಹಾಲ್ ಅಧ್ಯಕ್ಷ ಜಯರಾಮ್ ರಾವ್ ಲಾಳಿಗೆ, ಭಾವಸಾರ ಕ್ಷತ್ರಿಯ ಸೊಸೈಟಿ ಅಧ್ಯಕ್ಷ ದಯಾಶಂಕರ್ ಲಾಲೆ, ಕುವೆಂಪುನಗರ ಪೊಲೀಸ್ ಠಾಣೆ ಷಣ್ಮಗವರ್ಮ, ಪ್ರತಿಭಾ ಪುರಸ್ಕಾರ, ಸ್ಥಳ : ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಸಿಐಟಿಬಿ 2ನೇ ಹಂತ, ಸಂಜೆ 7ಕ್ಕೆ

ಹಳ್ಳಿಗಳಲ್ಲಿ ಅಕ್ರಮ ಮದ್ಯದ ಅಮಲು!

● ಕಣ್ಣೀರು ಹಾಕುತ್ತಿರುವ ಮಹಿಳೆಯರು, ಮಕ್ಕಳು ● ಅಕ್ರಮ ಪತ್ತೆ ಹಚ್ಚಿ ಕ್ರಮ ಕೈಗೊಳ್ಳದಿದ್ದರೆ ಕಠಿಣ ಕ್ರಮ ● ಅಬಕಾರಿ ಅಧಿಕಾರಿಗಳಿಗೆ ಶಾಸಕ ಜಿ.ಟಿ.ಡಿ ಎಚ್ಚರಿಕೆ



ಮೈಸೂರು,ಜು.4(ಆರ್‌ಕೆಬಿ)–ಹಳ್ಳಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿರುವ ಬಗ್ಗೆ ದೂರುಗಳಿದ್ದು, ಹಳ್ಳಿಗಳಿಗೆ ಎಲ್ಲಿಂದ ಅಕ್ರಮ ಮದ್ಯ ಸರಬರಾಜು ಆಗುತ್ತಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸೋಮವಾರ ಅಬಕಾರಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು.

ಮೈಸೂರಿನ ಜಿಪಂ ಸಭಾಂಗಣದಲ್ಲಿ ಮೈಸೂರು ತಾಲೂಕು ಕೆಡಿಪಿ ಪ್ರಗತಿ ಪರಿಶೀಲನೆ ವೇಳೆ ವಿಷಯವನ್ನು ಪ್ರಸ್ತಾಪಿಸಿದ ಶಾಸಕ ಜಿ.ಟಿ.ದೇವೇಗೌಡ ಅವರು ಹಳ್ಳಿಗಳಿಗೆ ಮದ್ಯ ಹೇಗೆ ಹೋಗುತ್ತಿದೆ. ರೀಟೈಲ್ ಶಾಪ್‌ಗಳಿಂದ ಹಳ್ಳಿಗಳಿಗೆ ಹೋಗುತ್ತಿದೆಯೇ? ಅದಕ್ಕೆ ಹೇಗೆ ಅವಕಾಶ ನೀಡಿದ್ದೀರಿ? ಒಮ್ಮೆಯಾದರೂ ಹೋಗಿ ಪರಿಶೀಲನೆ ನಡೆಸಿದ್ದೀರಾ? ಎಂದು ಅಬಕಾರಿ ಅಧಿಕಾರಿಯನ್ನು ಪ್ರಶ್ನಿಸಿದರು.

ಇದಕ್ಕೆ ಅಬಕಾರಿ ಅಧಿಕಾರಿ ಹೆಚ್.ಕೆ.ಅನುಷ್ ಉತ್ತರಿಸಲು ಮುಂದಾದರು. ಆಗ ಕೆರಳಿದ ಶಾಸಕರು ಹಳ್ಳಿಗಳಲ್ಲಿ ಮಹಿಳೆಯರು, ಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ಇವೆಲ್ಲವೂ ನಿಮ್ಮ ಗಮನಕ್ಕೇಕೆ ಬಂದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ರೀಟೈಲ್ ಅಂಗಡಿಗಳಿಂದ ಅಕ್ರಮವಾಗಿ ಹಳ್ಳಿಗಳಿಗೆ ಮದ್ಯ ಸರಬರಾಜು ಯಾರು ಮಾಡುತ್ತಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ, ಅಂಥವರ ಪಟ್ಟಿ ತಯಾರಿಸಿ ಕಠಿಣ ರೀತಿಯಲ್ಲಿ ಕ್ರಮ ಕೈಗೊಳ್ಳದಿದ್ದರೆ ನಿಮ್ಮ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಶಾಲಾ ಮಕ್ಕಳಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಿಲ್ಲ: ಕೋವಿಡ್ ನಂತರ ಬಹುತೇಕ ಎಲ್ಲಾ ಶಾಲೆಗಳು ಆರಂಭವಾಗಿವೆ. ಈಗ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ಕೋವಿಡ್‌ಗೂ ಮೊದಲು ಬಸ್‌ಗಳು ಹೇಗೆ ಸಂಚರಿಸುತ್ತಿದ್ದವೋ ಅಷ್ಟು ಬಸ್‌ಗಳು ಈಗ ಸಂಚರಿಸುತ್ತಿಲ್ಲ. ಶೇ.50ರಷ್ಟು ಬಸ್‌ಗಳು ಸಂಚರಿಸುತ್ತಿಲ್ಲ ಎಂಬ ದೂರಿದೆ. ಈ ಹಿಂದಿನಂತೆಯೇ ಬಸ್ ವ್ಯವಸ್ಥೆ ಆರಂಭಿಸಿ, ಶಾಲಾ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ಹೆಚ್ಚು ಬಸ್‌ಗಳನ್ನು ಓಡಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಸೂಚನೆ ನೀಡಿದರು.

ರೈತರಿಗೆ ಕೊರತೆಯಾಗದಂತೆ ನೋಡಿಕೊಳ್ಳಿ: ಕೃಷಿ ಇಲಾಖೆಯ ಕಚೇರಿಗಳಲ್ಲಿ ಬಿತ್ತನೆ ಬೀಜ, ರಸಗೊಬ್ಬರದ ಕೊರತೆ ಬಗ್ಗೆ ಕೃಷಿ ಅಧಿಕಾರಿಯನ್ನು ಪ್ರಶ್ನಿಸಿದ ಶಾಸಕ ಜಿ.ಟಿ.ದೇವೇಗೌಡರು, ಮಳೆ ಉತ್ತಮವಾಗಿ ಬೀಳುತ್ತಿದೆ. ರೈತರಿಗೆ ಯಾವುದೇ ಕಾರಣಕ್ಕೂ ಬಿತ್ತನೆ ಬೀಜ, ರಸಗೊಬ್ಬರದ ಕೊರತೆ ಆಗದಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ತಾಲೂಕಿನಲ್ಲಿ ಕೃಷಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತಕ್ಷಣ ಪರಿಹರಿಸಲು ಕ್ರಮ ಕೈಗೊಳ್ಳಿ, ಅಲ್ಲದೆ ಕೊರತೆಯಿರುವ ಬಿತ್ತನೆ ಬೀಜ, ರಸಗೊಬ್ಬರದ ಅಗತ್ಯತೆ ಕುರಿತಂತೆ ಸಂಜೆಯೊಳಗೆ ಪಟ್ಟಿ ನೀಡುವಂತೆ ಕೃಷಿ ಸಹಾಯಕ ಅಧಿಕಾರಿಗೆ ಸೂಚಿಸಿದರು.

ಕೋವಿಡ್ ನಂತರ ಅಂಗನವಾಡಿಗಳಲ್ಲಿ ಮಕ್ಕಳ ಸಂಖ್ಯೆ ಎಷ್ಟಿದೆ. ಮಕ್ಕಳನ್ನು ಅಂಗನವಾಡಿಗಳಿಗೆ ಕರೆಸುವ ಕೆಲಸ ಈಗ ಆಗುತ್ತಿಲ್ಲ. ತಾಲೂಕು ಅಧಿಕಾರಿಗಳು ಆ ಕೆಲಸ ಮಾಡಬೇಕು. ಪೋಷಕರ ಮನವೊಲಿಸಿ ಮಕ್ಕಳನ್ನು ಅಂಗನವಾಡಿ ಕೇಂದ್ರಗಳಿಗೆ ಕಳಿಸುವಂತೆ ಪೋಷಕರ ಮನವೊಲಿಸುವ ಕೆಲಸ ಸರಿಯಾಗಿ ಆಗಬೇಕು ಎಂದು ಶಾಸಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ಅಧಿಕಾರಿಗೆ ತಾಕೀತು ಮಾಡಿದರು.

ಮಕ್ಕಳಿಗೆ ಲಸಿಕೆ: ತಾಲೂಕಿನಲ್ಲಿ 12ರಿಂದ 14 ವರ್ಷದೊಳಗಿನ ಶೇ.95ರಷ್ಟು ಮಕ್ಕಳಿಗೆ ಕೋವಿಡ್ ಲಸಿಕೆ ನೀಡಲಾಗಿದೆ. 15,557 ಮಂದಿಗೆ ಲಸಿಕೆ ನೀಡಿದ್ದು, ಇನ್ನೂ 800 ಮಕ್ಕಳಿಗೆ ಲಸಿಕೆ ನೀಡಬೇಕಿದೆ. ಹಳ್ಳಿಗೊಂದು ಮಾದರಿ ಶಾಲೆ ಯೋಜನೆಯಡಿ ನಾಲ್ಕು ಶಾಲೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ಬಿಇಒ ಪರವಾಗಿ ಗಣೇಶ್‌ಪ್ರಸಾದ್ ಸಭೆಗೆ ಮಾಹಿತಿ ನೀಡಿದರು.

ತಾಲೂಕಿನಲ್ಲಿ 60 ಶಾಲಾ ಕಟ್ಟಗಳನ್ನು ನೆಲಸಮ ಮಾಡಿ ಮರು ನಿರ್ಮಾಣಕ್ಕೆ ಹಾಗೂ ಹೆಚ್ಚುವರಿ ಕೊಠಡಿ ದುರಸ್ತಿಗೆ ಕ್ರಮ ಕೈಗೊಂಡಿದ್ದೇವೆ. ಅದಕ್ಕೆ ಅನುದಾನದ ಅಗತ್ಯವಿದೆ ಎಂದು ಮನವಿ ಮಾಡಿದರು. ಸಭೆಯಲ್ಲಿ ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಪಂ ಉಪ ಕಾರ್ಯದರ್ಶಿ ಡಾ.ಎಸ್.ಪ್ರೇಮ್‌ಕುಮಾರ್, ಕೆಡಿಪಿ ನಾಮನಿರ್ದೇಶಿತ ಸದಸ್ಯರಾದ ಡಿ.ಎಂ.ರೇವಣ್ಣ, ಗಣೇಶ, ವಿ.ರಂಗಸ್ವಾಮಿ, ವಿನ್ಸೆಂಟ್ ಬ್ರಿಂಟೋ, ವಿರೂಪಾಕ್ಷಮ್ಮ, ತಾಪಂ ಇಓ ಎಂ.ಎಸ್.ರಮೇಶ್, ಕೆ.ಎಂ.ರಘುನಾಥ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ನಡೆದ ತಾಲೂಕು ಕೆಡಿಪಿ ಪರಿಶೀಲನೆ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ, ಅಬಕಾರಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಎಂಎಲ್‌ಸಿ ಸಿ.ಎನ್.ಮಂಜೇಗೌಡ ಇನ್ನಿತರರಿದ್ದಾರೆ.

ಒಂದೇ ದಿನ 17 ರೈತರ ಜಮೀನಲ್ಲಿ ಕೇಬಲ್, ಸ್ಟಾರ್ಟರ್ ಕಳವು

ಮೈಸೂರು,ಜು.4–ಮೈಸೂರು ತಾಲೂಕು ಜಯಪುರ ಹೋಬಳಿ ಮದ್ದೂರು ಗ್ರಾಮದಲ್ಲಿ ಖದೀಮರು ಒಂದೇ ದಿನ 17 ರೈತರ ಜಮೀನುಗಳಲ್ಲಿ ಒಟ್ಟು 385 ಮೀ. ಕೇಬಲ್ ಮತ್ತು 2 ಸ್ಟಾರ್ಟರ್‌ಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಜು.1ರಂದು ರಾತ್ರಿ ಖದೀಮರು ನಾಗೇಗೌಡ, ಶಿವರಾಜೇಗೌಡ, ಮಾದೇಗೌಡ, ಮಹದೇವಪ್ಪ, ಮಲ್ಲುಗೌಡ, ದೇವೇಶೆಗೌಡ, ಮಲ್ಲೇಗೌಡ, ಬೆಟ್ಟಶೆಟ್ಟಿ, ಸುಬ್ಬಶೆಟ್ಟಿ, ಚಿಕ್ಕರಾಮಪ್ಪ, ನಂಜಮ್ಮ, ನಾಗೇಗೌಡ, ರಾಮೇಗೌಡ, ಶಿವಮಲ್ಲಪ್ಪ ಮಹೇಶ, ಪುಟ್ಟಸ್ವಾಮಪ್ಪ ಮತ್ತು ಶಿವನಂಜಯ್ಯ ಎಂಬುವರ ಜಮೀನುಗಳಲ್ಲಿ ಅಳವಡಿಸಿದ್ದ ಕೇಬಲ್ ಮತ್ತು ಸ್ಟಾರ್ಟರ್‌ಗಳನ್ನು ಕಳವು ಮಾಡಿದ್ದು, ಈ ಸಂಬಂಧ ಗುರುಸ್ವಾಮಿ ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಆರಾಧ್ಯ ಮಹಾಸಭಾದ ನಿರ್ದೇಶಕರ ಆಯ್ಕೆ

ಮೈಸೂರು, ಜು. 4– ನಿನ್ನೆ (ಭಾನುವಾರ) ನಡೆದ ಚುನಾವಣೆಯಲ್ಲಿ ಮೈಸೂರಿನ ಚಾಮುಂಡಿಪುರಂನ ಆರಾಧ್ಯ ಮಹಾಸಭಾದ ನಿರ್ದೇಶಕರಾಗಿ ಮೂರು ವರ್ಷಗಳ ಅವಧಿಗೆ ಕೆಳಕಂಡವರು ಆಯ್ಕೆಯಾಗಿದ್ದಾರೆ. ಅಶೋಕಾರಾಧ್ಯ, ಚನ್ನವೀರಾರಾಧ್ಯ, ಚನ್ನವೀರಣ್ಣಾರಾಧ್ಯ, ಚಂದ್ರಶೇಖರ ಆರಾಧ್ಯ, ಡಿ.ಎಂ.ನಟರಾಜು, ಪಿ.ನಾಗಭೂಷಣ ಆರಾಧ್ಯ, ಪಿ.ನಾಗರತ್ನ, ನಂಜುಂಡರಾಧ್ಯ, ಪುಟ್ಟಸೋಮಾರಾಧ್ಯ, ಭೋಗಮಲ್ಲಾರಾಧ್ಯ ಟಿ.ಜಿ., ಮಹೇಶ್ವರಾರಾಧ್ಯ, ಜಿ.ಆರ್.ವಿಜಯಸ್ವಾಮಿ, ಶಶಿಶೇಖರ್, ಕೆ.ಬಿ.ಸಿದ್ದರಾಮಾರಾಧ್ಯ ಆಯ್ಕೆಯಾಗಿದ್ದಾರೆ.

ರಸ್ತೆ ಸಾರಿಗೆ ನೌಕರರ ಸಹಕಾರ ಸಂಘಕ್ಕೆ ಆಯ್ಕೆ

ಮೈಸೂರು: ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಮಾದೇಶ್, ಉಪಾಧ್ಯಕ್ಷರಾಗಿ ಕೆ.ಮಹದೇವಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕ್ಷೇತ್ರದ ಜನರೊಂದಿಗೆ ಚರ್ಚಿಸಿ ಮುಂದಿನ ರಾಜಕೀಯ ನಡೆ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಪುನರುಚ್ಚಾರ

ಮೈಸೂರು: ಎರಡು ತಿಂಗಳ ನಂತರ ಕ್ಷೇತ್ರದ ಜನರ ಸಭೆ ಕರೆದು ಚರ್ಚಿಸಿ ನನ್ನ ಮುಂದಿನ ನಡೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಾಗಿ ಶಾಸಕ ಜಿ.ಟಿ.ದೇವೇಗೌಡ ಪುನರುಚ್ಚರಿಸಿದರು. ಮೈಸೂರು ಜಿಪಂ ಸಭಾಂಗಣದಲ್ಲಿ ತಾಲೂಕು ಕೆಡಿಪಿ ಸಭೆಯಲ್ಲಿ ಪಾಲ್ಗೊಳ್ಳುವ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕ್ಷೇತ್ರದ ಜನರ ಸಮ್ಮುಖದಲ್ಲಿ ಮುಕ್ತ ಚರ್ಚೆ ನಡೆಸಿ, ಅವರ ಅಭಿಪ್ರಾಯದಂತೆ ಮುಂದಿನ ನಿರ್ಧಾರ ಪ್ರಕಟಿಸುತ್ತೇನೆ. ಇದರಲ್ಲಿ ಯಾವುದೇ ಗೊಂದಲ ಇಲ್ಲ ಎಂದರು.

ಕಳೆದ 3 ವರ್ಷದಿಂದ ಪಕ್ಷದ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸಿಲ್ಲ. 5 ವರ್ಷ ನಾನು ಜೆಡಿಎಸ್ ಶಾಸಕನಾಗಿರಲು ಜನ ಮತ ನೀಡಿದ್ದಾರೆ. ಹೀಗಾಗಿ ಯಾವುದೇ ಚುನಾವಣೆಯಲ್ಲಿ ಪಕ್ಷ ವಿಪ್ ಕೊಡಲಿ ಬಿಡಲಿ, ನಾನು ಜೆಡಿಎಸ್ ಪರವಾಗಿ ಮತ ಹಾಕುತ್ತೇನೆ. ಏಕೆಂದರೆ ನನ್ನ ಆತ್ಮಸಾಕ್ಷಿಗೆ ದ್ರೋಹ ಬಗೆಯುವ ಕೆಲಸ ಎಂದೂ ಮಾಡುವುದಿಲ್ಲ ಎಂದು ಹೇಳಿದರು.

ರಾಜಣ್ಣ ಬಹಿರಂಗ ಕ್ಷಮೆ ಕೇಳಲು ಜಿಟಿಡಿ ಆಗ್ರಹ: ಹೆಚ್.ಡಿ.ದೇವೇಗೌಡರ ಬಗ್ಗೆ ಮಾಜಿ ಮಾಜಿ ಶಾಸಕ ರಾಜಣ್ಣ ವಿವಾದಾತ್ಮಕ ಹೇಳಿಕೆ ವಿಚಾರ ಕುರಿತು ಪ್ರಸ್ತಾಪಿಸಿದ ಅವರು, ಹೆಚ್.ಡಿ.ದೇವೇಗೌಡರ ಬಗ್ಗೆ ಕನ್ನಡಿಗರಿಗೆ ವಿಶೇಷವಾದ ಅಪಾರ ಪ್ರೀತಿ, ವಿಶ್ವಾಸ, ಗೌರವವಿದೆ. ರಾಜ್ಯದ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ಕಡಿಮೆ ಅವಧಿಯಲ್ಲಿ ಅಪಾರ ಸೇವೆ ಮಾಡಿದ್ದಾರೆ. ಹಾಲಿ ಹಾಗೂ ಮಾಜಿ ಪ್ರಧಾನಿಗಳೂ ಹೆಚ್.ಡಿ.ದೇವೇಗೌಡರ ಸೇವೆಯನ್ನು ಪ್ರಶಂಶಿಸಿ, ಗೌರವಿಸಿದ್ದಾರೆ. ಅಂತಹ ಧೀಮಂತ ರಾಜಕಾರಣಿ ದೇವೇಗೌಡರ ಬಗ್ಗೆ ಮಾಜಿ ಸಚಿವ ರಾಜಣ್ಣ ಹೇಳಿಕೆ ಸರಿಯಲ್ಲ. ಅವರ ಬಾಯಿಂದ ಇಂತಹ ಮಾತು ಯಾರೂ ನಿರೀಕ್ಷಿಸಿರಲಿಲ್ಲ. ಈ ಹೇಳಿಕೆಯಿಂದ ಕನ್ನಡಿಗರ ಮನಸ್ಸಿಗೆ ನೋವಾಗಿದೆ. ಇದು ರಾಜಣ್ಣನವರ ವ್ಯಕ್ತಿತ್ವಕ್ಕೇ ಧಕ್ಕೆ ಆಗಲಿದೆ. ಅವರು ಬಹಿರಂಗ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ಸಾವು ಯಾರನ್ನು ಹೇಳಿ, ಕೇಳಿ ಬರುವುದಿಲ್ಲ. ನನ್ನ ಮೊಮ್ಮಗಳು ಗೌರಿ ಕೂಡ ಅತೀ ಸಣ್ಣ ವಯಸ್ಸಿಗೆ ನಿಧನಳಾದಳು ಎಂದು ನೊಂದು ನುಡಿದರು.

ಮೂರು ಪ್ರಾಧಿಕಾರ ರಚನೆಗೆ ಒತ್ತಾಯ: ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ, ದಸರಾ ಪ್ರಾಧಿಕಾರ ಹಾಗೂ ಪ್ರವಾಸೋದ್ಯಮ ಪ್ರಾಧಿಕಾರ ರಚನೆಯಾಗಬೇಕು ಎಂದು ಜಿ.ಟಿ.ದೇವೇಗೌಡ ಸರ್ಕಾರಕ್ಕೆ ಒತ್ತಾಯಿಸಿದರು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತಂದಿದ್ದೇನೆ. ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ ರಾಜ್ಯ ಮಟ್ಟದ ಪ್ರಾಧಿಕಾರ. ಅದಕ್ಕೂ ಸ್ಥಳೀಯವಾಗಿ ಪ್ರತ್ಯೇಕ ಪ್ರಾಧಿಕಾರ ಮಾಡಬೇಕು. ಮೈಸೂರಿನ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಪ್ರಾಧಿಕಾರ ಆಗಲೇಬೇಕು ಎಂದು ಒತ್ತಾಯಿಸಿದರು.

ಕ್ರೆಡಿಟ್ ಇಬ್ಬರಿಗೂ ಸಿಗಲಿದೆ: ಮೈಸೂರು ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನಡೆಯುತ್ತಿರುವ ಕ್ರೆಡಿಟ್ ವಾರ್ ಕುರಿತು ಕೇಳಿದ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅಭಿವೃದ್ಧಿಯ ಕ್ರೆಡಿಟ್ ಎಲ್ಲರಿಗೂ ಸೇರಿದ್ದು. ಒಬ್ಬರ ಕಾಲದಲ್ಲಿ ಕೆಲಸ ಆರಂಭವಾದರೆ, ಮತ್ತೊಬ್ಬರ ಕಾಲದಲ್ಲಿ ಆ ಕೆಲಸ ಮುಗಿಯುತ್ತದೆ. ಕೆಲಸ ಆರಂಭಿಸಿದವರಿಗೂ ಕ್ರೆಡಿಟ್ ಸಿಗಲಿದೆ, ಹಾಗೆಯೇ ಕೆಲಸ ಮುಗಿಸಿದವರಿಗೂ ಕ್ರೆಡಿಟ್ ಸಿಗಲಿದೆ. ಇದರಲ್ಲಿ ಕೇವಲ ಒಬ್ಬರಿಗೆ ಮಾತ್ರ ಕ್ರೆಡಿಟ್ ಸಿಗುವುದಿಲ್ಲ ಎಂದು ಹೇಳುವ ಮೂಲಕ ಬಿಜೆಪಿ–ಕಾಂಗ್ರೆಸ್, ಇಬ್ಬರಿಗೂ ಬುದ್ಧಿ ಮಾತು ಹೇಳಿದರು.

ಸಿದ್ದರಾಮಯ್ಯರಿಗೆ ಶುಭ ಹಾರೈಸಿದ ಜಿಟಿಡಿ: ಸಿದ್ದರಾಮೋತ್ಸವ ನಡೆಯುತ್ತಿರುವ ಬಗ್ಗೆ ನನಗೆ ಇದುವರೆಗೆ ಯಾವುದೇ ಆಹ್ವಾನ ಪತ್ರಿಕೆ ಬಂದಿಲ್ಲ. ಆಹ್ವಾನ ಪತ್ರಿಕೆ ಬರಲಿ, ಬಿಡಲಿ, ನಾನು ಸಿದ್ದರಾಮಯ್ಯರಿಗೆ ಶುಭ ಹಾರೈಸುತ್ತೇನೆ ಎಂದು ಕಾರ್ಯಕ್ರಮಕ್ಕೆ ಮುಂಚಿತವಾಗಿಯೇ ನಾನು ಅವರಿಗೆ ಹುಟ್ಟುಹಬ್ಬದ ಶುಭ ಕೋರುತ್ತಿದ್ದೇನೆ ಎಂದರು.

ಎನ್.ಆರ್.ಕ್ಷೇತ್ರದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಆರಂಭಿಸುವ ಪ್ರಸ್ತಾಪ

ಸಚಿವ ಅಶ್ವಥ್‌ನಾರಾಯಣ್ ಅವರೊಂದಿಗೆ ಸಂಸದ ಪ್ರತಾಪ್ ಸಿಂಹ ಚರ್ಚೆ



ಮೈಸೂರು, ಜು.4(ಆರ್‌ಕೆಬಿ)– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಆರಂಭಿಸುವ ಕುರಿತಂತೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವಥ್‌ನಾರಾಯಣ್ ಅವರೊಂದಿಗೆ ಚರ್ಚಿಸಿದರು.

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾರಂಭಿಸುವ ಕುರಿತು ನಿವೇಶನ ಮಂಜೂರು ಮಾಡಿಸಿಕೊಂಡು ಕಾಲೇಜು ಶಿಕ್ಷಣ ಇಲಾಖೆಗೆ ಪತ್ರ ಬರೆಯಲಾಗಿತ್ತು. ಈ ಸಂಬಂಧ ಪ್ರಸ್ತಾಪಿತ ಸ್ಥಳದಲ್ಲಿ ತಾತ್ಕಾಲಿಕವಾಗಿ ಕಾಲೇಜನ್ನು ಆರಂಭಿಸಲು ಸುತ್ತಮುತ್ತಲ ಸ್ಥಳಗಳಲ್ಲಿ ಯಾವುದೇ ಸರ್ಕಾರಿ ಕಟ್ಟಡ, ಕೊಠಡಿಗಳು ಲಭ್ಯವಿರಲಿಲ್ಲ. ಹಾಗಾಗಿ ಇಲಾಖೆ ಮುಖ್ಯಸ್ಥರೊಂದಿಗೆ ಸಂಪರ್ಕಿಸಲಾಗಿತ್ತು. ಈ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಮಾಹಿತಿ ಪಡೆದ ಸಂಸದ ಪ್ರತಾಪ್‌ಸಿಂಹ ಕಾಲೇಜು ಆರಂಭಕ್ಕೆ ಸಂಬಂಧಿಸಿದಂತೆ ಸಚಿವರೊಂದಿಗೆ ಚರ್ಚಿಸಿದರು.

ಕಾಲೇಜನ್ನು ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯರಗನಹಳ್ಳಿ ಮೈಸೂರು ಜಿಲ್ಲಾ ಶಾಲಾ ಶಿಕ್ಷಕರ ಹೆಚ್.ಬಿ.ಸಿ.ಎಸ್ ಬಡಾವಣೆಯಲ್ಲಿ ಗುರುತಿಸಲಾಗಿರುವ ನಿವೇಶನದಲ್ಲಿ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಚಿವರಲ್ಲಿ ಸಂಸದರು ಮನವಿ ಮಾಡಿದರು. ಇದಕ್ಕೆ ಸಚಿವರು ಈ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಆರ್ಥಿಕ ಸ್ವಾವಲಂಬನೆ, ಸಂಪನ್ಮೂಲ ಕ್ರೋಢೀಕರಣ ಅಧ್ಯಯನ ಸಮಿತಿ ಅಧ್ಯಕ್ಷರ ಜೊತೆ ಇಂದು ಸಭೆ

ಮೈಸೂರು, ಜು.4(ಎಸ್‌ಪಿಎನ್)–ರಾಜ್ಯ ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಢೀಕರಣ ಅಧ್ಯಯನಕ್ಕಾಗಿ ರಚಿಸಲಾದ ಏಕ ಸದಸ್ಯ ಸಮಿತಿ ಅಧ್ಯಕ್ಷ ಎಂ.ಆರ್.ಶ್ರೀನಿವಾಸಮೂರ್ತಿ ಅವರೊಂದಿಗೆ ಚರ್ಚಿಸಲು ಸಿಎಂ ಗೃಹ ಕಚೇರಿ ಕೃಷ್ಣದಲ್ಲಿ ಜು.5 ಮಧ್ಯಾಹ್ನ 12.30ಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ ತಿಳಿಸಿದ್ದಾರೆ. ಸಭೆಯಲ್ಲಿ ಆರ್ಥಿಕ ಇಲಾಖೆ ಅಪರ ಮುಖ್ಯಕಾರ್ಯದರ್ಶಿ, ಏಕಸದಸ್ಯ ಸಮಿತಿ ಅಧ್ಯಕ್ಷ ಎಂ.ಆರ್.ಶ್ರೀನಿವಾಸಮೂರ್ತಿ ಹಾಜರಿರುವಂತೆ ಕೋರಲಾಗಿದೆ.

ನಕಲಿ ಕೀ ಬಳಸಿ ಚಿನ್ನಾಭರಣ ಕಳವು

ಮೈಸೂರು, ಜು.4– ನಕಲಿ ಕೀ ಬಳಸಿ ಮನೆಗೆ ನುಗ್ಗಿದ ಖದೀಮರು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ನಂದಿನಿ ಲೇಔಟ್‌ನಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಡಾ.ಎನ್.ಕುಮಾರ್ (61) ಜೂ.30ರಂದು ಸಂಜೆ 7.15ರ ವೇಳೆಯಲ್ಲಿ ತಮ್ಮ ಪತ್ನಿಗೆ ಫಿಜಿಯೋಥೆರಪಿ ಮಾಡಿಸುವ ಸಲುವಾಗಿ ಮನೆಗೆ ಬೀಗ ಹಾಕಿಕೊಂಡು ಆಸ್ಪತ್ರೆಗೆ ತೆರಳಿ ರಾತ್ರಿ ವಾಪಸ್ಸಾಗಿದ್ದಾರೆ. ಮರುದಿನ ಬೆಳಗ್ಗೆ ಅವರ ಪತ್ನಿ ಪೂಜೆಗೆ ಬೇಕಾದ ಬೆಳ್ಳಿ ಸಾಮಾನುಗಳನ್ನು ತೆಗೆದುಕೊಳ್ಳಲು ಬೆಡ್‌ರೂಂ ಅಲ್ಮೇರಾದ ಲಾಕರ್ ಅನ್ನು ಓಪನ್ ಮಾಡಿದಾಗ ಅದರಲ್ಲಿದ್ದ 160 ಗ್ರಾಂ ತೂಕದ ಚಿನ್ನಾಭರಣ, 2 ಕೆಜಿ ಬೆಳ್ಳಿ ಪದಾರ್ಥಗಳು, 70 ಸಾವಿರ ರೂ. ನಗದು ಸೇರಿದಂತೆ ಒಟ್ಟು 4.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಆಗಿರುವುದು ಗೊತ್ತಾಗಿದೆ. ನಕಲಿ ಕೀ ಬಳಸಿ ತಮ್ಮ ಮನೆಯಲ್ಲಿ ಕಳವು ನಡೆಸಲಾಗಿದೆ ಎಂದು ಡಾ.ಎನ್. ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಫಾರೂಖಿಯ ಕಾಲೇಜು ಕೊಠಡಿಗಳ ಪ್ರಸಕ್ತ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಬಿಟ್ಟುಕೊಡಲು ಮನವಿ

ಮೈಸೂರು, ಜು.4(ಎಸ್‌ಪಿಎನ್)–ಸಾರ್ವಜನಿಕ ಶಿಕ್ಷಣ ಇಲಾಖೆ ವಶಕ್ಕೆ ಪಡೆದಿರುವ ಫಾರೂಖಿಯ ಬಾಲಕಿಯರ ಸಂಯುಕ್ತ ಪದವಿ ಪೂರ್ವ ಕಾಲೇಜು(ಆರ್‌ಎಂಇ ಟ್ರಸ್ಟ್) ಕೊಠಡಿಗಳನ್ನು ಮಕ್ಕಳ ವ್ಯಾಸಂಗದ ದೃಷ್ಟಿಯಿಂದ ಈ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಬಿಟ್ಟುಕೊಡುವಂತೆ ಒತ್ತಾಯಿಸಿ ಸಾರ್ವಜನಿಕರು, ಜನಪ್ರತಿನಿಧಿಗಳು ಕಾಲೇಜು ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದ್ದಾರೆ.

ಈ ಸಂಬಂಧ ಆರ್‌ಎಂಇಟಿಯ ಸದಸ್ಯ ನಬೀಲ್ ಮೊಹಮ್ಮದ್ ಖಾನ್ ಮಾಧ್ಯಮಗಳಿಗೆ ಮಾಹಿತಿ ನೀಡಿ, 1992ರಲ್ಲಿ ಆರ್‌ಎಂಇ ಟ್ರಸ್ಟ್‌ಗೆ ವಿದ್ಯಾಸಂಸ್ಥೆ ತೆರೆಯಲು ಅಂದಿನ ಸರ್ಕಾರ 50 ವರ್ಷಗಳಿಗೆ ಗುತ್ತಿಗೆ ಆಧಾರದಲ್ಲಿ 11,740 ಚದರಡಿ ಜಾಗ ನೀಡಿತ್ತು. 1994ರಲ್ಲಿ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಾರ್ವಜನಿಕರೊಬ್ಬರು ನ್ಯಾಯಾಲಯದಲ್ಲಿ ಬೆಲೆಬಾಳುವ ಭೂಮಿಯನ್ನು ವಾಪಸ್ ಪಡೆಯುವಂತೆ ಸಾರ್ವ ಜನಿಕ ಹಿತಾಸಕ್ತಿ ದೂರು ದಾಖಲಿಸಿದ್ದರು. ಈ ಸಂಬಂಧ 2008ರವರೆಗೂ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯಿತು. ತದನಂತರ ನ್ಯಾಯಾಲಯವು ಸರ್ಕಾರಕ್ಕೆ ನಿರ್ದೇಶನ ನೀಡಿ, ಶಾಲೆ ಯಥಾ ಪ್ರಕಾರ ನಡೆಯಲಿ. ಆದರೆ, ಆರ್‌ಎಂಇ ಟ್ರಸ್ಟ್‌ಗೆ ನೀಡಿರುವ ಜಾಗದ ಗುತ್ತಿಗೆ ಕರಾರು ಒಪ್ಪಂದವನ್ನು ರದ್ದುಗೊಳಿಸಿತ್ತು ಎಂದರು.

ನ್ಯಾಯಾಲಯದ ತೀರ್ಪು ಬಂದ ನಂತರವೂ 2008–2012ರವರೆಗೆ ಬಿಇಓ ಮತ್ತು ಡಿಡಿಪಿಐ ಅವರಿಂದ ಜಾಗ ವಾಪಸ್ ಪಡೆಯುವ ಬಗ್ಗೆ ಇಲ್ಲವೇ ಟ್ರಸ್ಟ್‌ಗೆ ಬಿಟ್ಟು ಕೊಡುವ ಕುರಿತು ಯಾವುದೇ ಪತ್ರ ವ್ಯವಹಾರ ನಡೆಸಿಲ್ಲ. ಇದೀಗ 2022ರ ಏ.1ರ ನಂತರ ಡಿಡಿಪಿಐ ಮತ್ತು ಬಿಇಓ ಅವರು, ನಮ್ಮ ಕಾಲೇಜಿಗೆ ಭೇಟಿ ನೀಡಿ, ಇಲ್ಲಿನ ಶಿಕ್ಷಕರಿಗೆ ಮೌಖಿಕವಾಗಿ ಶಾಲಾ ಜಾಗವನ್ನು ಇಲಾಖಾ ವಶಕ್ಕೆ ನೀಡುವಂತೆ ಸೂಚಿಸಿದ್ದರು. ಆದರೆ, ಜಾಗ ಖಾಲಿ ಮಾಡುವ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಯಾವುದೇ ನೋಟೀಸ್ ನೀಡದ ಹಿನ್ನೆಲೆಯಲ್ಲಿ ಜಾಗ ಖಾಲಿ ಮಾಡಿರಲಿಲ್ಲ. ಆದಾಗ್ಯೂ ಜಿಲ್ಲಾ ಸಿವಿಲ್ ನ್ಯಾಯಾಲಯದಲ್ಲಿ ಜಾಗ ಖಾಲಿ ಮಾಡಿಸದಂತೆ ತಡೆಯಾಜ್ಞೆ ತರಲಾಗಿತ್ತು ಎಂದರು. ಆದರೆ, ಸಾರ್ವಜನಿಕರ ಶಿಕ್ಷಣ ಇಲಾಖೆ ಅಧಿಕಾರಿಗಳು ಏಕಾಏಕಿ ಶನಿವಾರ ಪೊಲೀಸ್ ಭದ್ರತೆಯೊಂದಿಗೆ ಆಗಮಿಸಿ ಟ್ರಸ್ಟ್ ವಶದಲ್ಲಿದ್ದ ಜಾಗವನ್ನು ವಾಪಸ್ ಪಡೆದಿದ್ದಾರೆ. ಆದರೂ ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಈ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇಲಾಖಾ ವಶದಲ್ಲಿರುವ ಜಾಗ, ಶಾಲಾ ಕಟ್ಟಡವನ್ನು ಸಂಸ್ಥೆಗೆ ನೀಡುವಂತೆ ಒತ್ತಾಯಿಸಿದರು. ಈ ವೇಳೆ ಮಾಜಿ ಮೇಯರ್ ಅಯೂಬ್ ಖಾನ್, ಪಿಎಫ್‌ಐ ಹಾಗೂ ಆಮ್‌ಆದ್ಮಿಪಾರ್ಟಿ ಕಾರ್ಯಕರ್ತರು, ಈ ಭಾಗದ ಪಾಲಿಕೆ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಉತ್ತರಪ್ರದೇಶ ಮಾದರಿ ಕಬ್ಬಿಗೆ ಎಸ್‌ಎಪಿ ಬೆಲೆ ನಿಗದಿಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಜು.4(ಪಿಎಂ)–ರಾಜ್ಯದಲ್ಲಿ ಪ್ರಸಕ್ತ 2022–23ನೇ ಸಾಲಿನ ಕಬ್ಬಿಗೆ ಉತ್ತರ ಪ್ರದೇಶ ಮಾದರಿ ರಾಜ್ಯ ಸಲಹಾ ಬೆಲೆ (ಎಸ್‌ಎಪಿ) ನಿಗದಿ ಮಾಡಬೇಕೆಂಬುದು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಸಲು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಉತ್ತರ ಪ್ರದೇಶದಲ್ಲಿ ಟನ್ ಕಬ್ಬಿಗೆ 3,500 ರೂ. ರಾಜ್ಯ ಸಲಹಾ ಬೆಲೆ ನಿಗದಿ ಮಾಡಲಾಗಿದೆ. ಅದೇ ಮಾನದಂಡ ಅನುಸರಿಸಿ ರಾಜ್ಯದಲ್ಲಿಯೂ ದರ ನಿಗದಿಪಡಿಸಬೇಕೆಂದು ಒತ್ತಾಯಿಸಿದರು.

ಕಬ್ಬಿನ ಬೆಳೆಗೆ ಬಳಸುವ ರಸಗೊಬ್ಬರ, ಬೀಜ ಸೇರಿದಂತೆ ಕಟಾವು ಕೂಲಿ, ಸಾಗಾಣಿಕೆ ವೆಚ್ಚ (ಡೀಸೆಲ್ ಬೆಲೆ ಏರಿಕೆ ಹಿನ್ನೆಲೆ) ಏರಿಕೆ ಆಗಿದ್ದು, ಇದಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ಎಸ್‌ಎಪಿ ಬೆಲೆ ನಿಗದಿ ಮಾಡಬೇಕು. ತಕ್ಷಣ ದರ ನಿಗದಿ ಮಾಡದಿದ್ದರೆ ಕಾರ್ಖಾನೆಗಳು ಹಣ ನೀಡುವುದು ವಿಳಂಬವಾಗಿ ನಮಗೆ ಸಾಕಷ್ಟು ಸಂಕಷ್ಟ ಎದುರಾಗಲಿದೆ. ರಾಜ್ಯ ಸಲಹಾ ಬೆಲೆ ಕಾಯ್ದೆ ಅನ್ವಯ ರಾಜ್ಯ ಸರ್ಕಾರ ಕಬ್ಬಿಗೆ ಬೆಲೆ ನಿಗದಿ ಮಾಡಲು ಅವಕಾಶವಿದೆ. ಇದನ್ನು ಸರ್ಕಾರ ಮನಗಾಣಬೇಕು. ಪ್ರತಿ ವರ್ಷ ಕಬ್ಬಿನ ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಸಕ್ಕರೆ ಕಾರ್ಖಾನೆಯವರು ಯಾವುದೇ ಮಾನದಂಡವಿಲ್ಲದೆ ರೈತರ ಹಣದಿಂದ ಕಡಿತಗೊಳಿಸುತ್ತಿದ್ದು, ಇದನ್ನು ತಪ್ಪಿಸಬೇಕು ಎಂದು ಪ್ರತಿಭಟನಾನಿರತ ರೈತರು ಒತ್ತಾಯಿಸಿದರು.

ರಾಜ್ಯದಲ್ಲಿ ಕಳೆದ ವರ್ಷ ಸುಮಾರು 70 ಸಕ್ಕರೆ ಕಾರ್ಖಾನೆಗಳು 6.50 ಕೋಟಿ ರೂ. ಮೌಲ್ಯದ ಕಬ್ಬು ನುರಿಸಿವೆ. ಇದರ ಬಾಬ್ತು ರಾಜ್ಯದ ರೈತರಿಗೆ ಇನ್ನೂ 300 ಕೋಟಿ ರೂ.ನಷ್ಟು ಎಫ್‌ಆರ್‌ಪಿ ಹಣ ಬಾಕಿ ಉಳಿದಿದೆ. ಕಾನೂನಿನಂತೆ ಬಾಕಿ ಹಣಕ್ಕೆ ಶೇ.15ರಷ್ಟು ಬಡ್ಡಿ ಸೇರಿಸಿ ತಕ್ಷಣವೇ ಪಾವತಿ ಮಾಡಬೇಕು. ಫಸಲ್ ವಿಮಾ ಯೋಜನೆಯಡಿಗೆ ಕಬ್ಬು ಬೆಳೆಯನ್ನೂ ತರಬೇಕು ಎಂದು ಆಗ್ರಹಿಸಿದರು.

ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಇಂದಿನ ದಿನಗಳಲ್ಲಿ ಕಬ್ಬು ಕಲ್ಪವೃಕ್ಷವಾಗಿದ್ದು, ಕಬ್ಬಿನಿಂದ ಎಥೆನಾಲ್, ವಿದ್ಯುತ್, ಮದ್ಯಸಾರ, ಗೊಬ್ಬರ ಸೇರಿದಂತೆ ಮತ್ತಿತರ ಉತ್ಪನ್ನಗಳನ್ನು ತಯಾರಿಸಿ ಕಾರ್ಖಾನೆಗಳು ಹೆಚ್ಚು ಲಾಭ ಮಾಡಿಕೊಳ್ಳುತ್ತಿವೆ. ಆದರೆ ಕಬ್ಬು ಬೆಳೆಯುವ ರೈತರಿಗೆ ಮಾತ್ರ ಸೂಕ್ತ ಲಾಭ ದೊರೆಯದಂತೆ ನಿರಂತರವಾಗಿ ಶೋಷಣೆ ಮಾಡುತ್ತಿವೆ ಎಂದು ದೂರಿದರು.

ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಸಂಘದ ಮುಖಂಡರಾದ ಅತ್ತಳ್ಳಿ ದೇವರಾಜ್, ಕಿರಗಸೂರು ಶಂಕರ್, ಬರಡನಪುರ ನಾಗರಾಜ್, ಪಿ.ಸೋಮ ಶೇಖರ್, ಕೆರೆಹುಂಡಿ ರಾಜಣ್ಣ, ಕೂಡನಹಳ್ಳಿ ರಾಜಣ್ಣ, ಕುರುಬೂರು ಸಿದ್ದೇಶ್, ಲಕ್ಷ್ಮೀಪುರ ವೆಂಕಟೇಶ್, ಬಿದರಳ್ಳಿ ಮಾದಪ್ಪ, ಬರಡನಪುರ ನಾಗರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

15 ದಿನಗಳಲ್ಲಿ ಕಬ್ಬಿನ ದರ ನಿಗದಿ ಸೇರಿದಂತೆ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ರಾಜ್ಯದ 20 ಲಕ್ಷ ಕಬ್ಬು ಬೆಳೆಗಾರರು ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಆಷಾಢದ ಶೀತ ವಾತಾವರಣ: ಕೆಆರ್ ಆಸ್ಪತ್ರೆಯಲ್ಲಿ ರೋಗಿಗಳ ನೂಕು ನುಗ್ಗಲು



> “ಇಂದು ಒಂದೇ ದಿನ 1,580 ಮಂದಿ ಹೊರ ರೋಗಿಗಳಾಗಿ ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಪ್ರತೀ ಸೋಮವಾರಗಳಂದು ಸಾಮಾನ್ಯವಾಗಿ ರೋಗಿಗಳ ಸಂಖ್ಯೆ ಜಾಸ್ತಿ ಇರುತ್ತದೆ. ಆದರೆ ಇಂದು ಅತೀ ಹೆಚ್ಚು ಮಂದಿ ಹೊರ ರೋಗಿ ವಿಭಾಗದ ಕೌಂಟರ್‌ನಲ್ಲಿ ನೋಂದಣಿ ಮಾಡಿಸಿ ಚಿಕಿತ್ಸೆ ಪಡೆದಿದ್ದಾರೆ. ಸುಮಾರು 300 ಮಂದಿ ಒಳರೋಗಿಗಳಾಗಿ ದಾಖಲಾಗಿದ್ದಾರೆ. ಆಸ್ಪತ್ರೆಯಲ್ಲಿ ಲಭ್ಯವಿರುವ ಸೌಲಭ್ಯವನ್ನೇ ಬಳಸಿಕೊಂಡು ಬರುವ ರೋಗಿಗಳಿಗೆ ವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ.
> –ಡಾ.ರಾಜೇಶ್, ಸ್ಥಾನಿಕ ವೈದ್ಯಾಧಿಕಾರಿ, ಕೆಆರ್ ಆಸ್ಪತ್ರೆ



ಮೈಸೂರು,ಜು.4(ಆರ್‌ಕೆ)–ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಸೋಮವಾರ ರೋಗಿಗಳ ಸಂಖ್ಯೆ ಮಾಮೂಲಿ ದಿನಗಳಿಗಿಂತ ಅಧಿಕವಾಗಿತ್ತು. ಎಕ್ಸ್–ರೇ, ಸ್ಕ್ಯಾನಿಂಗ್, ರಕ್ತ ಪರೀಕ್ಷೆ ವಿಭಾಗಗಳಲ್ಲಿ ತೀವ್ರ ನೂಕು–ನುಗ್ಗಲು ಉಂಟಾಗಿತ್ತು. ಆಷಾಢ ಮಾಸದ ಶೀತ ವಾತಾವರಣ ಹಾಗೂ ತುಂತುರು ಮಳೆಯಿಂದಾಗಿ ನೆಗಡಿ, ಕೆಮ್ಮು, ಶೀತ, ತಲೆ ನೋವು, ಜ್ವರದಂತಹ ಲಕ್ಷಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದರಿಂದ ಜನಸಾಮಾನ್ಯರು ಚಿಕಿತ್ಸೆಗಾಗಿ ದೊಡ್ಡಾಸ್ಪತ್ರೆಯತ್ತ ಮುಖ ಮಾಡಿದ್ದಾರೆ. ಆಸ್ಪತ್ರೆ ಆವರಣದ ಟ್ರಿಯಾಜ್ ಸೆಂಟರ್‌ನ ಕೌಂಟರ್‌ಗಳಲ್ಲಿ ಸಾವಿರಾರು ಮಂದಿ ಹೊರರೋಗಿ ಚೀಟಿ ಪಡೆದು ಓಪಿಡಿಯ ಜನರಲ್ ಮೆಡಿಸಿನ್, ಸರ್ಜರಿ, ಆರ್ಥೋ, ಇಎನ್‌ಟಿ, ಚರ್ಮರೋಗ, ನರರೋಗ ಸೇರಿದಂತೆ ಇನ್ನಿತರ ವಿಭಾಗಗಳಲ್ಲಿ ಚಿಕಿತ್ಸೆ ಪಡೆಯಲು ಸಾಲುಗಟ್ಟಿ ನಿಂತಿದ್ದರು.

ಕ್ಯಾಸುಯಾಲಿಟಿ, ಮೈನರ್ ಓಟಿ, ಎಮರ್ಜೆನ್ಸಿ, ಯೂರಾಲಜಿ, ಪ್ಲಾಸ್ಟಿಕ್ ಸರ್ಜರಿ ವಿಭಾಗ ಸೇರಿದಂತೆ ಆಸ್ಪತ್ರೆಯಲ್ಲಿ ಹೆಚ್ಚಿನ ಸಂಖ್ಯೆಯ ರೋಗಿಗಳು ಜಮಾಯಿಸಿದ್ದರು.

ನಿನ್ನೆ ಭಾನುವಾರವಾದ್ದರಿಂದ ಇಂದು ಅಧಿಕ ಮಂದಿ ಆಗಮಿಸಿದ್ದರು. ಹೊರರೋಗಿ ವಿಭಾಗಗಳಲ್ಲಿ ವೈದ್ಯರು, ಪಿಜಿ, ಹೌಸ್ ಸರ್ಜನ್, ನರ್ಸ್‌ಗಳು ಪರದಾಡುವಂತಾಯಿತು. ಇಂದು ಸಂಜೆ 4 ಗಂಟೆವರೆಗೆ 1,580 ಮಂದಿ ಚಿಕಿತ್ಸೆ ಪಡೆದಿದ್ದು, ಸುಮಾರು 300 ಮಂದಿ ಒಳರೋಗಿಯಾಗಿ ಕೆಆರ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕಣ್ಣಿನ ಆಸ್ಪತ್ರೆ, ಮಾನಸಿಕ ರೋಗಿಗಳ ಚಿಕಿತ್ಸಾ ವಿಭಾಗ, ಕ್ಯಾನ್ಸರ್ ಚಿಕಿತ್ಸಾ ವಿಭಾಗ, ಓಪಿಡಿ–ಐಪಿಡಿ ಬ್ಲಾಕ್, ಸರ್ಜಿಕಲ್ ವಾರ್ಡ್‌ಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಕಂಡುಬಂದರು. ಫಿಸಿಯೋಥೆರಪಿ, ಡಯಾಲಿಸಿಸ್ ಮಾಡಿಸಲೂ ರೋಗಿಗಳು ಗಂಟೆಗಟ್ಟಲೆ ಕಾಯಬೇಕಾಯಿತು. ರೋಗಿಗಳನ್ನು ನಿಯಂತ್ರಿಸಲು ಕೆಆರ್ ಆಸ್ಪತ್ರೆ ಭದ್ರತಾ ಸೂಪರ್‌ವೈಸರ್‌ಗಳಾದ ಕುಮಾರ್, ಜಗದೀಶ್, ವಾರ್ಡ್ ಅಟೆಂಡರ್ ವಿಭಾಗದ ಸೂಪರ್‌ವೈಸರ್‌ಗಳಾದ ಮಹದೇವು, ಎಲ್.ಮಹದೇವಸ್ವಾಮಿ ಸೇರಿದಂತೆ ಸಿಬ್ಬಂದಿ ಹೆಣಗಾಡುತ್ತಿದ್ದರು. ಕೆಆರ್ ಆಸ್ಪತ್ರೆಯಲ್ಲದೆ, ಚೆಲುವಾಂಬ ಆಸ್ಪತ್ರೆ, ಮಕ್ಕಳ ವಾರ್ಡ್‌ನಲ್ಲೂ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆ ಪಡೆದರು. ವೈದ್ಯಕೀಯ ಅಧೀಕ್ಷಕ ಡಾ. ಎನ್.ನಂಜುಂಡಸ್ವಾಮಿ, ಸ್ಥಾನಿಕ ವೈದ್ಯಾಧಿಕಾರಿ ಡಾ. ರಾಜೇಶ್, ಓಪಿಡಿಯಲ್ಲಿ ರೌಂಡ್ಸ್ ಮಾಡಿ ರೋಗಿಗಳಿಗೆ ನೀಡಲಾದ ವೈದ್ಯಕೀಯ ಸೇವೆಯ ಮೇಲ್ವಿಚಾರಣೆ ನಡೆಸುತ್ತಿದ್ದರು.

1050 ಹಾಸಿಗೆ ಸಾಮರ್ಥ್ಯದ ಕೆಆರ್ ಆಸ್ಪತ್ರೆಯಲ್ಲಿ ಹಾಸಿಗೆಗಳೆಲ್ಲಾ ಭರ್ತಿಯಾಗಿವೆ. ಐಸಿಯುಗಳಲ್ಲಿ ವೆಂಟಿಲೇಟರ್‌ಗಳ ಕೊರತೆ ಇರುವುದರಿಂದ ತೀವ್ರ ಅನಾರೋಗ್ಯಕ್ಕೀಡಾದವರು ಪರದಾಡುವಂತಾಗಿದೆ.

ನಕ್ಕರೆ ಅದೇ ಸ್ವರ್ಗ

ಗೆಳೆಯ : ಸೆಂಟ್ ಮೆಸೇಜ್ ಅಂದ್ರೆ ಏನು?
ಆತ : ಅಷ್ಟೂ ಗೊತ್ತಿಲ್ವೇನೋ, ಸುಗಂಧ ಇರೋ ಮೆಸೇಜ್!

ಮೈಸೂರು ಮಿತ್ರ
ಮಂಗಳವಾರ, 5 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸುಖ–ದುಃಖಗಳು ಮಾನವ ಜೀವನದ ರೂಪಗಳು.
ದುಃಖವು ಕರ್ತವ್ಯದತ್ತ ಜಾಗೃತಗೊಳಿಸಿದರೆ,
ಸುಖವು ಹಾಸಿಗೆಯ ಮೇಲೆ ನಿದ್ರಿಸುತ್ತದೆ –ವಿನೋಬಾ ಭಾವೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಳಿತಾಗಿ ಮುಗಿದಿದ್ದೆಲ್ಲವೂ ಒಳ್ಳೆಯದೇ

ನಿಮ್ಮ ಪತ್ರಗಳು

ಅನಾಹುತಕ್ಕೆ ಮುನ್ನ ಒಣಗಿರುವ ಮರವನ್ನು ಬುಡಸಮೇತ ತೆರವುಗೊಳಿಸಿ



ಮಾನ್ಯರೆ,

ಮೈಸೂರು ನಗರದ ಸರಸ್ವತಿಪುರಂನ ಸಂಜೀವಿನಿ ಉದ್ಯಾನವನದ ಪ್ರವೇಶ ದ್ವಾರದ ಬಳಿ ಇರುವ ಬೋಳು ಮರ ಗೆದ್ದಿಲು ಹಿಡಿದು ಇಂದೋ, ನಾಳೆಯೋ ಬೀಳುವ ಸ್ಥಿತಿಯಲ್ಲಿದೆ.

ಉದ್ಯಾನವನಕ್ಕೆ ಹಾಗೂ ಪಕ್ಕದಲ್ಲೇ ಇರುವ ಕಾಮಾಕ್ಷಿ ಆಸ್ಪತ್ರೆಗೆ ಬರುವ ಹಲವಾರು ಜನರು ಈ ಮರದ ಬಳಿ ಇರುವ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾರೆ. ಕೆಲವರು ಪಕ್ಕದಲ್ಲೇ ವಾಹನಗಳನ್ನು ನಿಲ್ಲಿಸುತ್ತಾರೆ. ಆ ಸಮಯದಲ್ಲೇನಾದರೂ ಮರ ಬಿದ್ದರೆ ಸಾವು–ನೋವುಗಳಾಗುವ ಸಂಭವವೇ ಹೆಚ್ಚು. ಆದ್ದರಿಂದ ಸಂಬಂಧಪಟ್ಟವರು ಅನಾಹುತಕ್ಕೆ ಮೊದಲು ಮರವನ್ನು ಬುಡಸಮೇತ ತುರ್ತಾಗಿ ತೆರವುಗೊಳಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಪ್ಲಾಸ್ಟಿಕ್ ಬಳಕೆ ನಿಷೇಧ ಸ್ವಾಗತಾರ್ಹ

ಮಾನ್ಯರೆ,

ಮಣ್ಣಿನಲ್ಲಿ ಕರಗದ ವಸ್ತುಗಳೇ ಇಲ್ಲವೆಂಬ ನಂಬಿಕೆ ಪ್ರಾಚೀನ ಕಾಲದಿಂದಲೂ ಜನರ ಮನಸ್ಸಿನಲ್ಲಿ ಬೇರೂರಿತ್ತು. ಆದರೆ ಪ್ಲಾಸ್ಟಿಕ್ ಎಂಬ ವಸ್ತು ಮಣ್ಣಿನಲ್ಲಿ ಕರಗಲು ಹಲವಾರು ಶತಮಾನಗಳೇ ಬೇಕು. ಪ್ಲಾಸ್ಟಿಕ್ ಎಂಬ ಪದ ಗ್ರೀಕ್ ಭಾಷೆಯ ಪ್ಲಾಸ್ಟಿಕೋಸ್ ಎಂಬ ಪದದಿಂದ ಬಂದಿದೆ. ಇದರ ಅರ್ಥ ಯಾವ ರೂಪದಲ್ಲಿ ಬೇಕಾದರೂ ಅಚ್ಚು ಮಾಡುವುದು ಅಥವಾ ತಯಾರು ಮಾಡುವುದು ಎಂಬುದಾಗಿದೆ.

ಪ್ಲಾಸ್ಟಿಕ್ ಜನರ ಜೀವನದ ಅವಿಭಾಜ್ಯ ಅಂಗವಾಗಿ ಹೋಗಿದೆ. ಪ್ರತಿಯೊಬ್ಬರ ಅವಶ್ಯಕತೆಯಲ್ಲಿ ಪ್ಲಾಸ್ಟಿಕ್ ಕಾಣಬಹುದಾಗಿದೆ. ಪ್ಲಾಸ್ಟಿಕ್‌ನಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಪ್ರಪಂಚದ ಯಾವುದೇ ಮೂಲೆಯಲ್ಲಾದರೂ ಪ್ಲಾಸ್ಟಿಕ್ ಕಾಣಬಹುದಾಗಿದೆ.

ಪ್ರಾಣಿಗಳು ಪ್ಲಾಸ್ಟಿಕ್ ಸೇವನೆ ಮಾಡುವ ಮೂಲಕ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಸಾವನ್ನಪ್ಪಿರುವುದಕ್ಕೆ ಹಲವಾರು ನಿದರ್ಶನಗಳು ನಮ್ಮ ಕಣ್ಣ ಮುಂದಿದೆ. ಪ್ರಸ್ತುತ ಜಗತ್ತಿನಲ್ಲಿ 8.3 ಬಿಲಿಯನ್ ಟನ್ ಪ್ಲಾಸ್ಟಿಕ್ ಇದ್ದು, ಅದರಲ್ಲಿ 2 ಬಿಲಿಯನ್ ಟನ್ ಉಪಯೋಗಿಸಲ್ಪಡುತ್ತದೆ ಮತ್ತು ಉಳಿದ 6.3 ಟನ್ ತ್ಯಾಜ್ಯ ರೂಪದಲ್ಲಿದೆ.

ಪ್ಲಾಸ್ಟಿಕ್ ಅನ್ನು ಸುಡುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಪ್ಲಾಸ್ಟಿಕ್ ನಿಯಂತ್ರಣ ಮಾಡಲು ನಿಷೇಧ ಒಂದೇ ಉತ್ತಮ ಮಾರ್ಗ. ರಾಜ್ಯ ಸರ್ಕಾರ ಜುಲೈ ಒಂದರಿಂದ ಪ್ಲಾಸ್ಟಿಕ್ ನಿಷೇಧ ಜಾರಿಗೆ ತಂದಿರುವುದು ಉತ್ತಮ ನಿರ್ಧಾರವಾಗಿದೆ. ಪ್ಲಾಸ್ಟಿಕ್ ಮಾರುವ ಬೀದಿ ವರ್ತಕರಿಗೆ ಪ್ರಾರಂಭದಲ್ಲಿ 200, 500, 1000 ರೂ.ಗಳ ದಂಡ ವಿಧಿಸಲಾಗುತ್ತದೆ ಮತ್ತು ವರ್ತಕರುಗಳಿಗೆ 2000 ದಿಂದ 10000 ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ.

ಕೇವಲ ಪ್ಲಾಸ್ಟಿಕ್ ಮಾರುವವರಿಗೆ ಮಾತ್ರ ದಂಡ ವಿಧಿಸದೆ ಬಳಕೆ ಮಾಡುವ ಗ್ರಾಹರಿಗೂ ದಂಡ ವಿಧಿಸಲಾಗುವುದು. ನಂತರ ಪ್ಲಾಸ್ಟಿಕ್ ಮಾರಾಟ ಮುಂದುವರೆಸಿದರೆ ಕ್ರಿಮಿನಲ್ ಮೊಕದ್ದಮೆ ಎದುರಿಸಬೇಕಾಗುವುದರಿಂದ ಗ್ರಾಹಕರು ಮತ್ತು ಮಾರಾಟಗಾರರು ಎಚ್ಚರಿಕೆ ವಹಿಸುವುದು ಅನಿವಾರ್ಯ. ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಶ್ಲಾಘನೀಯ ಮತ್ತು ರಾಜ್ಯದ ಜನತೆಯ ಪರವಾಗಿ ಸರ್ಕಾರಕ್ಕೆ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಈ ಸ್ಥಳದಲ್ಲಿ ರಸ್ತೆ ಸೂಚನಾ ಫಲಕ ಅಳವಡಿಸಿ



ಮಾನ್ಯರೆ,

ಹಿನಕಲ್ ವರ್ತುಲ ರಸ್ತೆಯ ಈ ಮಾರ್ಗವು ಶೇಷಾದ್ರಿಪುರಂ ಕಾಲೇಜು, ಭಾರತ್ ಕ್ಯಾನ್ಸರ್ ಆಸ್ಪತ್ರೆ ಕಡೆಗೆ ಹೋಗುತ್ತದೆ. ಜತೆಗೆ ಬೆಳಗಿನ ಅವಧಿಯಲ್ಲಿ ಅಂದರೆ 8.45 ರಿಂದ 9ರ ಒಳಗೆ ಕಾರ್ಖಾನೆ ಮತ್ತಿತರ ಕೆಲಸಗಳಿಗೆ ಹೋಗುವ ಜನರಿಂದ ಈ ವೃತ್ತವು ತುಂಬಾ ಜನಸಂದಣಿಯಿಂದ ಕೂಡಿರುತ್ತದೆ. ಹೇಗೆಂದರೆ ದಾಟುವ ಮುನ್ನ ವಾಹನಗಳು ಮೈಮೇಲೆ ಬಂದೇಬಿಡ್ತಾವೇನೋ ಅನ್ನೋ ಮಟ್ಟಕ್ಕೆ ಭಾಸವಾಗಿಬಿಡುತ್ತದೆ.. ಕಾರ್ಖಾನೆಗಳ ಕಡೆಗೆ ಹೋಗುವ ರಸ್ತೆಯಲ್ಲಿ ಜೀವ ಕೈಲಿ ಹಿಡಿದೇ ಸಾಗಬೇಕು. ಇಲ್ಲಿ ರಸ್ತೆ ತುಂಬಾ ಕಿರಿದಾಗಿದ್ದು ಸರಿಯಾದ ರೀತಿಯಲ್ಲಿ ರಸ್ತೆಯ ನಿಯಮಗಳನ್ನು ಪಾಲಿಸದೆ ವಾಹನಗಳನ್ನು ಚಾಲಿಸುವರು. ಇದರ ಬಗ್ಗೆ ಒಮ್ಮೆ ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳು ಹೆಚ್ಚಿನ ತುರ್ತು ಕ್ರಮ ಕೈಗೊಳ್ಳಬೇಕೆಂದು ಮನವಿ..

–ಎ.ಎಸ್. ಗೋವಿಂದೇಗೌಡ, ಮಂಚೇಗೌಡನಕೊಪ್ಪಲು, ಮೈಸೂರು

ಮೈಸೂರು ಪಾಲಿಕೆ ಬಿಲ್‌ನಲ್ಲಿ ಕನ್ನಡ ಮಂಗಮಾಯ!

ಮಾನ್ಯರೆ,

ಇಲ್ಲಿಯವರೆಗೂ ನಗರ ಪಾಲಿಕೆಯ ನೀರಿನ ಬಿಲ್ಲು ಕನ್ನಡ ಭಾಷೆಯಲ್ಲಿರುತ್ತಿತ್ತು. ಎಲ್ಲರಿಗೂ ಅರ್ಥವಾಗುತ್ತಿತ್ತು. ಈ ದಿನ ಕುವೆಂಪುನಗರದ ನಮ್ಮ ಮನೆಯ ನೀರಿನ ಬಿಲ್ಲು ಸಂಪೂರ್ಣ ಆಂಗ್ಲ ಭಾಷೆಯಲ್ಲಿದೆ. ಅಚ್ಚ ಕನ್ನಡ ಮಾತನಾಡುವ ಪ್ರದೇಶದಲ್ಲಿಯೇ ಹೀಗಾದರೆ ಇನ್ನು ಗಡಿ ನಾಡಿನಲ್ಲಿ ಹೇಗೆ. ಈ ಕೂಡಲೇ ನಗರ ಪಾಲಿಕೆಯ ನೀರಿನ ಬಿಲ್ಲುಗಳು ಕನ್ನಡದಲ್ಲಿ ಬರುವಂತೆ ಮಾನ್ಯ ಪಾಲಿಕೆ ಕಮಿಷನರ್‌ರವರು ಸೂಚನೆಗಳನ್ನು ಕೊಡಲಿ.

– ಅಕ್ಕಿಹೆಬ್ಬಾಳು ವೆಂಕಟೇಶ, ಕುವೆಂಪುನಗರ

ಭಾರತದ ರಾಷ್ಟ್ರಪತಿ ಚುನಾವಣೆ

ದೇಶದ ಪರಮೋಚ್ಚ ಸಾಂವಿಧಾನಿಕ ಹುದ್ದೆಯಾದ ರಾಷ್ಟ್ರಪತಿ ಹುದ್ದೆಗೆ ಜುಲೈ 18ರಂದು ಚುನಾವಣೆ ನಡೆಯಲಿರುವ ಹಿನ್ನಲೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಪಾಳಯಗಳಲ್ಲಿ ಬಿರುಸಿನ ಚಟುವಟಿಕೆ ಪ್ರಾರಂಭವಾಗಿದೆ.

ಹಾಲಿ ರಾಷ್ಟ್ರಪತಿ ರಾಮನಾಥ ಕೋವಿಂದ್‌ರವರ ಅಧಿಕಾರದ ಅವಧಿ ಈ ತಿಂಗಳ 24ಕ್ಕೆ (ಜುಲೈ 24) ಕೊನೆಗೊಳ್ಳುವುದರಿಂದ ನೂತನ ರಾಷ್ಟ್ರಪತಿಯ ಆಯ್ಕೆ ಜುಲೈ 24ರೊಳಗೆ ಮುಗಿಯಬೇಕಾಗಿದೆ. ರಾಷ್ಟ್ರಪತಿ ಹುದ್ದೆ, ಅಲಂಕಾರಿಕ ಹುದ್ದೆಯಾದರೂ, ಅದಕ್ಕೆ ತನ್ನದೇ ಆದ ಘನತೆ ಗಾಂಭೀರ್ಯಗಳಿರುವುದರಿಂದ ಈ ಹುದ್ದೆಯನ್ನು ಅಲಂಕರಿಸುವವರು ನಿಷ್ಕಳಂಕ ಚಾರಿತ್ರ್ಯ, ಅಖಂಡ ದೇಶಪ್ರೇಮ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸುವಂತಹವರಾಗಬೇಕು. ಮೇಲಾಗಿ, ಉನ್ನತ ಶೈಕ್ಷಣಿಕ ಅರ್ಹತೆ, ಸಾಮಾಜಿಕ ವಲಯದಲ್ಲಿ ಒಳ್ಳೆಯ ಹೆಸರು ಮಾಡಿರಬೇಕು. ಹೀಗೆಂದೇ ಈ ಹುದ್ದೆಗೆ ಆಯ್ಕೆ ಹೊಂದುವವರ ಬಗ್ಗೆ ದೇಶದ ಜನತೆ ಅಪಾರವಾದ ನಿರೀಕ್ಷೆ ಹೊಂದಿರುತ್ತಾರೆ. ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಜಾರ್ಖಂಡ್ ರಾಜ್ಯದ ಮಾಜಿ ರಾಜ್ಯಪಾಲೆ ಹಾಗೂ ಬುಡಕಟ್ಟು ಸಮುದಾಯದ ನಾಯಕಿ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಈ ಹುದ್ದೆಗೆ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಇನ್ನು ವಿರೋಧಿ ಪಾಳೆಯದಲ್ಲಿ ಈ ಹುದ್ದೆಗೆ ಕಾಂಗ್ರೆಸ್, ಟಿಎಂಸಿ ಮತ್ತು ಸಮಾಜವಾದಿ ಪಕ್ಷ ಸೇರಿದಂತೆ, 13 ಪ್ರತಿಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಕೇಂದ್ರದ ಮಾಜಿ ಸಚಿವ ಹಾಗೂ ಭಾರತೀಯ ಜನತಾ ಪಕ್ಷದ ಕಡುವೈರಿ ಯಶವಂತ ಸಿನ್ಹಾ ಅವರನ್ನು ಸ್ಪರ್ಧೆಗಿಳಿಸಿದೆ.

ಭಾರತ ಒಂದು ಗಣರಾಜ್ಯವಾಗಿರುವುದರಿಂದ ರಾಜ್ಯಾಂಗದ 52ನೇ ವಿಧಿಯಲ್ಲಿ ರಾಷ್ಟ್ರಪತಿಗಳ ಹುದ್ದೆಗೆ ಅವಕಾಶ ಮಾಡಿಕೊಡಲಾಗಿದೆ. ರಾಷ್ಟ್ರಪತಿಗಳು ದೇಶದ ಸಂಸತ್ತಿನ ಒಂದು ಭಾಗವಾಗಿದ್ದಾರೆ. ಅವರನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಎಲೆಕ್ಟ್ರೋಲ್ ಕಾಲೇಜ್ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಕಾಲೇಜಿನಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರು ಹಾಗೂ ಎಲ್ಲಾ ರಾಜ್ಯಗಳ ವಿಧಾನಸಭಾ ಸದಸ್ಯರು ಇರುತ್ತಾರೆ. ರಾಷ್ಟ್ರಪತಿ ದೇಶದ ಮುಖ್ಯಸ್ಥರಾಗಿದ್ದು, ದೇಶದ ಸಂವಿಧಾನವನ್ನು ಉಳಿಸಿ ಕಾಪಾಡುವ ಅತ್ಯಂತ ಮಹತ್ವದ ಜವಾಬ್ದಾರಿ ಹೊಂದಿದ್ದಾರೆ. ಭಾರತ ಸಂಸದೀಯ ಪ್ರಜಾಸತ್ತಾತ್ಮಕ ಸರ್ಕಾರ ಅಳವಡಿಸಿಕೊಂಡಿರುವುದರಿಂದ, ಸರ್ಕಾರದ ಮುಖ್ಯಸ್ಥರಾದ ಪ್ರಧಾನ ಮಂತ್ರಿಯೇ ನೈಜ ಕಾರ್ಯಾಂಗದ ಮುಖ್ಯಸ್ಥರಾಗಿ ಎಲ್ಲಾ ಅಧಿಕಾರಗಳನ್ನು ಚಲಾಯಿಸಿದರೂ ಸಹ, ದೇಶದ ಮುಖ್ಯಸ್ಥರಾದ ರಾಷ್ಟ್ರಪತಿಗಳಿಗೆ ನಮ್ಮ ಸಂವಿಧಾನ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಅಧಿಕಾರಗಳನ್ನು ನೀಡಿದೆ. ಸರ್ಕಾರ, ಹಳಿ ತಪ್ಪದೆ ಇರುವಂತೆ ನೋಡಿಕೊಳ್ಳುವುದು ರಾಷ್ಟ್ರಪತಿಗಳ ಹೊಣೆಗಾರಿಕೆಯಾಗಿದೆ.


ಪ್ರಧಾನಮಂತ್ರಿ ನೇತೃತ್ವದ ಸಚಿವ ಸಂಪುಟಕ್ಕೆ ಸಲಹೆ ಮತ್ತು ಎಚ್ಚರಿಕೆಗಳನ್ನು ನೀಡುವ ಮೂಲಕ ರಾಷ್ಟ್ರಪತಿಗಳು ಆಡಳಿತ ಸುಗಮ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ಭಾರತದ ರಾಜ್ಯಾಂಗದ ಪ್ರಕಾರ ರಾಷ್ಟ್ರಪತಿಗಳ ಅಧಿಕಾರ ಅಪರಿಮಿತವಾದದ್ದು. ಆದರೆ ಇವುಗಳನ್ನು ಚಲಾಯಿಸುವಾಗ ರಾಷ್ಟ್ರಪತಿಗಳು ಸಚಿವ ಸಂಪುಟದ ಸಲಹೆಯ ಮೇರೆಗೆ ನಡೆದುಕೊಳ್ಳಬೇಕೆಂಬ ಸಂವಿಧಾನದ 74(1) ವಿಧಿ ಹೇಳುತ್ತದೆ. ಆದ್ದರಿಂದ ರಾಷ್ಟ್ರಪತಿಗಳು ಸರ್ವಾಧಿಕಾರಿಯಾಗಲು ಅವಕಾಶ ಇಲ್ಲ.

ಸಂವಿಧಾನದ ಪ್ರಕಾರ, ಭಾರತದ ರಾಷ್ಟ್ರಪತಿಗಳಿಗೆ ಕಾರ್ಯಾಂಗಾಧಿಕಾರ, ಶಾಸನಾಧಿಕಾರಗಳು ಮತ್ತು ತುರ್ತು ಪರಿಸ್ಥಿತಿಯ ಅಧಿಕಾರಗಳು ದತ್ತವಾಗಿವೆ. ಪ್ರಧಾನಮಂತ್ರಿ ಮತ್ತು ಇತರ ಮಂತ್ರಿಗಳ ನೇಮಕ, ರಾಜ್ಯಪಾಲರ ನೇಮಕ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ನೇಮಕ, ಲೋಕಪಾಲರ ನೇಮಕ ಸೇರಿದಂತೆ ಬಹುತೇಕ ಪ್ರಮುಖ ನೇಮಕಾತಿಗಳನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಲೋಕಸಭಾ ಚುನಾವಣೆಯ ನಂತರದ ಸಂಸತ್ತಿನ ಮೊದಲ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವ ರಾಷ್ಟ್ರಪತಿಗಳು ಪ್ರತಿ ವರ್ಷದ ಮೊದಲ ಸಂಸತ್ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾರೆ. ರಾಜ್ಯಸಭೆಗೆ ವಿವಿಧ ಕ್ಷೇತ್ರಗಳಿಗೆ ಸೇರಿದ ಗಣ್ಯರನ್ನು ಕೂಡ ರಾಷ್ಟ್ರಪತಿಗಳೇ ನಾಮಕರಣ ಮಾಡುತ್ತಾರೆ. ಈ ರೀತಿ ರಾಷ್ಟ್ರಪತಿಗಳಿಗೆ ಕಾರ್ಯಾಂಗದ ಬಹುತೇಕ ಅಧಿಕಾರಗಳು ದತ್ತವಾಗಿದೆ. ಆದರೆ ಈ ವೇಳೆ ಪ್ರಧಾನಮಂತ್ರಿ ಒಳಗೊಂಡ ಸಂಪುಟದ ಸಲಹೆ, ಶಿಫಾರಸು ಪರಿಗಣಿತವಾಗುತ್ತದೆ. ಕೇಂದ್ರ ಸರ್ಕಾರದ ಎಲ್ಲಾ ನೇಮಕಗಳು ರಾಷ್ಟ್ರಪತಿಗಳ ಹೆಸರಿನಲ್ಲೇ ನಡೆಯುತ್ತದೆ.

ಸಂವಿಧಾನದ 72ನೇ ವಿಧಿ ಪ್ರಕಾರ, ರಾಷ್ಟ್ರಪತಿಗಳು ಕೆಲವು ಕ್ಷಮೆ ನೀಡುವ ಅಧಿಕಾರಗಳನ್ನು ಹೊಂದಿದ್ದಾರೆ. ಇವುಗಳನ್ನು ಹೊರತು ರಾಷ್ಟ್ರಪತಿಗಳಿಗೆ ಕೆಲವು ವಿವೇಚನಾಧಿಕಾರಗಳನ್ನು ಸಹ ನೀಡಲಾಗಿರುವುದರಿಂದ ಯಾವುದೇ ಸರ್ಕಾರ ರಾಷ್ಟ್ರಪತಿಗಳನ್ನು ಹಗುರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಖ್ಯಾತ ಸಂವಿಧಾನ ತಜ್ಞ ಹೆಚ್.ಎಂ. ಸೀರ್‌ವಾಯ್, ರಾಷ್ಟ್ರಪತಿಗಳ ನೈಜ ಸ್ಥಾನಮಾನಗಳ ಬಗ್ಗೆ ಮಾತನಾಡುತ್ತಾ "ಸಂವಿಧಾನಕ್ಕೆ ವಿರುದ್ಧವಾಗಿ ಮಂತ್ರಿ ಮಂಡಲವು ರಾಷ್ಟ್ರಪತಿಗೆ ಸಲಹೆ ನೀಡುವಂತಿಲ್ಲ. ಅಂಥ ಸಲಹೆಯನ್ನು ಒಪ್ಪಬೇಕೆಂದು ಮಂತ್ರಿ ಮಂಡಲ ಹಟ ಹಿಡಿದರೆ, ರಾಷ್ಟ್ರಪತಿ ಮಂತ್ರಿ ಮಂಡಲವನ್ನೇ ವಜಾಗೊಳಿಸಬಹುದು ಎಂದು ಹೇಳಿದ್ದಾರೆ".

ರಾಷ್ಟ್ರಪತಿಯ ಚುನಾವಣಾ ವಿಧಾನವನ್ನು ಸಂವಿಧಾನದ 54 ಮತ್ತು 55ನೇ ವಿಧಿಗಳಲ್ಲಿ ತಿಳಿಸಲಾಗಿದೆ. 54ನೇ ವಿಧಿ ಪ್ರಕಾರ ಸಂಸತ್ತಿನ ಎರಡು ಸದನಗಳ ಚುನಾಯಿತ ಸದಸ್ಯರುಗಳು ಹಾಗೂ ರಾಜ್ಯ ವಿಧಾನಸಭೆಗಳ ಚುನಾಯಿತ ಸದಸ್ಯರು ರಾಷ್ಟ್ರಪತಿಯನ್ನು ಆಯ್ಕೆ ಮಾಡುತ್ತಾರೆ. ವಿಧಾನಪರಿಷತ್ತಿನ ಸದಸ್ಯರಿಗೆ ಮತದಾನದಲ್ಲಿ ಭಾಗವಹಿಸುವ ಅವಕಾಶ ಇರುವುದಿಲ್ಲ.


ಅಪರಾಧಿಗಳಿಗೆ ಕ್ಷಮಾದಾನ ನೀಡುವುದು, ಶಿಕ್ಷೆಯ ಅವಧಿಯನ್ನು ಮೊಟಕುಗೊಳಿಸುವುದು, ಕಠಿಣ ಶಿಕ್ಷೆಯನ್ನು ಹಗುರು ಶಿಕ್ಷೆಗೆ ಬದಲಿಸುವುದು, ಮರಣ ದಂಡನೆಗೆ ಬದಲಾಗಿ ಬೇರೆ ಶಿಕ್ಷೆ ನೀಡುವ ಅಥವಾ ರದ್ದುಗೊಳಿಸುವ ಅಧಿಕಾರ ಹೊಂದಿದ್ದಾರೆ. ಭಾರತದ ರಾಷ್ಟ್ರಪತಿಗೆ ಮಾತ್ರ ಮರಣ ದಂಡನೆಗೆ ಗುರಿಯಾದವರಿಗೆ ಜೀವದಾನ ನೀಡುವ ಅಂತಿಮ ಅಧಿಕಾರವಿದೆ.



ರಾಷ್ಟ್ರಪತಿ ಭವನ.



ದ್ರೌಪದಿ ಮುರ್ಮು



ಯಶವಂತ ಸಿನ್ಹಾ

ರಾಷ್ಟ್ರಪತಿಗಳ ಪರಂಪರೆ

1. ಡಾ.ರಾಜೇಂದ್ರ ಪ್ರಸಾದ್ –ಮೇ 12, 1952ರಿಂದ ಮೇ 12, 1957. (ಮೊದಲ ಅವಧಿ)
2. ಡಾ.ರಾಜೇಂದ್ರ ಪ್ರಸಾದ್–ಮೇ 13 1957ರಿಂದ ಮೇ 12, 1962ರವರೆಗೆ (ಎರಡನೇ ಅವಧಿ)
3. ಡಾ.ಎಸ್.ರಾಧಾಕೃಷ್ಣನ್–ಮೇ 13 1962ರಿಂದ ಮೇ 12 1967.
4. ಡಾ.ಜಾಕೀರ್ ಹುಸೇನ್–ಮೇ 12ರಿಂದ 1967ರಿಂದ ಮೇ 03 1969
5. ವಿ.ವಿ.ಗಿರಿ–ಆಗಸ್ಟ್ 24, 1969ರಿಂದ ಆಗಸ್ಟ್ 23, 1974.
6. ಫಕ್ರುದ್ದಿನ್ ಅಲಿ ಅಹಮದ್–ಆಗಸ್ಟ್ 24 1974ರಿಂದ ಫೆಬ್ರವರಿ 11, 1977
7. ಎನ್.ಸಂಜೀವ ರೆಡ್ಡಿ–ಜುಲೈ 25, 1977ರಿಂದ ಜುಲೈ 24, 1982
8. ಗ್ಯಾನಿ ಜೇಲ್ ಸಿಂಗ್–ಜುಲೈ 25, 1982ರಿಂದ ಜುಲೈ 24 1987.
9. ಆರ್.ವೆಂಕಟರಾಮನ್–ಜುಲೈ 25, 1987ರಿಂದ ಜುಲೈ 24 1992
10. ಶಂಕರ ದಯಾಳ್ ಶರ್ಮ– ಜುಲೈ 25 1992ರಿಂದ ಜುಲೈ 24, 1997
11. ಕೆ.ಆರ್.ನಾರಾಯಣನ್–ಜುಲೈ 25, 1997ರಿಂದ ಜುಲೈ 24 2002
12. ಡಾ.ಎ.ಪಿ.ಜೆ. ಅಬ್ದುಲ್ ಕಲಾಂ–ಜುಲೈ 25, 2002ರಿಂದ ಜುಲೈ 24 2007
13. ಪ್ರತಿಭಾ ಪಾಟೀಲ್–ಜುಲೈ 25 2007ರಿಂದ ಜುಲೈ 24, 2012
14. ಪ್ರಣಬ್ ಮುಖರ್ಜಿ–ಜುಲೈ 25 2012ರಿಂದ ಜುಲೈ 24, 2017
15. ರಾಮನಾಥ ಕೋವಿಂದ್ ಜುಲೈ 25 2017ರಿಂದ

ಮೇಲ್ಕಂಡ ಮಹನೀಯರಲ್ಲದೇ ಉಪರಾಷ್ಟ್ರಪತಿಗಳಾಗಿದ್ದ ಎಂ. ಹಿದಾಯತ್ ಉಲ್ಲಾರವರು ಅಂದಿನ ರಾಷ್ಟ್ರಪತಿ ಜಾಕೀರ್ ಹುಸೇನ್ ನಿಧನರಾದಾಗ, 20.07.1969ರಿಂದ 24.08.1969 ರವರೆಗೆ ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಆನಂತರ, 1975 ರಲ್ಲಿ ಅಂದಿನ ರಾಷ್ಟ್ರಪತಿ ಫಕ್ರುದ್ದಿನ್ ಅಲಿ ಅಹ್ಮದ್ ನಿಧನ ಹೊಂದಿದಾಗ ಆಗ ಉಪ ರಾಷ್ಟ್ರಪತಿಗಳಾಗಿದ್ದ ದಿವಂಗತ ಬಿ.ಡಿ. ಜತ್ತಿಯವರು, 11.02.1975ರಿಂದ 25.07.1977 ರವರೆಗೆ ಹಂಗಾಮಿ ರಾಷ್ಟ್ರಪತಿಗಳಾಗಿ ಕೆಲಸ ಮಾಡಿದ್ದರು.

ಉಪ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ್ದ ಈ ಮಹನೀಯರು ಮುಂದೆ ರಾಷ್ಟ್ರಪತಿಗಳಾಗಿ ಆಯ್ಕೆ ಹೊಂದಿದ್ದಾರೆ.

1. ಡಾ.ಎಸ್.ರಾಧಾಕೃಷ್ಣನ್
2. ಡಾ.ಜಾಕೀರ್ ಹುಸೇನ್
3. ವಿ.ವಿ.ಗಿರಿ
4. ಬಿ.ಡಿ ಜತ್ತಿ (ಹಂಗಾಮಿ)
5. ಎಂ. ಹಿದಾಯತ್ ಉಲ್ಲಾ (ಹಂಗಾಮಿ)
6. ಕೆ.ಆರ್.ನಾರಾಯಣನ್
7. ಶಂಕರ ದಯಾಳ್ ಶರ್ಮ
8. ಆರ್. ವೆಂಕಟರಾಮನ್

ಮೇಲೆ ಹೇಳಲಾದ ಒಬ್ಬೊಬ್ಬ ರಾಷ್ಟ್ರಪತಿಗಳು ಹಿರಿಯ ರಾಜಕೀಯ ಮುತ್ಸದ್ದಿಗಳಾಗಿದ್ದು ತಮ್ಮ ಕರ್ತವ್ಯಗಳನ್ನು ಅತ್ಯಂತ ಬದ್ಧತೆಯಿಂದ ಹಾಗೂ ಸಂವಿಧಾನಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಿರ್ವಹಣೆ ಮಾಡಿದ್ದಾರೆ. ಪ್ರಪ್ರಥಮ ರಾಷ್ಟ್ರಪತಿಗಳಾಗಿದ್ದ ಡಾ.ರಾಜೇಂದ್ರ ಪ್ರಸಾದ್ ಸುಪ್ರಸಿದ್ಧ ವಕೀಲರಾಗಿದ್ದರು ಹಾಗೂ ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿದ್ದರು. ಸಂವಿಧಾನದ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಿದ್ದ ಇವರು ರಾಷ್ಟ್ರಪತಿ ಕೇವಲ ಉತ್ಸವಮೂರ್ತಿಯಲ್ಲ ಎಂಬುದನ್ನು ಅನೇಕ ಬಾರಿ ನಿರೂಪಿಸಿದರು. ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದ ಸರ್ವಪಲ್ಲಿ ಎಸ್.ರಾಧಾಕೃಷ್ಣನ್ ಓರ್ವ ಶ್ರೇಷ್ಠ ತತ್ವಜ್ಞಾನಿ ಆಗಿದ್ದರು ಹಾಗೂ ಮಾದರಿ ಶಿಕ್ಷಕರಾಗಿದ್ದರು. ಅವರ ಜನ್ಮ ದಿನವಾದ ಸೆಪ್ಟೆಂಬರ್ 5 ಅನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸಲಾಗುತ್ತದೆ. ರಾಧಾಕೃಷ್ಣನ್ ರವರಂತೆ ಜಾಕೀರ್ ಹುಸೇನ್ ಕೂಡ ಓರ್ವ ಶ್ರೇಷ್ಠ ರಾಜ ನೀತಿಜ್ಞರಾಗಿದ್ದರು. ದೇಶದ ಪ್ರಥಮ ದಲಿತ ರಾಷ್ಟ್ರಪತಿಯಾಗಿ ಕೆ.ಆರ್.ನಾರಾಯಣ್ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಅದೇ ರೀತಿ ದೇಶದ ಪ್ರಪ್ರಥಮ ಮಹಿಳಾ ರಾಷ್ಟ್ರಪತಿಯಾಗಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಕಾರ್ಯನಿರ್ವಹಿಸಿದ್ದಾರೆ.

ಹಿರಿಯ ಕಾಂಗ್ರೆಸ್ ಮುಖಂಡ ಮತ್ತು ರಕ್ಷಣಾ ಸಚಿವರಾಗಿದ್ದ ರಾಮಸ್ವಾಮಿ ವೆಂಕಟರಾಮನ್ ಸಹ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಿದ್ದಾರೆ. ಒಂದೆರಡು ಅಪವಾದಗಳನ್ನು ಹೊರತುಪಡಿಸಿ, ಇದುವರೆಗೂ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ ಬಹುತೇಕ ರಾಷ್ಟಪತಿಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅವರ ಪೈಕಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅತ್ಯಂತ ಕ್ರಿಯಾಶೀಲ ಮತ್ತು ಉತ್ಸಾಹ ಶೀಲ ರಾಷ್ಟ್ರಪತಿಯಾಗಿದ್ದರು.

ದೇಶದ ಉದ್ದಗಲಕ್ಕೂ ಮಿಂಚಿನಂತೆ ಸಂಚರಿಸಿ, ಮಕ್ಕಳಲ್ಲಿ ಮತ್ತು ಯುವ ಜನತೆಯಲ್ಲಿ ದೇಶ ಪ್ರೇಮ ಮತ್ತು ಜೀವನೋತ್ಸಾಹ ತುಂಬುತ್ತಿದ್ದ ಡಾ.ಕಲಾಂರವರು ಶಾಲಾ ವಿದ್ಯಾರ್ಥಿಗಳೊಡನೆ ಸಾವಿರಾರು ಸಂವಾದಗಳನ್ನು ನಡೆಸುತ್ತಾ ತಾವೂ ಕೂಡ ಮಕ್ಕಳಂತಾಗಿ ಬಿಡುತ್ತಿದ್ದ ಕಲಾಂ ಭಾರತದ ಭವಿಷ್ಯದ ಬಗ್ಗೆ ದೊಡ್ಡ ದೊಡ್ಡ ಕನಸುಗಳನ್ನು ಕಂಡಿದ್ದರು. ಓರ್ವ ಶ್ರೇಷ್ಠ ಅಣು ವಿಜ್ಞಾನಿಯಾಗಿದ್ದ ಅವರನ್ನು ಭಾರತದ ಕ್ಷಿಪಣಿಗಳ ಜನಕ ಎಂದು ಕೂಡ ಕರೆಯಲಾಗುತ್ತದೆ. ಅತ್ಯಂತ ಭರವಸೆಯ ರಾಷ್ಟ್ರಪತಿಯಾಗಿದ್ದ ಡಾ. ಕಲಾಂ ವಿದೇಶಗಳಲ್ಲಿ ಸಹ ಪ್ರಖ್ಯಾತಿ ಹೊಂದಿದ್ದರು.

ರಾಷ್ಟ್ರಪತಿಗಳ ನೈಜ ಸ್ಥಾನಮಾನ


ಭಾರತದ ರಾಷ್ಟ್ರಪತಿಯನ್ನು ಬ್ರಿಟನ್ನಿನ ರಾಜ ಅಥವಾ ರಾಣಿಗೆ ಹೋಲಿಕೆ ಮಾಡಲಾಗುತ್ತದೆ. ಭಾರತ " ಪಾರ್ಲಿಮೆಂಟರಿ" ಪದ್ಧತಿಯ ಸರ್ಕಾರ ಹೊಂದಿರುವುದರಿಂದ, ಪ್ರಧಾನಮಂತ್ರಿ ನೇತೃತ್ವದ ಸಚಿವ ಸಂಪುಟ ನೈಜ ಕಾರ್ಯಾಂಗವಾಗಿದೆ. ಅಂದರೆ ರಾಷ್ಟ್ರಪತಿಯದ್ದು ಕೇವಲ ಉತ್ಸವ ಮೂರ್ತಿಯ ಪಾತ್ರ ಅವರಿಗೆ ಸಲಹೆ ನೀಡಲು ಪ್ರಧಾನ ಮಂತ್ರಿ ನೇತೃತ್ವದ ಮಂತ್ರಿ ಮಂಡಲ ಇರುತ್ತದೆ. ಅದು ನೀಡುವ ಸಲಹೆ ರಾಷ್ಟ್ರಪತಿಗಳಿಗೆ ಬಂಧನಕಾರಿ. ಹೀಗಾಗಿ ಭಾರತದ ರಾಷ್ಟ್ರಪತಿಯನ್ನು ರಬ್ಬರ್ ಸ್ಟಾಂಪ್ ಎಂದು ಕೂಡ ವ್ಯಂಗ್ಯವಾಗಿ ಕರೆಯಲಾಗುತ್ತದೆ.

ಆದರೆ ರಾಷ್ಟ್ರಪತಿಗಳಿಗೆ ವಿವೇಚನಾಧಿಕಾರಗಳೂ ಸೇರಿದಂತೆ ಕೆಲವು ವಿಶೇಷ ಅಧಿಕಾರಗಳಿವೆ. ಆದ್ದರಿಂದ ಅವರು ಕೇವಲ ಉತ್ಸವ ಮೂರ್ತಿಯಾಗಿರದೇ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಕೆಲಸ ಮಾಡುತ್ತಾರೆ. ಯಾವುದೇ ಸರ್ಕಾರ ದೇಶದ ಕಾನೂನನ್ನು ಅಥವಾ ಸಂವಿಧಾನದ ವಿಧಿ ವಿಧಾನಗಳನ್ನು ಗಾಳಿಗೆ ತೂರಿದಾಗ, ರಾಷ್ಟ್ರಪತಿ ಸರ್ಕಾರಕ್ಕೆ ಎಚ್ಚರಿಕೆ ನೀಡಿ ಅದನ್ನು ಸರಿಯಾದ ದಾರಿಗೆ ತರಬಹುದು. ದೇಶದ ಪ್ರಥಮ ರಾಷ್ಟ್ರಪತಿಗಳಾಗಿದ್ದ ಡಾ.ಬಾಬು ರಾಜೇಂದ್ರ ಪ್ರಸಾದ್, ನೆಹರು ನೇತೃತ್ವದ ಸರ್ಕಾರದ ಅನೇಕ ನೀತಿಗಳನ್ನು ಬಹಿರಂಗವಾಗಿ ಟೀಕಿಸುತ್ತಿದ್ದರು. ಅದೇ ರೀತಿ ಜ್ಞಾನಿ ಜೇಲ್ ಸಿಂಗ್, ರಾಜೀವ್ ಗಾಂಧಿಯವರೊಂದಿಗೆ ತೀವ್ರ ರೀತಿಯ ಭಿನ್ನಾಭಿಪ್ರಾಯ ಹೊಂದಿದ್ದರು. ರಾಜೀವ್ ಸರ್ಕಾರ ಅಂಗೀಕರಿಸಿದ್ದ ವಿವಾದಾತ್ಮಕ ಅಂಚೆ ಮಸೂದೆಗೆ ತಮ್ಮ ಒಪ್ಪಿಗೆ ನೀಡಲಿಲ್ಲ. ರಾಜೀವ್ ಗಾಂಧಿ ಜೇಲ್ ಸಿಂಗರನ್ನು ತುಂಬಾ ಲಘುವಾಗಿ ಕಾಣುತ್ತಿದ್ದರಿಂದ ಅವರಿಬ್ಬರ ನಡುವಿನ ಸಂಬಂಧ ಸರಿಪಡಿಸಲಾಗದಷ್ಟು ಕೆಟ್ಟು ಹೋಗಿತ್ತು. ಒಂದು ಹಂತದಲ್ಲಿ ರಾಜೀವ್ ಗಾಂಧಿ ಸರ್ಕಾರವನ್ನು ವಜಾಗೊಳಿಸಲು ಜೇಲ್‌ಸಿಂಗ್ ಯೋಚಿಸಿದ್ದರು ಎಂದು ಹೇಳಲಾಗುತ್ತದೆ. ಆದರೆ ಅಂದಿನ ಗೃಹ ಸಚಿವ ಬೂಟಾ ಸಿಂಗ್‌ರವರ ಸಲಹೆಯ ಮೇರೆಗೆ ತಮ್ಮ ಆಲೋಚನೆಯನ್ನು ಕೈಬಿಟ್ಟ ಜೇಲ್ ಸಿಂಗ್, ಗೌರವಯುತವಾಗಿ 1987ರಲ್ಲಿ ತಮ್ಮ ಹುದ್ದೆಯಿಂದ ನಿರ್ಗಮಿಸಿದರು. ಬಿಹಾರದ ರಾಬರಿ ದೇವಿ ಸರ್ಕಾರವನ್ನು ವಜಾ ಮಾಡಲು ಅಂದಿನ ಸಂಯುಕ್ತ ರಂಗ ನೇತೃತ್ವದ ಕೇಂದ್ರ ಸರ್ಕಾರ ಕಳುಹಿಸಿದ್ದ ಪ್ರಸ್ತಾವನೆಯನ್ನು ಅಂದಿನ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ತಿರಸ್ಕರಿಸಿದ್ದರು. ಮೊರಾರ್ಜಿ ದೇಸಾಯಿ ಸರ್ಕಾರದ ಹಲವಾರು ಯೋಜನೆಗಳ ಬಗ್ಗೆ ಅಂದಿನ ರಾಷ್ಟ್ರಪತಿ ಸಂಜೀವ ರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದರು. ಅನೇಕ ರಾಷ್ಟ್ರಪತಿಗಳು ತಮಗೆ ಸರಿ ಕಾಣದ ಹಲವಾರು ಮಸೂದೆಗಳನ್ನು ಪುನರ್ ಪರಿಶೀಲನೆಗೆ ವಾಪಸ್ ಕಳುಹಿಸಿರುವ ಹಲವಾರು ನಿದರ್ಶನಗಳಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪದೇ ಪದೆ ಸುಗ್ರೀವಾಜ್ಞೆಗಳನ್ನು ಹೊರಡಿಸುತ್ತಿದ್ದ ಬಗ್ಗೆ ಅಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಮುಂದೆ ಹೀಗಾಗದ ಹಾಗೇ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಸೂಚನೆ ನೀಡಿದ್ದರು. ಹೀಗಾಗಿ ಭಾರತದ ರಾಷ್ಟ್ರಪತಿ ಕೇವಲ ರಬ್ಬರ್ ಸ್ಟಾಂಪ್ ಆಗಿರದೆ,ಇಡೀ ದೇಶದ ಜನತೆಯನ್ನು ಪ್ರತಿನಿಧಿಸುವ ಚೈತನ್ಯಮೂರ್ತಿಯಾಗಿದ್ದಾರೆ ಎಂದು ಹೇಳಬಹುದು.

ಡಾ.ಅಂಬೇಡ್ಕರ್, ಜವಹರಲಾಲ್ ನೆಹರು, ಎಂ.ಸಿ.ಸೆಟಲ್ ವಾಡ್, ಅಲ್ಲಾಡಿ ಕೃಷ್ಣಸ್ವಾಮಿ, ಅಯ್ಯರ್ ಎಂ.ವಿ ಪೈಲಿ, ಎಸ್.ಎಂ.ಸಿಕ್ರಿ ಮುಂತಾದವರ ಪ್ರಕಾರ, ರಾಷ್ಟ್ರಪತಿ ಕೇವಲ ಸಂವಿಧಾನದ ಮುಖ್ಯಸ್ಥರೇ ಹೊರತು, ವಾಸ್ತವ ಕಾರ್ಯಾಂಗಾಧಿಕಾರಿಯಲ್ಲ. ಮಂತ್ರಿ ಮಂಡಲವೇ ನೈಜ ಕಾರ್ಯಾಂಗವೆಂದು ವಾದಿಸಿದ್ದಾರೆ. ಇದರ ಅಸ್ತಿತ್ವ ಇಲ್ಲದೇ ರಾಷ್ಟ್ರಪತಿ ಒಂದು ನಿಮಿಷವೂ ಕೆಲಸ ಮಾಡುವಂತಿಲ್ಲ ಎಂದಿದ್ದಾರೆ.


ಆದರೆ ಇತರ ಕೆಲವು ಸಂವಿಧಾನ ತಜ್ಞರು, ರಾಷ್ಟ್ರಪತಿ ನಾಮಕಾವಸ್ಥೆ ಕಾರ್ಯಾಂಗಾಧಿಕಾರಿಯಲ್ಲ ಎಂದು ವಾದಿಸಿ, ದೇಶ ಗಂಡಾಂತರ ಪರಿಸ್ಥಿತಿ ಎದುರಿಸುವಾಗ ಅಥವಾ ದೇಶದಲ್ಲಿ ರಾಜಕೀಯ ಅಭದ್ರತೆ ತಲೆದೋರಿ ಯಾವುದೇ ಪಕ್ಷ ಸರ್ಕಾರ ರಚಿಸಲು ವಿಫಲವಾದಾಗ ರಾಷ್ಟ್ರಪತಿಗಳ ಪಾತ್ರ ಅತ್ಯಂತ ಪ್ರಮುಖವಾಗುತ್ತದೆ ಎಂದು ವಾದಿಸಿದ್ದಾರೆ. ಕೆ.ಸಂತಾನಮ್, ಕೆ.ಎಂ.ಮುನ್ಷಿ, ಕೆ.ವಿ.ರಾವ್, ಬಿ.ಜಿ.ರಾಮಚಂದ್ರನ್ ಮುಂತಾದವರು ಈ ವಾದವನ್ನು ಪುಷ್ಟೀಕರಿಸುತ್ತಾರೆ.


ಭಾರತದ ರಾಷ್ಟ್ರಪತಿ ಸ್ಥಾನ ಉನ್ನತವಾದದ್ದು ಮತ್ತು ಶ್ರೇಷ್ಠವಾದದ್ದು. ದೇಶದ ರಾಜಕೀಯದಲ್ಲಿ ಗೊಂದಲ, ಅಶಾಂತಿ, ಮತ್ತು ಅಭದ್ರತೆ ಉಂಟಾದಾಗ ರಾಷ್ಟ್ರಪತಿಗಳ ಪಾತ್ರ ಮಹತ್ತರವಾಗುತ್ತದೆ. ರಾಜಕೀಯ ನಿಪುಣತೆ, ಧೈರ್ಯ ಇರುವ ವ್ಯಕ್ತಿ ಈ ಸ್ಥಾನವನ್ನು ಅಲಂಕರಿಸಿದರೆ, ರಾಷ್ಟ್ರಪತಿ ಹುದ್ದೆಗೆ ಮೆರುಗು ಬರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.



–ಡಾ. ಕೆ.ವಿ.ವಾಸು
ಮೊ. 93417316619

ವಿವಿಧ ಸೇವಾ ಕಾರ್ಯದೊಂದಿಗೆ ಲಯನ್ಸ್ ಕ್ಲಬ್ ಚಾರ್ಟರ್ ವಾರ್ಷಿಕೋತ್ಸವ





ಮೈಸೂರು,ಜು.4–ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳೊಂದಿಗೆ ಲಯನ್ಸ್ ಕ್ಲಬ್ ಚಾರ್ಟರ್ ಮೈಸೂರು ದಕ್ಷಿಣದ ವಾರ್ಷಿಕೋತ್ಸವ ಇತ್ತೀಚೆಗೆ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

2021–22ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದ ಎಂ.ಜಿ.ವಿಶ್ವಾ ಅವರಿಗೆ 20 ಸಾವಿರ ರೂ. ಮೌಲ್ಯದ ಲ್ಯಾಪ್‌ಟಾಪ್, ಹಳೆಯ ಸಹಕಾರಿಗಳೊಂದಿಗೆ ಮೈಸೂರು ಸುತ್ತಮುತ್ತಲಿನ ಮನೆಗಳ ಓವರ್‌ಹೆಡ್ ಟ್ಯಾಂಕ್ ಮತ್ತು ಸಂಪ್ ಸ್ವಚ್ಛಗೊಳಿಸುತ್ತಿರುವ ಮೋಹನ್ ಕುಮಾರ್ ಅವರಿಗೆ 40 ಸಾವಿರ ರೂ. ಮೌಲ್ಯದ ಸಬ್‌ಮರ್ಸಿಬಲ್ ಪಂಪ್, ಪೈಪ್ ಮತ್ತು ಟೇಪ್, ರಾಷ್ಟ್ರಮಟ್ಟದಲ್ಲಿ ಮೈಸೂರು ವಿವಿಯನ್ನು ಕ್ರೀಡೆಯಲ್ಲಿ ಪ್ರತಿನಿಧಿಸುತ್ತಿರುವ ಅಂಧ ವಿದ್ಯಾರ್ಥಿಗಳಿಗೆ 30 ಸಾವಿರ ರೂ. ಮೌಲ್ಯದ ಕ್ರಿಕೆಟ್ ಪ್ಲೇ ಕಿಟ್, ಟೈಲರ್ ಕೆಲಸ ಮಾಡುತ್ತಿರುವ ಲಲಿತಾ ಮಹೇಶ್ ಅವರಿಗೆ 17,500 ರೂ. ಮೌಲ್ಯದ ಹೊಲಿಗೆ ಯಂತ್ರ, ಕೃಷಿ ಹಿನ್ನೆಲೆಯ ವಕೀಲ ಮಹೇಶ್ವರಿ ಅವರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಾಜರಾಗಲು 10 ಸಾವಿರ ರೂ. ನಗದು, ನಾಚನಹಳ್ಳಿ ಪಾಳ್ಯ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ 15 ಸಾವಿರ ರೂ. ಮೌಲ್ಯದ ನೋಟ್ ಬುಕ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಲಯನ್ಸ್ ಕ್ಲಬ್ ಚಾರ್ಟರ್‌ನ ಅಧ್ಯಕ್ಷೆ ಬಿ.ಸ್ವಿತಾ ದೇವಯ್ಯ, ಕಾರ್ಯದರ್ಶಿ ವಿನೋದ್ ರಶೀಕರ್, ಖಜಾಂಚಿ ಶಿಲ್ಪಾ ಸಂತೋಷ್ ನೇತೃತ್ವ ವಹಿಸಿದ್ದರು. ಕ್ಲಬ್‌ನ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪ್ರಸಕ್ತ ಸಾಲಿಗೂ ಕಳೆದ ಸಾಲಿನ ಪುಸ್ತಕ ಪೂರೈಸುವಂತೆ ಆಗ್ರಹ

ಮೈಸೂರು, ಜು.4(ಎಸ್‌ಬಿಡಿ)– ಪ್ರಸಕ್ತ ಸಾಲಿನ ವಿದ್ಯಾರ್ಥಿಗಳಿಗೆ ಕಳೆದ ಸಾಲಿನ ಪಠ್ಯಪುಸ್ತಕಗಳನ್ನೇ ವಿತರಿಸುವಂತೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.



ಪಠ್ಯ ಪುಸ್ತಕ ಮರು ಪರಿಷ್ಕರಣೆ ಸಂಬಂಧ ಸಮಿತಿಯಲ್ಲಿ ಗೊಂದಲ ಉಂಟಾಗಿರುವ ಪರಿಣಾಮ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಸಮಸ್ಯೆ ಇತ್ಯರ್ಥಪಡಿಸಲು ತುರ್ತು ಕ್ರಮ ಕೈಗೊಳ್ಳಬೇಕಾದ ಸರ್ಕಾರ ಹಠಮಾರಿ ಧೋರಣೆ ಮುಂದುವರೆಸಿದೆ. ಸುಮಾರು 9 ಆಕ್ಷೇಪಾರ್ಹ ಅಂಶಗಳ ಸರಿಪಡಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರಾದೂ, ಸರಿಪಡಿಸದೆ ಯಥಾವತ್ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿರುವುದು ಶೋಚನೀಯ.

ಇಷ್ಟೆಲ್ಲಾ ಗೊಂದಲಗಳ ನಡುವೆ ಪರಿಷ್ಕೃತ ಪಠ್ಯ ಬೋಧನೆ ಮಾಡುವುದು ಸೂಕ್ತವಲ್ಲ. ಆದ್ದರಿಂದ ಕಳೆದ ಸಾಲಿನ ಪಠ್ಯವನ್ನೇ ಪ್ರಸಕ್ತ ಸಾಲಿನ ವಿದ್ಯಾರ್ಥಿಗಳಿಗೆ ಬೋಧಿಸಬೇಕು. ಈ ನಿಟ್ಟಿನಲ್ಲಿ ತಕ್ಷಣ ಹಳೆಯ ಪಠ್ಯಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಬೇಕು. ಪರಿಷ್ಕೃತ ಪಠ್ಯದಲ್ಲಿರುವ ಆಕ್ಷೇಪಾರ್ಹ ಅಂಶಗಳ ಬಗ್ಗೆ ಸಾಹಿತಿಗಳು, ವಿಷಯ ತಜ್ಞರು, ಚಿಂತಕರೊಡನೆ ಸಮಾಲೋಚಿಸಿ, ಎಲ್ಲಾ ದೋಷಗಳನ್ನೂ ಸರಿಪಡಿಸಿದ ನಂತರ ಮುಂದಿನ ಶೈಕ್ಷಣಿಕ ಸಾಲಿನಿಂದ ಅನ್ವಯಿಸಲು ಮುಖ್ಯಮಂತ್ರಿಗಳು ಕ್ರಮ ವಹಿಸಬೇಕೆಂದು ಆಗ್ರಹಿಸಿದ್ದಾರೆ.

ಒಂದನೇ ಪುಟದಿಂದ

ಅಮೃತ್ ಪೌಲ್ ಬಂಧನ, ಅಮಾನತು!

ಕರೆಯಲಾಗಿತ್ತು ಹಗರಣದಲ್ಲಿ ಪೌಲ್ ಸೇರಿದಂತೆ 79 ಜನರನ್ನು ಬಂಧಿಸಿರುವ ಸಿಐಡಿ ಇದುವರೆಗೆ ಎಂಟು ಎಫ್‌ಐಆರ್‌ಗಳನ್ನು ದಾಖಲಿಸಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಅವರು ನೇಮಕಾತಿ ಎಡಿಜಿಪಿ ಆಗಿದ್ದ ಸಂದರ್ಭದಲ್ಲಿ ಪರೀಕ್ಷೆಗಳು ನಡೆದಿದ್ದವು. ಹಗರಣ ಹೊರಬಿದ್ದ ಕೂಡಲೇ ಸರ್ಕಾರವು ಪೌಲ್‌ನನ್ನು ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾಯಿಸಿತ್ತು. ಅಮೃತ್ ಪೌಲ್ 25 ಅಭ್ಯರ್ಥಿಗಳ ಜೊತೆ 30 ಲಕ್ಷ ರೂಪಾಯಿ ಡೀಲ್ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮತ್ತಷ್ಟು ವಿಚಾರಣೆ ನಡೆಸಲು ಅವರನ್ನು ಸಿಐಡಿ ಬಂಧಿಸಿದೆ.

545 ಪಿಎಸ್‌ಐ ನೇಮಕಾತಿ ಅಕ್ರಮ ಸಂಬಂಧ ಅಮೃತ್ ಪೌಲ್ ಅವರಿಗೆ ಹಲವು ದೂರುಗಳು ಬಂದಿದ್ದು ಇದನ್ನು ಅವರು ನಿರ್ಲಕ್ಷಿಸಿದ್ದರು ಎಂಬ ಆರೋಪ ಸಹ ಅವರ ವಿರುದ್ಧ ಕೇಳಿಬಂದಿತ್ತು. ಅಕ್ರಮ ಬಯಲಿಗೆ ಬರುತ್ತಿದ್ದಂತೆ ಅಮೃತ್ ಪೌಲ್ ಅವರ ವರ್ಗಾವಣೆಗೆ ಒತ್ತಡ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಅವರನ್ನು ವರ್ಗಾಯಿಸಲಾಗಿತ್ತು. 545 ಪಿಎಸ್‌ಐ ಹುದ್ದೆಗಳ ಡೀಲ್ ನಡೆದಾಗ ಅಮೃತ್ ಪೌಲ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದರು. ಡಿವೈಎಸ್‌ಪಿ ಹಾಗೂ ಎಫ್‌ಡಿಎಯೊಂದಿಗೆ ಸೇರಿ ಅಮೃತ್ ಪೌಲ್ ಡೀಲ್ ಮಾಡಿಸಿದ್ದಾರೆ ಎಂಬ ಆರೋಪವಿದೆ.

ಇಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಸಿಐಡಿ ಕಚೇರಿಗೆ ಬಂದ ಪೌಲ್ ಅವರನ್ನು ಉಪ ಪೊಲೀಸ್ ಅಧೀಕ್ಷಕ (ಡಿಎಸ್ಪಿ) ಶ್ರೇಣಿಯ ತನಿಖಾಧಿಕಾರಿ ವಿಚಾರಣೆಗೆ ಒಳಪಡಿಸಿದರು. ನಂತರ ಅವರನ್ನು ಮಧ್ಯಾಹ್ನ 2 ಗಂಟೆಗೆ ವಶಕ್ಕೆ ತೆಗೆದುಕೊಳ್ಳಲಾಗಿದೆ

ಕಳೆದ ವಾರ, ಆರೋಪಿಗಳ ಜಾಮೀನು ಅರ್ಜಿಯನ್ನು ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಚ್‌ಪಿ ಸಂದೇಶ್ ಅವರ ಏಕಸದಸ್ಯ ಪೀಠವು ಪಿಎಸ್‌ಐಗಳ ನೇಮಕಾತಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರವು ಗಂಭೀರ ವಿಷಯವಾಗಿದೆ ಮತ್ತು ತನಿಖೆಯ ಮೇಲೆ ವೈಯಕ್ತಿಕವಾಗಿ ನಿಗಾ ವಹಿಸುವಂತೆ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ), ಸಿಐಡಿ, ಪಿಎಸ್ ಸಂಧು ಅವರಿಗೆ ಸೂಚಿಸಿತ್ತು.

ಸತ್ಯ ಹೊರಬರಬೇಕು. ನ್ಯಾಯಾಲಯವು ತನಿಖೆಯ ಪ್ರಗತಿಯನ್ನು ಸಹ ಮೇಲ್ವಿಚಾರಣೆ ಮಾಡುತ್ತದೆ. ಆರೋಪಿಗಳ ವಿರುದ್ಧ ಸಚಿವರು ಅಥವಾ ಅಧಿಕಾರಿಗಳು ಎಂದು ಲೆಕ್ಕಿಸದೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ ನ್ಯಾಯಾಲಯ, ಜುಲೈ 7 ರಂದು ತನಿಖೆಯ ಪ್ರಗತಿ ವರದಿಯನ್ನು ಸಲ್ಲಿಸುವಂತೆ ಸಂಧುಗೆ ಸೂಚಿಸಿತ್ತು.

ಎಸಿಬಿಯಿಂದ ಬಂಧನಕ್ಕೊಳಗಾದ ಹಿರಿಯ ಐಪಿಎಸ್ ಅಧಿಕಾರಿ ಅಮೃತ್‌ಪೌಲ್ ಅವರನ್ನು ರಾಜ್ಯ ಸರ್ಕಾರ ಇಂದು ಸಂಜೆ ಅಮಾನತುಪಡಿಸಿದೆ.

ಐಎಎಸ್ ಅಧಿಕಾರಿ ಮಂಜುನಾಥ್ ಅಮಾನತು

ಮಾಡುವಂತೆ ಕೋರಿ ಬೆಂಗಳೂರು ಎಸಿಬಿ ಪೊಲೀಸರು ಭ್ರಷ್ಟಾಚಾರ ಪ್ರಕರಣ ವಿಶೇಷ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ವರದಿಗೆ ಸಮ್ಮತಿಸಿರುವ ವಿಶೇಷ ನ್ಯಾಯಾಲಯ ಐಎಎಸ್ ಅಧಿಕಾರಿ ಮಂಜುನಾಥ್ ವಿಚಾರಣೆಗೆ ಹಸಿರು ನಿಶಾನೆ ತೋರಿತ್ತು. ಈ ಹಿನ್ನೆಲೆಯಲ್ಲಿ ಎಸಿಬಿ ಅಧಿಕಾರಿಗಳು ಇಂದು ಮಂಜುನಾಥ್ ಅವರನ್ನು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆನೇಕಲ್ ತಾಲೂಕಿನ ಕೂಡ್ಲು ಗ್ರಾಮದಲ್ಲಿ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿ ಇತ್ತು. ಈ ಪ್ರಕರಣದ ಪೂರ್ಣ ವಿಚಾರಣೆ ನಡೆಸಿದ್ದ ಜಿಲ್ಲಾಧಿಕಾರಿ ಜೆ. ಮಂಜುನಾಥ್ ತೀರ್ಪು ಪ್ರಕಟ ಮಾಡಿರಲಿಲ್ಲ. ಈ ಕುರಿತು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದ್ದ ಅರ್ಜಿದಾರ ಆಜಂಪಾಷಾ ಅವರಿಗೆ ಅಧೀನ ಸಿಬ್ಬಂದಿ ಮಹೇಶ್ ಅವರನ್ನು ಕಾಣಲು ಸೂಚಿಸಲಾಗಿತ್ತು. ಮಹೇಶ್ ಅವರನ್ನು ಭೇಟಿ ಮಾಡಿದಾಗ, "ನಿನ್ನ ಪರ ಅನುಕೂಲಕರ ತೀರ್ಪು ನೀಡಲು 5 ಲಕ್ಷ ರೂ. ಲಂಚ ನೀಡುವಂತೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ವ್ಯವಸ್ಥಾಪಕ ಮಹೇಶ್ ಹಾಗೂ ನ್ಯಾಯಾಲಯ ವಿಭಾಗದ ಚೇತನ್ ಕುಮಾರ್ ಬೇಡಿಕೆ ಇಟ್ಟಿದ್ದರು.

ಎಸಿಬಿ ಪೊಲೀಸರಿಂದ ಮಂಜುನಾಥ್ ಬಂಧನವಾಗುತ್ತಿದ್ದಂತೆ ಅವರನ್ನು ರಾಜ್ಯ ಸರ್ಕಾರ ಅಮಾನತುಪಡಿಸಿದೆ. ಬಂಧಿಸಲ್ಪಟ್ಟ ಮಂಜುನಾಥ್ ಅವರನ್ನು ನ್ಯಾಯಾ ಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು, ಇದೀಗ ಅವರು ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆಗೆ ಒಳಹರಿವು ಹೆಚ್ಚಳ

ಕಳೆದ ವರ್ಷ ಇದೇ ದಿನ 1,415 ಕ್ಯೂಸೆಕ್ ಹೊರಹರಿವಿತ್ತು ಎಂದು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಮಳೆ ಪ್ರಮಾಣ ಹೆಚ್ಚಾಗುತ್ತಿದ್ದು, ನಾಳೆಯಿಂದ ಒಳಹರಿವಿನ ಪ್ರಮಾಣವು ಜಾಸ್ತಿಯಾದಲ್ಲಿ ಜುಲೈ 3ನೇ ವಾರ ಅಥವಾ ಅಂತ್ಯದ ವೇಳೆಗೆ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 124.80 ಅಡಿ (ಗರಿಷ್ಠ ಮಟ್ಟ) ತಲುಪುವ ಸಾಧ್ಯತೆ ಇದೆ ಎಂದ ಅವರು, ಅವಧಿಗೂ ಮುಂಚೆಯೇ ಮುಖ್ಯಮಂತ್ರಿಗಳು ಕಾವೇರಿಗೆ ಬಾಗಿನ ಸಮರ್ಪಿಸುವರೆಂದು ಹೇಳಲಾಗುತ್ತಿದೆ ಎಂದರು.

ಮಳೆ ಕಾರಣದಿಂದಾಗಿ ಜೂನ್ ಮಾಹೆಯಲ್ಲಿ ಬೃಂದಾವನಕ್ಕೆ ನಿರೀಕ್ಷಿತ ಪ್ರಮಾಣದ ಪ್ರವಾಸಿಗರು ಭೇಟಿ ನೀಡದ ಕಾರಣ ಕೇವಲ 80 ಲಕ್ಷ ರೂ. ಆದಾಯ ಸಂಗ್ರಹವಾಗಿದೆ. ಆದರೆ ಮೇ ಮಾಹೆಯಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ 1.10 ಕೋಟಿ ರೂ. ಆದಾಯ ಸಂಗ್ರಹವಾಗಿತ್ತು. ಈಗ ಸಾಮಾನ್ಯ ದಿನಗಳಲ್ಲಿ 2ರಿಂದ 2,500 ಮಂದಿ, ಶನಿವಾರ ಮತ್ತು ಭಾನುವಾರಗಳಂದು 4 ರಿಂದ 5000 ಮಂದಿ ಪ್ರವಾಸಿಗರು ಕೆಆರ್‌ಎಸ್‌ಗೆ ಭೇಟಿ ನೀಡುತ್ತಿದ್ದಾರೆ ಎಂದು ರಾಮಮೂರ್ತಿ ತಿಳಿಸಿದ್ದಾರೆ. ಜಲಾಶಯ ಭರ್ತಿಯಾಗಿ ಹೆಚ್ಚುವರಿ ನೀರನ್ನು ಹೊರ ಬಿಟ್ಟರೆ, ಆ ಸಂದರ್ಭ ಅಣೆಕಟ್ಟೆ ಹಾಗೂ ಬೃಂದಾವನ ಗಾರ್ಡನ್‌ಗೆ ವಿದ್ಯುದ್ದೀಪಾಲಂಕಾರ ಮಾಡಿ ಪ್ರವಾಸಿಗರನ್ನು ಆಕರ್ಷಿಸಲಾಗುವುದು. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ಪ್ರವಾಸಿಗರ ಸಂಖ್ಯೆಯೂ ಕಡಿಮೆ ಇದ್ದ ಕಾರಣ ವಿಶೇಷ ದೀಪಾಲಂಕಾರ ಮಾಡಿರಲಿಲ್ಲ ಎಂದು ತಿಳಿಸಿದರು.

ಡಿಸ್ನಿಲ್ಯಾಂಡ್ ಮಾದರಿ ಬೃಂದಾವನ ಅಭಿವೃದ್ಧಿ

ಬರುತ್ತಿದ್ದಂತೆಯೇ ಕೆಆರ್‌ಎಸ್ ಅನ್ನು ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಿ, ಖಾಸಗಿ ಸಂಸ್ಥೆಯೊಂದರಿಂದ ಕ್ರಿಯಾ ಯೋಜನೆ, ಅಂದಾಜು ಹಾಗೂ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಿತ್ತು.

ಯೋಜನೆ ಅನುಷ್ಠಾನಕ್ಕಾಗಿ ಅಗತ್ಯವಿದ್ದ ಭೂಮಿ ಸ್ವಾಧೀನ ಸಂಬಂಧ ಮಂಡ್ಯದ ಅಂದಿನ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ ಅಧಿಕಾರಿಗಳೂ ಸಹ ಸರ್ವೆ ಮಾಡಿ, ಯೋಜನೆಗೆ ಲಭ್ಯವಾಗಬಹುದಾದ ಭೂಮಿಯ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರಲ್ಲದೆ, ಅಂದಿನ ಜಲ ಸಂಪನ್ಮೂಲ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಸಹ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಕೆಆರ್‌ಎಸ್‌ಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ನಂತರ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ್ದರು.

ಆ ನಡುವೆ ರೈತರು, ಪರಿಸರವಾದಿಗಳು ಹಾಗೂ ಇನ್ನಿತರ ಸಂಘಟನೆಗಳು ಡಿಸ್ನಿಲ್ಯಾಂಡ್ ಮಾದರಿ ಕೆಆರ್‌ಎಸ್ ಅಭಿವೃದ್ಧಿ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, ಅದರಿಂದ ಕೆಆರ್‌ಎಸ್ ಅಣೆಕಟ್ಟೆ ಹಾಗೂ ಜಲಾಶಯಕ್ಕೆ ಅಪಾಯವಾಗಲಿದೆ ಎಂದು ಪ್ರತಿಪಾದಿಸಿದ್ದರಿಂದ ಯೋಜನಾ ಪ್ರಕ್ರಿಯೆಗೆ ತಡೆಯಾಗಿತ್ತು. ಅಷ್ಟರಲ್ಲಿ ಸಮ್ಮಿಶ್ರ ಸರ್ಕಾರ ಪತನವಾಗಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರವೂ ಡಿಸ್ನಿಲ್ಯಾಂಡ್ ಯೋಜನೆ ಜಾರಿಗೆ ಆಸಕ್ತಿ ತೋರಿ ಆ ಸಂಬಂಧ ಬೆಂಗಳೂರಲ್ಲಿ ಸಭೆಗಳು ನಡೆದವಾದರೂ, ಈವರೆಗೆ ಸರ್ಕಾರ ಯಾವುದೇ ನಿರ್ಧಾರಕ್ಕೆ ಬಾರದಿರುವುದರಿಂದ ಈ ಯೋಜನೆ ಸದ್ಯ ನೆನೆಗುದಿಗೆ ಬಿದ್ದಿದೆ.

ಬೃಂದಾವನದ ವಿಸ್ತರಣೆ ಹಾಗೂ ಅಭಿವೃದ್ಧಿಗೆ ಕೊರೊನಾ ಸಾಂಕ್ರಾಮಿಕ ರೋಗವೂ ಕಂಟಕವಾಯಿತಲ್ಲದೆ, ಆರ್ಥಿಕ ಹಿನ್ನಡೆಯೂ ಕಾರಣವಾಯಿತು. ಆದರೆ ಯೋಜನೆ ಅನುಷ್ಠಾನವಾಗಿದ್ದರೆ, ಕೆಆರ್‌ಎಸ್‌ಗೆ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಬಹುದಾಗಿದ್ದು, ರಾಜ್ಯದ ಬೊಕ್ಕಸಕ್ಕೆ ಅಧಿಕ ಆದಾಯ ನಿರೀಕ್ಷಿಸಬಹುದಾಗಿತ್ತು.

ಉದ್ಯೋಗ ಸೃಷ್ಟಿ, ಸುತ್ತಲಿನ ಗ್ರಾಮಸ್ಥರಿಗೆ ವ್ಯಾಪಾರ ವಹಿವಾಟುಗಳಿಗೆ ಅವಕಾಶವಾಗುತ್ತಿತ್ತಲ್ಲದೇ, ರಸ್ತೆ ಅಭಿವೃದ್ಧಿ, ಗ್ರಾಮಗಳ ಅಭಿವೃದ್ಧಿಗೂ ಪೂರಕವಾಗುತ್ತಿತ್ತು ಎಂಬುದು ಹಲವರ ಅಭಿಪ್ರಾಯವಾಗಿದೆ. ಇದೀಗ ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವುದರಿಂದ ಸರ್ಕಾರ ಈ ಮಾದರಿಯ ಬೃಹತ್ ಯೋಜನೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಕನಸಿನ ಮಾತು ಎಂದು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಡಿಸ್ನಿಲ್ಯಾಂಡ್ ಮಾದರಿ ಕೆಆರ್‌ಎಸ್ ಅಭಿವೃದ್ಧಿ ಕುರಿತಂತೆ ಕಾವೇರಿ ನೀರಾವರಿ ನಿಗಮದಿಂದ ಸಮಗ್ರ ಯೋಜನಾ ವರದಿ (DPR)ಯೊಂದಿಗೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತಾದರೂ, ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಈವರೆಗೆ ಬಂದಿಲ್ಲವಾದ್ದರಿಂದ ಈ ಮಹತ್ವದ ಯೋಜನೆಗೆ ಎಳ್ಳು-ನೀರು ಬಿಟ್ಟಂತೆಯೇ ಎಂದು ಸಾರ್ವಜನಿಕರು ಅಭಿಪ್ರಾಯಪಡುತ್ತಿದ್ದಾರೆ.

ಮಹಾರಾಷ್ಟ್ರದಲ್ಲಿ ಇನ್ನು ಏಕನಾಥ್ ದರ್ಬಾರ್

ಸುಲಭವಾಗಿ ವಿಶ್ವಾಸ ಗಳಿಸಿದ ಶಿಂಧೆ



ಮುಂಬೈ: ತೀವ್ರ ಕುತೂಹಲ ಕೆರಳಿಸಿದ್ದ ಮಹಾರಾಷ್ಟ್ರ ವಿಶ್ವಾಸಮತ ಯಾಚನೆಯಲ್ಲಿ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರು ಶಾಸಕರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದ್ದು, ತಮ್ಮ ಸಿಎಂ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ. 164–99 ಮತಗಳ ಅಂತರದಲ್ಲಿ ಶಿಂಧೆ ಸರ್ಕಾರ ವಿಶ್ವಾಸ ಗೆದ್ದಿದೆ. 3 ಸದಸ್ಯರು ವಿಧಾನಸಭೆ ಅಧಿವೇಶನಕ್ಕೆ ಗೈರಾಗಿದ್ದರು. ಉದ್ಧವ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ಮಹಾವಿಕಾಸ ಆಘಾಡಿ ಸರ್ಕಾರದ ವಿರುದ್ಧ ಬಂಡೆದ್ದು, ಬಿಜೆಪಿಯೊಂದಿಗೆ ಸೇರಿ ಶಿಂಧೆ ಅವರು ಮುಖ್ಯಮಂತ್ರಿಯಾಗಿದ್ದರು. ಬಿಜೆಪಿಯ ದೇವೇಂದ್ರ ಫಡ್ನವೀಸ್ ಉಪಮುಖ್ಯಮಂತ್ರಿಯಾಗಿದ್ದಾರೆ.

ಉದ್ಧವ್ ಠಾಕ್ರೆಯೊಂದಿಗೆ ಗುರುತಿಸಿಕೊಂಡಿದ್ದ ಮತ್ತೊಬ್ಬ ಶಾಸಕ, ಸಂತೋಷ್ ಬಂಗಾರ್ ಎಂಬುವವರೂ ಇಂದು ಶಿಂಧೆ ಬಣಕ್ಕೆ ಸೇರ್ಪಡೆಯಾಗಿದ್ದಾರೆ. ಇದರೊಂದಿಗೆ ಶಿಂಧೆ ಕಡೆಯ ಶಾಸಕರ ಸಂಖ್ಯೆ 40ಕ್ಕೆ ಏರಿಕೆಯಾಗಿದೆ. ಇದಕ್ಕೂ ಹಿಂದೆ ಶಿಂಧೆ–ಬಿಜೆಪಿ ದೋಸ್ತಿ ತಮ್ಮ ಕಡೆಯ ರಾಹುಲ್ ನರ್ವೇಕರ್ (ಬಿಜೆಪಿ) ಅವರನ್ನು ಸ್ಪೀಕರ್ ಆಗಿ ಆಯ್ಕೆ ಮಾಡಿಕೊಳ್ಳುವಲ್ಲಿ ಸಫಲವಾಗಿತ್ತು.

ಬಹಳ ದಿನಗಳಿಂದ ನನ್ನನ್ನು ತುಳಿಯಲಾಗಿತ್ತು: ಬಹಳ ದಿನಗಳಿಂದ ನನ್ನನ್ನು ತುಳಿಯಲಾಗಿತ್ತು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಸೋಮವಾರ ಹೇಳಿದ್ದಾರೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ವಿಶ್ವಾಸಮತ ಗೆದ್ದ ಬಳಿಕ ವಿಜಯೋತ್ಸವ ಭಾಷಣ ಮಾಡಿದ ಶಿಂಧೆ, ಇವತ್ತು ಏನು ನಡೆಯಿತೋ ಅದು ಕೇವಲ ಒಂದು ದಿನದಲ್ಲ ಎಂದರು.


ಚುನಾವಣೆಗಾಗಿ ಇಲ್ಲಿಗೆ ಬಂದಾಗ, ನನ್ನನ್ನು ಹೇಗೆ ನೋಡಿಕೊಳ್ಳಲಾಗಿತ್ತು ಎಂಬುದಕ್ಕೆ ಈ ಸದನದಲ್ಲಿರುವವರೇ ಸಾಕ್ಷಿಯಾಗಿದ್ದಾರೆ. ಬಹಳ ದಿನಗಳಿಂದ ನನ್ನನ್ನು ತುಳಿಯಲಾಗಿತ್ತು. ಇದಕ್ಕೆ ಉದ್ಧವ್ ಠಾಕ್ರೆ ಬಣದಿಂದ ಬಂದಿರುವ ಸುನೀಲ್ ಪ್ರಭು ಕೂಡಾ ಸಾಕ್ಷಿಯಾಗಿದ್ದಾರೆ ಎಂದು ಅವರು ಹೇಳಿದರು. ಮಾಜಿ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಹೆಸರನ್ನು ಉಲ್ಲೇಖಿಸಿದ ಶಿಂಧೆ, ಮಹಾ ವಿಕಾಸ್ ಆಘಾದಿ ಸರ್ಕಾರ 2019 ನವೆಂಬರ್‌ನಲ್ಲಿ ಅಧಿಕಾರಕ್ಕೆ ಬಂದ ನಂತರ ಶಿವಸೇನಾದಲ್ಲಿ 'ಅಪಘಾತ' ಸಂಭವಿಸಿರುವುದಾಗಿ ಹಿರಿಯ ಎನ್ ಸಿಪಿ ಮುಖಂಡರು ನನಗೆ ಹೇಳಿದ್ದರು ಎಂದರು.

ಮಹಾ ವಿಕಾಸ್ ಆಘಾದಿ ಸರ್ಕಾರದ ರಚನೆಯನ್ನು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮಾಡಿದ್ದರು. ಆದರೆ, ಮಹಾ ಆಘಾಡಿ ಸರ್ಕಾರ ರಚನೆ ನಂತರ ಶಿವಸೇನಾ ಪಕ್ಷದಲ್ಲಿ ಅಪಘಾತ ಸಂಭವಿಸಿರುವುದಾಗಿ ಅಜಿತ್ ಪವಾರ್ ನನಗೆ ಹೇಳಿದ್ದರು. ನೀವು ಮುಖ್ಯಮಂತ್ರಿಯಾಗಲು ನಮ್ಮ ವಿರೋಧವೇನಿಲ್ಲ ಎಂದು ಉದ್ಧವ್ ಠಾಕ್ರೆ ಅವರಿಗೆ ಶಿಂಧೆ ಹೇಳಿದರು. ಬಿಜೆಪಿ–ಶಿವಸೇನಾ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದರೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ಭರವಸೆ ನೀಡಲಾಗಿತ್ತು ಶೀಘ್ರದಲ್ಲಿಯೇ ಒಳ್ಳೆಯ ಹುದ್ದೆ ಸಿಗಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಮಗೆ ಹೇಳಿದ್ದಾಗಿ ಶಿಂಧೆ ತಿಳಿಸಿದರು.

ಕೆ.ಆರ್.ಕ್ಷೇತ್ರದಲ್ಲಿ 'ಜನಸ್ನೇಹಿ ಪೊಲೀಸ್'

ತೊಂದರೆಯಾದರೆ ಕೂಡಲೇ ಸಂಪರ್ಕಿಸುವಂತೆ ಶಾಸಕ ರಾಮದಾಸ್ ಸಲಹೆ

ಮೈಸೂರು, ಜು.4(ಎಸ್‌ಬಿಡಿ)– ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಮನೆಗಳಿಗೆ 'ಜನಸ್ನೇಹಿ ಪೊಲೀಸ್' ಸ್ಟಿಕ್ಕರ್ ಅಂಟಿಸುವ ಕಾರ್ಯಕ್ಕೆ ಶಾಸಕ ಎಸ್.ಎ.ರಾಮದಾಸ್ ಸೋಮವಾರ ಚಾಲನೆ ನೀಡಿದರು.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯನ್ನು ಅಪರಾಧ ಮುಕ್ತ ಹಾಗೂ ಜನಸ್ನೇಹಿ ಠಾಣೆಯನ್ನಾಗಿ ರೂಪಿಸುವ ಸಂಕಲ್ಪ ಹೊಂದಿರುವ ನಿಟ್ಟಿನಲ್ಲಿ ಕನಕಗಿರಿ, ಗುಂಡೂರಾವ್ ನಗರ, ಮುನೇಶ್ವರನಗರ, ಸಿವೇಜ್ ಫಾರಂ ಮಾಡಲ್ ಹೌಸ್ ಸೇರಿದಂತೆ ಠಾಣೆ ವ್ಯಾಪ್ತಿಯ ಎಲ್ಲಾ ಮನೆಗಳಿಗೆ ಸ್ಟಿಕ್ಕರ್ ಅಂಟಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕನಕಗಿರಿ ಮುಖ್ಯರಸ್ತೆ, ಸರ್ಕಾರಿ ಶಾಲೆ ಹಿಂಭಾಗದ ಮನೆಗಳಿಗೆ ಇಂದು ಸ್ಟಿಕ್ಕರ್ ಅಂಟಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಎಸ್.ಎ. ರಾಮದಾಸ್, ವಿದ್ಯಾರಣ್ಯಪುರಂ ಠಾಣೆ ವ್ಯಾಪ್ತಿ ಮಾತ್ರವಲ್ಲದೆ ಇಡೀ ಮೈಸೂರು ನಗರದಲ್ಲಿ ಶಾಂತ ವಾತಾವರಣ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಪೊಲೀಸ್ ಠಾಣೆಗಳು ಅಪರಾಧ ಮುಕ್ತ ಹಾಗೂ ಜನಸ್ನೇಹಿ ಠಾಣೆಗಳಾಗಿ ರೂಪುಗೊಳ್ಳುವುದು ಬಹಳ ಮುಖ್ಯ ಎಂದರು.

ಪೊಲೀಸ್ ಸಿಬ್ಬಂದಿಯೊಬ್ಬರು 300 ಮನೆಗಳ ಮೇಲೆ ನಿಗಾ ವಹಿಸಲಿದ್ದಾರೆ. ನಿಯೋಜಿತ ಬೀಟ್ ಸಿಬ್ಬಂದಿ ವಿವರ, ಇನ್‌ಸ್ಪೆಕ್ಟರ್ ಮೊಬೈಲ್ ಹಾಗೂ ಠಾಣೆಯ ದೂರವಾಣಿ ಸಂಖ್ಯೆ ಸೇರಿದಂತೆ ಅಗತ್ಯ ಮಾಹಿತಿಯನ್ನೊಳಗೊಂಡ ಸ್ಟಿಕ್ಕರ್ ಅನ್ನು ಮನೆಗಳ ಬಳಿ ಅಂಟಿಸಲಾಗುತ್ತದೆ. ಜನರಿಗೆ ಏನಾದರೂ ತೊಂದರೆಯಾದರೆ, ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ಕಂಡುಬಂದರೆ ಸ್ಟಿಕ್ಕರ್‌ನಲ್ಲಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಿಳಿಸಿದರೆ ತಕ್ಷಣ ಪೊಲೀಸರು ಸ್ಥಳಕ್ಕೆ ಧಾವಿಸುತ್ತಾರೆ. ಇದರಿಂದ ಅಪರಾಧಗಳನ್ನು ತಡೆಯಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೃಷ್ಣರಾಜ ಉಪ ವಿಭಾಗದ ಎಸಿಪಿ ಗಂಗಾಧರ್ ಸ್ವಾಮಿ, ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ರಾಜು, ಸಬ್‌ಇನ್‌ಸ್ಪೆಕ್ಟರ್ ಸಿದ್ದಮ್ಮ, ಪೊಲೀಸ್ ಸಿಬ್ಬಂದಿ, ಬಿಜೆಪಿ ಕೆ.ಆರ್.ಕ್ಷೇತ್ರದ ಉಪಾಧ್ಯಕ್ಷ ಸಂತೋಷ್ ಶಂಭು, ಆಶ್ರಯ ಸಮಿತಿ ಸದಸ್ಯ ಹೇಮಂತ್ ಕುಮಾರ್, ಸಂತೋಷ್, ಶಿವು, ಮನು, ಶಾರದಾ, ವಿಕ್ರಾಂತ್ ರಾಜು, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಮೂಲದ ಸಿನಿ ಶೆಟ್ಟಿಗೆ 'ಫೆಮಿನಾ ಮಿಸ್ ಇಂಡಿಯಾ' ಕಿರೀಟ

ಮುಂಬೈ: ಮುಂಬೈನ ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಭಾನುವಾರ (ಜುಲೈ 3) ನಡೆದ 'ಫೆಮಿನಾ ಮಿಸ್ ಇಂಡಿಯಾ ವರ್ಲ್ಡ್–2022' (Femina Miss India 2022) ಕಾರ್ಯಕ್ರಮದಲ್ಲಿ ಕರ್ನಾಟಕ ಮೂಲದ ಸಿನಿ ಶೆಟ್ಟಿ ಅವರು ಈ ಬಾರಿಯ 'ಫೆಮಿನಾ ಮಿಸ್ ಇಂಡಿಯಾ' ಪಟ್ಟವನ್ನು ತಮ್ಮದಾಗಿಸಿಕೊಂಡಿದ್ದಾರೆ.




2020ರ ಮಿಸ್ ಇಂಡಿಯಾ ಕಿರೀಟ ಪಡೆದುಕೊಂಡಿದ್ದ ಮಾನಸಾ ವಾರಣಾಸಿ ಅವರು ತಮ್ಮ ಉತ್ತರಾಧಿಕಾರಿ ಸಿನಿ ಶೆಟ್ಟಿ ಅವರಿಗೆ ಕಿರೀಟ ತೊಡಿಸುವ ಮೂಲಕ ಈ ಬಾರಿ 'ಫೆಮಿನಾ ಮಿಸ್ ಇಂಡಿಯಾ' ಫಲಿತಾಂಶ ಘೋಷಿಸಿದರು.

ಯಾರು ಈ ಸಿನಿ ಶೆಟ್ಟಿ: ಕರ್ನಾಟಕದ ಉಡುಪಿಯ ಬನ್ನಂಜೆ ಮೂಲದವರಾದ ಸಿನಿ ಸದಾನಂದ ಶೆಟ್ಟಿ ಜನಿಸಿದ್ದು ಮುಂಬೈನಲ್ಲಿ. 21ರ ಹರೆಯದ ಸಿನಿ ಶೆಟ್ಟಿ ಅಕೌಂಟ್ ಮತ್ತು ಫೈನಾನ್ಸ್‌ನಲ್ಲಿ ಪದವಿ ಪಡೆದಿದ್ದಾರೆ. ಸದ್ಯ ಅವರು ಸಿಎಫ್‌ಎ ವೃತ್ತಿಪರ ಕೋರ್ಸ್ ಕಲಿಯುತ್ತಿದ್ದಾರೆ. ವಿದ್ಯಾಭ್ಯಾಸದ ಜೊತೆಗೆ ಭರತನಾಟ್ಯ, ನೃತ್ಯದಲ್ಲೂ ಅವರು ಆಸಕ್ತಿ ಹೊಂದಿದ್ದಾರೆ.

5ನೇ ಟೆಸ್ಟ್: ಸೋಲಿನ ಸುಳಿಯಲ್ಲಿ ಭಾರತ

ಬರ್ಮಿಂಗ್ ಹ್ಯಾಂ, ಜು.4– ಇಂಗ್ಲೆಂಡ್ ವಿರುದ್ಧದ 5ನೇ ಟೆಸ್ಟ್ ಪಂದ್ಯದಲ್ಲಿ ಭಾರತ ಸೋಲಿನ ಸುಳಿಗೆ ಸಿಲುಕಿದೆ. ಮತ್ತೊಂದೆಡೆ ಇಂಗ್ಲೆಂಡ್ 4ನೇ ದಿನದಂತ್ಯಕ್ಕೆ 2ನೇ ಇನ್ನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 259 ಗಳಿಸಿದ್ದು, ಗೆಲುವಿಗಾಗಿ ಅಂತಿಮ ದಿನದಾಟದಲ್ಲಿ 119 ರನ್ ಗಳಿಸಬೇಕಿದೆ.



ಇಂದು 3 ವಿಕೆಟ್ ನಷ್ಟಕ್ಕೆ 125 ರನ್‌ಗಳಿಂದ ಆಟ ಮುಂದುವರೆಸಿದ ಭಾರತ ದ್ವಿತೀಯ ಇನ್ನಿಂಗ್ಸ್‌ನಲ್ಲಿ 245 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಇಂಗ್ಲೆಂಡ್‌ಗೆ 378 ರನ್‌ಗಳ ಗೆಲುವಿನ ಗುರಿ ನೀಡಿತು. ಭಾರತದ ಪರ ಚೇತೇಶ್ವರ ಪೂಜಾರಾ 66, ಪಂತ್ 57, ಶ್ರೇಯಸ್ ಅಯ್ಯರ್ 19, ರವೀಂದ್ರ ಜಡೇಜಾ 23, ಶಮಿ 13ರನ್ ಗಳಿಸಿದರು. ಇಂಗ್ಲೆಂಡ್ ಪರ ನಾಯಕ ಬೆನ್ ಸ್ಟೋಕ್ಸ್ 4, ಸ್ಟುವರ್ಟ್ ಬ್ರಾಡ್, ಮ್ಯಾಟಿ ಪಾಟ್ಸ್ ತಲಾ 2, ಜಾಕ್ ಲೀಚ್, ಜೇಮ್ಸ್ ಆಂಡರ್‌ಸನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಭಾರತ ನೀಡಿದ ಗುರಿ ಬೆನ್ನತ್ತಿದ ಇಂಗ್ಲೆಂಡ್ ಪರ ಅಲೆಕ್ಸ್ ಲೀಸ್ 56, ಝಾಕ್ ಕ್ರಾಲಿ 46 ಗಳಿಸಿ ಔಟಾದರು. 76 ರನ್ ಗಳಿಸಿರುವ ಜೋ ರೂಟ್ ಹಾಗೂ 72 ರನ್ ಗಳಿಸಿರುವ ಜಾನಿ ಬೈರ್ ಸ್ಟೋ 5ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ಬೂಮ್ರಾ 2 ವಿಕೆಟ್ ಪಡೆದರು.

ಎಐಡಿಎಂಕೆ ಏಕ ನಾಯಕತ್ವ: 6ಕ್ಕೆ 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಪಕ್ಷದ ಏಕ ನಾಯಕತ್ವ ವಿಷಯಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ ಪಳನಿಸ್ವಾಮಿ (ಇಪಿಎಸ್) ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಜುಲೈ 6ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ. ಎಐಎಡಿಎಂಕೆ ಕಾರ್ಯಕಾರಿಣಿ ಸಭೆಯಲ್ಲಿ ಅಘೋಷಿತ ನಿರ್ಣಯಗಳನ್ನು ಅಂಗೀಕರಿಸದಂತೆ ಮದ್ರಾಸ್ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಇಪಿಎಸ್ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಜೆ.ಕೆ.ಮಹೇಶ್ವರಿ ಅವರಿದ್ದ ರಜಾಕಾಲದ ಪೀಠವು, 6ರಂದು ವಿಚಾರಣೆ ನಡೆಸುವುದಾಗಿ ಹೇಳಿದೆ.

ಇಪಿಎಸ್ ಬಣ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಸ್.ವೈದ್ಯನಾಥನ್, ಹೈಕೋರ್ಟ್ ವಿಭಾಗೀಯ ಪೀಠವು ಮಧ್ಯರಾತ್ರಿ ವರೆಗೂ ಕಲಾಪ ನಡೆಸಿ, ಜೂನ್ 23 ರ ಬೆಳಿಗ್ಗೆ 4 ಗಂಟೆಗೆ ಆದೇಶ ನೀಡಿದೆ. ಯಾವುದೇ ಅಘೋಷಿತ ನಿರ್ಣಯ ತೆಗೆದುಕೊಳ್ಳದಂತೆ ನೀಡಿರುವ ಆದೇಶವು ಪಕ್ಷದ ಆಂತರಿಕ ಕಾರ್ಯಚಟುವಟಿಕೆಗೆ ಅಡ್ಡಿಪಡಿಸುತ್ತದೆ ಎಂದು ಹೇಳಿದರು. ಪಕ್ಷದ ಸಂಯೋಜಕ ಒ. ಪನ್ನೀರಸೆಲ್ವಂ ಬಣದ ವಕೀಲರು ತುರ್ತು ವಿಚಾರಣೆಯ ಮನವಿಯನ್ನು ವಿರೋಧಿಸಿದರು.

ಮೈಸೂರಲ್ಲಿ ಉದ್ಯಮ ಸ್ಥಾಪನೆಗೆ ವಿಫುಲ ಅವಕಾಶ: ಯದುವೀರ್



ಮೈಸೂರು, ಜು.4(ಎಂಕೆ)– ಮೈಸೂರಿನಲ್ಲಿ ನವೋದ್ಯಮಿಗಳಿಗೆ ಪೂರಕ ವಾತಾವರಣವಿದ್ದು, ಸೈಬರ್ ಸೆಕ್ಯೂರಿಟಿ ತರಬೇತಿ ಸೇರಿದಂತೆ ಹಲವು ಬಗೆಯ ಹೊಸ ಉದ್ದಿಮೆಗಳ ಸ್ಥಾಪಿಸಲು ವಿಫುಲ ಅವಕಾಶಗಳಿವೆ ಎಂದು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ 'ಮೈಸೂರು ಸ್ಟಾರ್ಟ್–ಅಪ್ ವೇದಿಕೆ ಮತ್ತು ಸಮಾವೇಶ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೈಬರ್ ವರ್ಲ್ಡ್ ಫೌಂಡೇಶನ್ ಸ್ಥಾಪಿಸುವ ಮೂಲಕ ಸೈಬರ್ ಸೆಕ್ಯೂರಿಟಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸೈಬರ್ ಸೆಕ್ಯೂರಿಟಿಗೆ ಸಂಬಂಧಿಸಿದಂತೆ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ರೂಪಿಸಲಾಗುವುದು. ಈ ಮೂಲಕ ಹೊಸ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು.

ಎಐಎಂಐ ಕನ್ಸಲ್ಟಿಂಗ್‌ನ ರವಿಶಂಕರ್ ಮಾತನಾಡಿ, ಮೈಸೂರು ನವೋದ್ಯಮದ ಸ್ಥಳವಾಗಿದ್ದು, ಬೆಂಗಳೂರು ಸಿಲಿಕಾನ್ ಸಿಟಿಯಾಗಿರುವುದಕ್ಕೆ ಮೈಸೂರು ರಾಜಮನೆತನದ ಕೊಡುಗೆ ಕಾರಣ. ಇಂದು ಒಬ್ಬರ ಬೆನ್ನಿಗೆ ಮತ್ತೊಬ್ಬರು ನಿಂತು ಕೆಲಸ ಮಾಡಿದರಷ್ಟೇ ಎಲ್ಲರೂ ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ 'ಮೈಸೂರು ಸ್ಟಾರ್ಟ್–ಅಪ್ ವೇದಿಕೆ ಮತ್ತು ಸಮಾವೇಶ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಮೂರು ದಿನಗಳ ಸಮಾವೇಶ: ಮಾನಸಗಂಗೋತ್ರಿಯ ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿ ಆ.5, 6 ಮತ್ತು 7ರಂದು 'ಮೈಸೂರು ಸ್ಟಾರ್ಟ್–ಅಪ್ ವೇದಿಕೆ ಮತ್ತು ಸಮಾವೇಶ' ನಡೆಯಲಿದೆ. ಹಲವಾರು ಖಾಸಗಿ ಸಂಸ್ಥೆಗಳು, ಕೈಗಾರಿಕೆಗಳು, ಸರ್ಕಾರಿ ಸಂಸ್ಥೆಗಳು ಸಮಾವೇಶದಲ್ಲಿ ಭಾಗ ವಹಿಸಲಿದ್ದು, ಉದ್ದಿಮೆಗಳಾಗುವವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ವೇದಿಕೆ ಕಲ್ಪಿಸಲಾಗುವುದು.

ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಸ್ಕ್ಯಾನ್ ರೇ ಟೆಕ್ನಾಲಜಿಸ್‌ನ ಎಂಡಿ ವಿಶ್ವಪ್ರಸಾದ್ ಆಳ್ವಾ, 1ಬ್ರಿಡ್ಜ್ ಮುಖ್ಯಸ್ಥ ಮದನ್ ಪದಕಿ, ಎಕ್ಸೆಲ್ ಪಬ್ಲಿಕ್ ಸ್ಕೂಲ್ ಮುಖ್ಯಸ್ಥ ಡಾ.ಸದನ್ವ ಮತ್ತಿತರರು ಉಪಸ್ಥಿತರಿದ್ದರು.



ತರಕಾರಿ ಬೆಲೆ ಇಳಿಕೆಯತ್ತ ಹಣ್ಣುಗಳ ದರ ಗಗನದತ್ತ

ಮೈಸೂರು, ಜು.4(ಎಂಕೆ)– ಬಹು ಬೇಡಿಕೆಯ ಈರುಳ್ಳಿ, ಟೊಮ್ಯಾಟೋ ಸೇರಿದಂತೆ ಇನ್ನಿತರೆ ತರಕಾರಿಗಳ ಬೆಲೆ ಕಡಿಮೆಯಾದರೆ, ಹಣ್ಣುಗಳು ಕೈಗೆಟುಕದಂತಾಗಿವೆ.

ಕಳೆದ ತಿಂಗಳು ಕೆ.ಜಿಗೆ 30 ರಿಂದ 40 ರೂ. ಇದ್ದ ಟೊಮ್ಯೊಟೋ ಬೆಲೆಯಲ್ಲಿ ಅರ್ಧದಷ್ಟು ಕಡಿಮೆಯಾಗಿದ್ದು, 10–20 ರೂ.ಗೆ ಲಭ್ಯವಿದೆ. ಹಾಗೆಯೇ ನುಗ್ಗೆಕಾಯಿ, ಈರುಳ್ಳಿ, ಹಸಿ ಮೆಣಸಿನಕಾಯಿ, ಬೀನ್ಸ್ ಸೇರಿದಂತೆ ಎಲ್ಲಾ ಬಗೆಯ ತರಕಾರಿಗಳ ಬೆಲೆ ಇಳಿಕೆಯಾಗಿರುವುದು ಗ್ರಾಹಕರು ಕೊಂಚ ನಿರಾಳರಾಗುವಂತೆ ಮಾಡಿದೆ.

ಮೈಸೂರಿನ ದೇವರಾಜ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆ ಸೇರಿದಂತೆ ನಗರದೆಲ್ಲೆಡೆ ಇರುವ ಸಣ್ಣ ಸಣ್ಣ ಮಾರುಕಟ್ಟೆಗಳಲ್ಲಿ, ರಸ್ತೆ ಬದಿ ಹಾಗೂ ತಳ್ಳುವ ಗಾಡಿಯಲ್ಲಿ ತರಕಾರಿಗಳನ್ನು ಮಾರಾಟ ಮಾಡುವವರ ಬಳಿ ಹುಳಿ ಟೊಮ್ಯಾಟೋ ಹಾಗೂ ಜಾಮ್ ಟೊಮ್ಯಾಟೋ ಕೆ.ಜಿಗೆ 10–20 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ.

ನುಗ್ಗೆಕಾಯಿ ಕೆಜಿಗೆ 30 ರೂ, ಹಸಿ ಮೆಣಸಿನಕಾಯಿ(ಹೆಚ್ಚು ಖಾರ) 30–40 ರೂ., ಹೀರೆಕಾಯಿ 30 ರೂ., ದಪ್ಪ ಮೆಣಸಿನಕಾಯಿ 30–40 ರೂ., ಬೀನ್ಸ್ 50 ರೂ., ಕ್ಯಾರೆಟ್ 30 ರೂ., ಬೀಟ್‌ರೂಟ್ 30 ರೂ., ಆಲೂಗೆಡ್ಡೆ 30 ರೂ., ಬೆಂಡೆಕಾಯಿ 30 ರೂ., ಎಲೆ ಕೋಸು 20 ರೂ., ಗೆಡ್ಡೆ ಕೋಸು 30., ಕೊತ್ತಂಬರಿ ಸೊಪ್ಪು ಕಟ್ಟಿಗೆ 5–10 ಮತ್ತು ಪುದಿನ ಸೊಪ್ಪು 5 ರೂ. ಇದೆ ಎಂದು ತರಕಾರಿ ವ್ಯಾಪಾರಿ ಅಬು ಇಬ್ರಾಹಿಂ ಹಾಗೂ ಹಂಸರಾಜ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಹಾಗೆಯೇ ಈರುಳ್ಳಿ ಕೆಜಿಗೆ ಗಾತ್ರಕ್ಕೆ ಅನುಗುಣವಾಗಿ 15–25 ರೂ., ಆಲೂಗೆಡ್ಡೆ 30 ರೂ., ಬೆಳ್ಳುಳ್ಳಿ 20–80 ರೂ., ಹಸಿಶುಂಠಿ 40 ರೂ., ಇದೆ ಎಂದು ಈರುಳ್ಳಿ ವ್ಯಾಪಾರಿ ಪ್ರಕಾಶ್ ತಿಳಿಸಿದರೆ, ಬಿಸಿಲು ಕಡಿಮೆಯಾದಂತೆ ನಿಂಬೆಹಣ್ಣಿನ ಬೆಲೆಯೂ ಕಡಿಮೆಯಾಗಿದ್ದು, 10 ರೂ.ಗೆ 10 ನಿಂಬೆಹಣ್ಣು(ಗಾತ್ರದಲ್ಲಿ ಚಿಕ್ಕದು) ಕೊಡಲಾಗುತ್ತಿದೆ. ದಪ್ಪಗಿರುವ ನಿಂಬೆ ಹಣ್ಣುಗಳನ್ನು 10 ರೂ.ಗೆ 5ರಂತೆ ಮಾರಾಟ ಮಾಡಲಾಗುತ್ತಿದೆ ಎಂದು ನಿಂಬೆಹಣ್ಣಿನ ವ್ಯಾಪಾರಿ ಚಂದ್ರು ಹೇಳಿದರು.

ಕೈಗೆಟಕದ ಹಣ್ಣುಗಳು: ಒಂದೆಡೆ ತರಕಾರಿ ಬೆಲೆ ಕಡಿಮೆಯಾಗಿದ್ದರೆ, ಮತ್ತೊಂದೆಡೆ ಹಣ್ಣುಗಳ ಬೆಲೆ ಗಗನಕ್ಕೇರುತ್ತಿದ್ದು, ಕೊಂಡು ತಿನ್ನಲು ಹಿಂದೆ–ಮುಂದೆ ನೋಡುವಂತಾಗಿದೆ. ಸೇಬು ಕೆಜಿಗೆ 180–200 ರೂ., ಇದ್ದರೆ, ಕಿತ್ತಲೆ 160 ರೂ., ಮೊಸಂಬಿ 100 ರೂ., ಸಪೋಟಾ 80 ರೂ., ದಾಳಿಂಬೆ 180 ರೂ., ಬಾದಾಮಿ ಮಾವಿನ ಹಣ್ಣು 60 ರೂ., ದ್ರಾಕ್ಷಿ 80 ರೂ., ಹಸಿರು ಸೇಬು 240 ರೂ., ಅನಾನಸ್ 30 ರೂ., ಕಲ್ಲಂಗಡಿ 20 ರೂ., ಬಾಳೆ ಹಣ್ಣು(ಏಲಕ್ಕಿ) 80–90 ರೂ., ಪಚ್ಚಬಾಳೆ 20–30 ರೂ.,ನಂತೆ ಮಾರಾಟವಾಗುತ್ತಿದೆ.

ಬೆಲೆ ಕೇಳಿ ಖರೀದಿಸಿ: ದೇವರಾಜ ಮಾರುಕಟ್ಟೆ ಸೇರಿದಂತೆ ಕೆಲವೆಡೆ ವ್ಯಾಪಾರಿಗಳು ತಮಗಿಷ್ಟ ಬಂದಂತೆ ಹಣ್ಣುಗಳಿಗೆ ಬೆಲೆ ಹೇಳುತ್ತಿದ್ದಾರೆ. ಸೇಬಿನ ಬೆಲೆ ಕೇಳಿದರೆ ಬೇರೆ ಅಂಗಡಿಯವರನ್ನು ಬೇಕಾದರೆ ಕೇಳಿ ನಮ್ಮ ಅಷ್ಟು–ಇಷ್ಟು ಎನ್ನುತ್ತಾರೆ. ಬೆಲೆ ಕಡಿಮೆ ಇದ್ದರೂ ಗ್ರಾಹಕರನ್ನು ಗಮನಿಸಿ ಮಾರಾಟ ಮಾಡುತ್ತಾರೆ. ಆದ್ದರಿಂದ ಗ್ರಾಹಕರು ಎಚ್ಚರಿಕೆಯಿಂದ ಖರೀದಿಸಬೇಕು ಎಂದು ಕೆಲ ಪ್ರಜ್ಞಾವಂತ ನಾಗರಿಕರು ಗ್ರಾಹಕರಲ್ಲಿ ಮನವಿ ಮಾಡಿದ್ದಾರೆ.

ಹೋಟೆಲ್, ರೆಸ್ಟೋರೆಂಟ್‌ಗಳು ಬಿಲ್‌ನಲ್ಲಿ ಸೇವಾ ಶುಲ್ಕ ಸೇರಿಸುವಂತಿಲ್ಲ: ಸಿಸಿಪಿಎ ಆದೇಶ

ನವದೆಹಲಿ: ಹೋಟೆಲ್, ರೆಸ್ಟೋರೆಂಟ್‌ಗಳು ಬಿಲ್‌ನಲ್ಲಿ ಸ್ವಯಂಚಾಲಿತವಾಗಿ ಸೇವಾ ಶುಲ್ಕ ವಿಧಿಸದಂತೆ ಕೇಂದ್ರೀಯ ಗ್ರಾಹಕರ ರಕ್ಷಣಾ ಪ್ರಾಧಿಕಾರ ಸೋಮವಾರ ಆದೇಶ ಹೊರಡಿಸಿದೆ. ಒಂದು ವೇಳೆ ಈ ಆದೇಶ ಉಲ್ಲಂಘನೆಯಾದಲ್ಲಿ ಗ್ರಾಹಕರು ದೂರು ದಾಖಲಿಸಲು ಅವಕಾಶ ನೀಡಿದೆ. ದೂರುಗಳು ಹೆಚ್ಚುತ್ತಿರುವ ನಡುವೆ, ಅನ್ಯಾಯಯುತ ವ್ಯಾಪಾರ ಪದ್ಧತಿ ತಡೆಗೆ ಪ್ರಾಧಿಕಾರ ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಮಾರ್ಗಸೂಚಿಗಳ ಪ್ರಕಾರ, ಹೋಟೆಲ್, ರೆಸ್ಟೋರೆಂಟ್‌ಗಳು ಸ್ವಯಂ ಚಾಲಿತವಾಗಿ ಸೇವಾ ಶುಲ್ಕ ವಿಧಿಸುವಂತಿಲ್ಲ ಅಥವಾ ಬಿಲ್ ನಲ್ಲಿಯೇ ಕಡಿತ ಮಾಡುವಂತಿಲ್ಲ. ಇತರ ಯಾವುದೇ ಹೆಸರಿನಲ್ಲಿ ಸೇವಾ ಶುಲ್ಕವನ್ನು ವಸೂಲಿ ಮಾಡಬಾರದು ಎಂದು ಹೇಳಲಾಗಿದೆ. ಹೋಟೆಲ್, ರೆಸ್ಟೋರೆಂಟ್‌ಗಳು ಸೇವಾ ಶುಲ್ಕ ನೀಡುವಂತೆ ಗ್ರಾಹಕರನ್ನು ಒತ್ತಾಯಿಸುವಂತಿಲ್ಲ. ಸ್ವಯಂ ಪ್ರೇರಿತರಾಗಿ ಗ್ರಾಹಕರು ಸೇವಾ ಶುಲ್ಕ ನೀಡಬಹುದು, ಅದು ಅವರಿಗೆ ಬಿಟ್ಟ ಆಯ್ಕೆಯಾಗಿದೆ ಎಂದು ಗ್ರಾಹಕರಿಗೆ ಸ್ಪಷ್ಟ ಮಾಹಿತಿ ನೀಡಲಾಗಿದೆ.

ಒಂದನೇ ಪುಟದಿಂದ

ಆರೆಂಜ್ ಅಲರ್ಟ್ ಘೋಷಣೆ

ತಂತ್ರಗಳ ಕುರಿತು ಚರ್ಚೆ ನಡೆಸಿದ್ದಾರೆ. ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ನದಿ ತೊರೆಗಳು ತುಂಬಿ ಹರಿಯುತ್ತಿದ್ದು, ಜಿಲ್ಲೆಯ ಕೆಲವು ಕಡೆ ಪ್ರವಾಹ ಸೃಷ್ಟಿಯಾಗುವ ಆತಂಕ ಕಾಡುತ್ತಿದೆ. ಮೂರ್ನಾಡು ಸಮೀಪದ ಬಲಮುರಿ ಹಾಗೂ ಬೇತ್ರಿ ಸೇತುವೆ ಬಳಿ ಕಾವೇರಿ ನದಿ ಮೈದುಂಬಿ ಹರಿಯುತ್ತಿದೆ. ಇದರಿಂದಾಗಿ ಸಿದ್ದಾಪುರ ಸಮೀಪದ ಕರಡಿಗೋಡು ಮತ್ತು ನೆಲ್ಯಹುದಿಕೇರಿ ಬಳಿ ಪ್ರವಾಹ ಸ್ಥಿತಿ ಎದುರಾಗಿದೆ. ಕಂದಾಯ ಇಲಾಖೆ ನದಿ ತಟದ ನಿವಾಸಿಗಳಿಗೆ ನೋಟೀಸ್ ನೀಡಿದ್ದು, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದೆ. ಹಾರಂಗಿ ಜಲಾಶಯಕ್ಕೂ ಭಾರೀ ಪ್ರಮಾಣದಲ್ಲಿ ನೀರಿನ ಒಳಹರಿವು ಇರುವ ಪರಿಣಾಮ ನದಿ ಪಾತ್ರಕ್ಕೆ 12,700 ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ. ಗಾಳಿ ಸಹಿತ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಚೆಸ್ಕಾಂ ಇಲಾಖೆಗೆ ಭಾರೀ ಹಾನಿಯಾಗುತ್ತಿದೆ. ಜೂನ್ 1ರಿಂದ ಜುಲೈ 4ರವರೆಗೆ ಜಿಲ್ಲೆಯಾದ್ಯಂತ 480 ವಿದ್ಯುತ್ ಕಂಬಗಳು, 10 ಟ್ರಾನ್ಸ್‌ಫಾರ್ಮರ್‌ಗಳು ಹಾನಿಗೊಂಡಿವೆ. ಮಾತ್ರವಲ್ಲದೇ ಮರ ಮುರಿದು ಬಿದ್ದ ಪರಿಣಾಮ 2 ಕಿ.ಮೀ. ವಿದ್ಯುತ್ ತಂತಿಗಳು ತುಂಡಾಗಿವೆ. ಇದರಿಂದಾಗಿ ಚೆಸ್ಕಾಂಗೆ ಒಟ್ಟು 58.50 ಲಕ್ಷ ರೂ.ಗಳ ಹಾನಿಯಾಗಿರಬಹುದು ಎಂದು ಅಂದಾಜಿಸಲಾಗಿದೆ. ಮಳೆಯಿಂದಾಗಿ 5 ತಾಲೂಕುಗಳಲ್ಲಿ 9 ಮನೆಗಳಿಗೆ ಭಾಗಷಃ ಹಾನಿಯಾಗಿದೆ. 6 ಲಘು ಭೂ ಕುಸಿತ ಪ್ರಕರಣಗಳು ದಾಖಲಾಗಿದೆ ಎಂದು ಜಿಲ್ಲಾ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ.

ತಲಕಾವೇರಿ ಭಾಗಮಂಡಲ ವ್ಯಾಪ್ತಿಯಲ್ಲಿ ಕಳೆದ ಕೆಲವು ದಿನಗಳಿಂದ ಭಾರೀ ಮಳೆ ಸುರಿಯುತ್ತಿರುವ ಪರಿಣಾಮ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಏರಿಕೆ ಕಂಡಿದ್ದು, ತ್ರಿವೇಣಿ ಸಂಗಮ ಜಲಾವೃತವಾಗಿದೆ. ಭಾಗಮಂಡಲ–ಅಯ್ಯಂಗೇರಿ ರಸ್ತೆ ಮೇಲೆ 3 ಅಡಿ ನೀರು ಹರಿಯುತ್ತಿದ್ದು, 2ನೇ ದಿನವೂ ವಾಹನ ಸಂಚಾರ ಸ್ಥಗಿತವಾಗಿದೆ. ಭಾಗಮಂಡಲ ಶ್ರೀ ಭಗಂಡೇಶ್ವರ ದೇವಾಲಯದ ಆವರಣಕ್ಕೆ ಕಾವೇರಿ ನದಿ ನೀರು ನುಗ್ಗಿದೆ. ಭಾಗಮಂಡಲದಲ್ಲಿರುವ ವಾಜಪೇಯಿ ವಸತಿ ಶಾಲೆಗೆ ವಿದ್ಯುತ್ ಪೂರೈಕೆ ಬಂದ್ ಆಗಿರುವ ಹಿನ್ನೆಲೆಯಲ್ಲಿ ಮಕ್ಕಳಿಗೆ 8 ದಿನಗಳ ರಜೆಯನ್ನು ಘೋಷಿಸಲಾಗಿದೆ.

ವಿರಾಜಪೇಟೆ ತಾಲೂಕಿನ ತೋರಾ ಬಳಿ ಭಾರತಿ ಎಂಬುವರ ಮನೆಯ ಮೇಲೆ ಮರ ಮುರಿದು ಬಿದ್ದ ಪರಿಣಾಮ ಮನೆಗೆ ಹಾನಿಯಾಗಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಕಂದಾಯ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿ ಸ್ಥಳಕ್ಕೆ ತೆರಳಿ ಮನೆ ಹಾನಿಯ ಕುರಿತು ಪರಿಶೀಲನೆ ನಡೆಸಿದ್ದಾರೆ. ಮಡಿಕೇರಿಯ ಚಾಮುಂಡೇಶ್ವರಿ ನಗರದಲ್ಲಿ ಅಲ್ಪ ಪ್ರಮಾಣದ ಭೂ ಕುಸಿತವಾಗಿರುವ ಬಗ್ಗೆ ವರದಿಯಾಗಿದೆ.

ಪೊನ್ನಂಪೇಟೆ ತೂಚಮಕೇರಿಯಲ್ಲಿ ಮರ ಮುರಿದು ಬಿದ್ದು, ಚಲಿಸುತ್ತಿದ್ದ ಜೀಪೊಂದು ಕೂದಲೆಳೆಯ ಅಂತರದಲ್ಲಿ ಅಪಾಯದಿಂದ ಪಾರಾಗಿದೆ. ಜೀಪು ಚಾಲಕ ಕೊಳ್ಳಿಮಾಡ ಜೀವನ್ ಎಂಬುವರ ಸಮಯ ಪ್ರಜ್ಞೆಯಿಂದ ಸಂಭಾವ್ಯ ಅಪಾಯವೂ ತಪ್ಪಿದೆ. ಮರ ಮುರಿದು ಬೀಳುವ ಸಂದರ್ಭ ವಿದ್ಯುತ್ ಕಂಬ ಕೂಡ ಮುರಿದು ಬಿದ್ದು, ವಿದ್ಯುತ್ ತಂತಿಗಳು ಜೀಪಿನ ಮೇಲೆ ಬಿದ್ದಿವೆ. ಲೈನ್‌ನಲ್ಲಿ ವಿದ್ಯುತ್ ಸ್ಥಗಿತವಾಗಿದ್ದ ಹಿನ್ನೆಲೆಯಲ್ಲಿ ಭಾರೀ ಅಪಾಯವೂ ತಪ್ಪಿದಂತಾಗಿದೆ.

ಹಾಕತ್ತೂರು, ಸೋಮವಾರಪೇಟೆ ತಾಲೂಕಿನ ಗೌಡಳ್ಳಿ, ಶನಿವಾರಸಂತೆ ಸಮೀಪದ ಚಂಗಡಳ್ಳಿ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಮರಗಳು ಮುರಿದು ಬಿದ್ದಿರುವ ಬಗ್ಗೆ ವರದಿಯಾಗಿದ್ದು, ಅರಣ್ಯ ಇಲಾಖೆ ಮರಗಳನ್ನು ತೆರವುಗೊಳಿಸಿದೆ. ವಿದ್ಯುತ್ ಕಂಬಗಳು, ತಂತಿಗಳಿಗೂ ಹಾನಿಯಾಗಿದ್ದು, ದುರಸ್ಥಿ ಕಾರ್ಯ ನಡೆಸಲಾಗುತ್ತಿದೆ.

ಭೂಕಂಪನ: ದೇವರ ಮೊರೆ

ಮಡಿಕೇರಿ,ಜು.4– ಕೊಡಗು ದಕ್ಷಿಣ ಕನ್ನಡ ಗಡಿ ಗ್ರಾಮಗಳಲ್ಲಿ ಕಳೆದ ಕೆಲ ದಿನಗಳ ಹಿಂದೆ ಸರಣಿ ಭೂಕಂಪನದ ಹಿನ್ನೆಲೆಯಲ್ಲಿ ಪ್ರಾಕೃತಿಕ ವಿಕೋಪ ತಡೆಯಲು ಅಲ್ಲಿನ ಜನರು ದೇವರ ಮೊರೆ ಹೋಗಿದ್ದಾರೆ. ಪ್ರಾಕೃತಿಕ ವಿಕೋಪ ಸಂಭವಿಸದಿರಲಿ ಎಂದು ದಕ್ಷಿಣ ಕನ್ನಡ ಜಿಲ್ಲೆಯ ತೊಡಿಕಾನ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗಿದೆ.

ಕೊಡಗು ಹಾಗೂ ದಕ್ಷಿಣ ಕನ್ನಡದ ಗಡಿಯಲ್ಲಿರುವ 18 ಗ್ರಾಮಗಳ ಜನರು ಸೇರಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಭೂಕಂಪನ, ಭೂಕುಸಿತ ಮತ್ತು ಪ್ರವಾಹದಂತಹ ಪ್ರಾಕೃತಿಕ ವಿಕೋಪಗಳು ಸಂಭವಿಸದಿರಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದಾರೆ. ಸಂಪಾಜೆ, ಕರಿಕೆ, ಕುದುರೆಪಾಯ, ಚೆಂಬು ಸುಳ್ಯದ ತೊಡಿಕಾನ, ಗೂನಡ್ಕ ಮತ್ತಿತ್ತರ ಗ್ರಾಮಗಳ ಭಕ್ತರು ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಎಸಿಬಿ ಭ್ರಷ್ಟಾಚಾರದ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ತರಾಟೆ

ಎಸಿಬಿ ಎಡಿಜಿಪಿ ವಿವರ ಮಾಹಿತಿ, ಬಿ–ರಿಪೋರ್ಟ್ ನೀಡಲು ಅಡ್ವೋಕೇಟ್ ಜನರಲ್‌ಗೆ ತಾಕೀತು

ಬೆಂಗಳೂರು, ಜು.4– ಭ್ರಷ್ಟಾಚಾರ ನಿಗ್ರಹ ದಳದಲ್ಲಿ (ಎಸಿಬಿ) ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ವಿಚಾರಣೆ ವೇಳೆ ಕೋರ್ಟ್ ಹಾಲ್‌ನಲ್ಲೇ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಅರ್ಜಿ ವಿಚಾರಣೆ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಅವರ ಪೀಠದಲ್ಲಿ ನಡೆಯುತ್ತಿತ್ತು. ಈ ವೇಳೆ ಭ್ರಷ್ಟಾಚಾರ ನಿಗ್ರಹದಳದ ಕಾರ್ಯವೈಖರಿ ಕುರಿತು ನ್ಯಾಯಮೂರ್ತಿಗಳು ಕಿಡಿಕಾರಲಾರಂಭಿಸಿದರು. ಎಸಿಬಿ ಎಡಿಜಿಪಿ ತುಂಬಾ ಪವರ್‌ಫುಲ್ ಆಗಿದ್ದಾರಂತೆ ಎಂದು ಹೇಳಿದ ಅವರು ಈ ಎಡಿಜಿಪಿ ಬಂದ ನಂತರ ಎಷ್ಟು ಪ್ರಕರಣಗಳಿಗೆ 'ಬಿ' ರಿಪೋರ್ಟ್ ಸಲ್ಲಿಸಲಾಗಿದೆ ಎಂದು ಪ್ರಶ್ನಿಸಿದರು.

ಐಎಎಸ್ ಅಧಿಕಾರಿಯ ಮನೆ ಮೇಲೆ ನಡೆದ ದಾಳಿಯಲ್ಲಿ ನಾಲ್ಕೂವರೆ ಕೋಟಿ ಹಣ ಸಿಗುತ್ತದೆ. 6 ಕೆಜಿ ಚಿನ್ನ ಸಿಗುತ್ತದೆ. ಇಂತಹ ಕೇಸ್‌ನಲ್ಲಿ ಬಿ ರಿಪೋರ್ಟ್ ಹಾಕಿದ್ದು ಏಕೆ? ಹೀಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದವರಿಗೂ ಬಿ ರಿಪೋರ್ಟ್ ಹಾಕುತ್ತೀರಾ? ಐಎಎಸ್ ಲಾಬಿಗೆ ಒಳಗಾಗುತ್ತೀದ್ದೀರಿ? ಡಿಸಿ ಐಎಎಸ್ ಎಂಬ ಕಾರಣಕ್ಕಾಗಿ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲವೇ? ರಾಜ್ಯದಲ್ಲಿ ಅಧಿಕಾರಗಳೇ ದರ್ಬಾರ್ ಮಾಡಲು ಬಿಟ್ಟಿದ್ದೀರಿ. ರಾಜ್ಯ ಸರ್ಕಾರವೂ ಕೂಡ ಅಪರಾಧದ ಭಾಗವಾಗಿರುವಂತಿದೆ ಎಂದು ತರಾಟೆಗೆ ತೆಗೆದುಕೊಂಡರು. ಅಲ್ಲದೇ ಜು.7ರೊಳಗೆ ಬಿ ರಿಪೋರ್ಟ್‌ಗಳ ಸಮಗ್ರ ಮಾಹಿತಿ ನೀಡಬೇಕೆಂದು ತಾಕೀತು ಮಾಡಿದರು.

ಎಸಿಬಿ ಎಡಿಜಿಪಿಯವರ ವಿವರ ಕೇಳಿದ ನ್ಯಾಯಮೂರ್ತಿಗಳು, ಅವರ ಸರ್ವೀಸ್ ರೆಕಾರ್ಡ್ ಯಾಕೆ ತಮಗೆ ನೀಡಲಿಲ್ಲ ಎಂದು ಪ್ರಶ್ನಿಸಿದರು. ಈ ಪ್ರಕರಣದಲ್ಲಿ 2ನೇ ಆರೋಪಿಯಾಗಿರುವ ಗುತ್ತಿಗೆ ನೌಕರನ ವಿವರ ಕೇಳಿದ ಅವರು, ಆತನನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡವರು ಯಾರು? ಕಮಿಷನ್ ಹಣ ಕಲೆಕ್ಷನ್ ಮಾಡುವುದಕ್ಕಾಗಿಯೇ ಖಾಸಗಿ ವ್ಯಕ್ತಿಯನ್ನು ಗುತ್ತಿಗೆ



ಆಧಾರದ ಮೇಲೆ ನೇಮಿಸಿಕೊಂಡಿದ್ದಾರೆ. ಫೋನ್ ಸಂಭಾಷಣೆಯಲ್ಲಿ ಎಲ್ಲವೂ ರೆಕಾರ್ಡ್ ಆಗಿದೆ ಎಂದ ನ್ಯಾಯಮೂರ್ತಿಗಳು ಡಿಸಿ ಒಪ್ಪಿಗೆ ಇಲ್ಲದೇ ಗುತ್ತಿಗೆ ನೌಕರ 5 ಲಕ್ಷ ರೂ. ಲಂಚ ಪಡೆಯಲು ಸಾಧ್ಯವೇ ಎಂದು ಪ್ರಶ್ನಿಸಿದರಲ್ಲದೇ ಎಸಿಬಿ ಕಲೆಕ್ಷನ್ ಸೆಂಟರ್ ಆಗಿಬಿಟ್ಟಿದೆ. ಸರ್ಚ್ ವಾರೆಂಟ್ ನೀಡಿದರೂ ಸರ್ಚ್ ಮಾಡುವುದಿಲ್ಲ. ಸರ್ಚ್ ವಾರೆಂಟ್ ಅನ್ನು ತೆಗೆದು ತೋರಿಸಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಗರಂ ಆಗಿ ಹೇಳಿದರು.

ಹಾಲಿ ಎಸಿಬಿ ಎಡಿಜಿಪಿ ಬಹಳ ಪವರ್‌ಫುಲ್. ನ್ಯಾಯಮೂರ್ತಿಯನ್ನೇ ವರ್ಗಾವಣೆ ಮಾಡಿಸಿಬಿಡುತ್ತಾರೆ ಎಂದು ನನ್ನ ಸಹ ನ್ಯಾಯಮೂರ್ತಿಯೊಬ್ಬರು ತಿಳಿಸಿದ್ದಾರೆ ಎಂದ ಅವರು, ವರ್ಗಾವಣೆ ಮಾಡಿಸುವ ಬೆದರಿಕೆಯನ್ನು ಕೂಡ ಆದೇಶದಲ್ಲಿ ಬರೆಸುತ್ತೇನೆ. ನನಗೆ ಯಾರ ಹೆದರಿಕೆಯೂ ಇಲ್ಲ. ಬೆಕ್ಕಿಗೆ ಗಂಟೆ ಕಟ್ಟಲು ಸಿದ್ದನಾಗಿದ್ದೇನೆ. ಜಡ್ಜ್ ಆದ ಮೇಲೆ ನಾನು ಒಂದಿಚೂ ಆಸ್ತಿ ಮಾಡಿಲ್ಲ. ನನ್ನ ಜಡ್ಜ್ ಹುದ್ದೆ ಹೋದರೂ ಚಿಂತೆ ಮಾಡುವುದಿಲ್ಲ. ನಾನು ರೈತನ ಮಗ ಭೂಮಿ ಉಳಲು ಸಿದ್ಧನಾಗಿದ್ದೇನೆ. ನಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಲ್ಲ. ಯಾವ ರಾಜಕೀಯ ಪಕ್ಷದ ಸಿದ್ಧಾಂತಕ್ಕೂ ಬದ್ಧನಾಗಿಲ್ಲ ಎಂದ ಅವರು, ಎಸಿಬಿಯಲ್ಲಿ ವಿಟಮಿನ್ 'ಎಂ' ಇದ್ದರೆ ಯಾರನ್ನೂ ಬೇಕಾದರೂ ರಕ್ಷಿಸಿ ಬಿಡುತ್ತೀರಿ ಅಲ್ಲವೇ? ಎಂದು ಪ್ರಶ್ನಿಸಿದರು. ಕರಿ ಕೋಟು ಇರುವುದು ಆರೋಪಿಗಳನ್ನು ರಕ್ಷಿಸುವುದಕ್ಕಲ್ಲ. ಈಗ ಭ್ರಷ್ಟಾಚಾರ ಕ್ಯಾನ್ಸರ್ ಆಗಿದೆ. ಅದು 4ನೇ ಹಂತಕ್ಕೆ ಹೋಗಬಾರದು. ಈಗ ಬೇಲಿಯೇ ಎದ್ದು ಹೊಲ ಮೇಯ್ದರೇ ನಾವೇನು ಮಾಡುವುದು ಎಂದು ಬೇಸರದ ನುಡಿಗಳನ್ನಾಡಿದ ಅವರು ದುಡ್ಡು ತೆಗೆದುಕೊಂಡು ಪೋಸ್ಟಿಂಗ್ ಕೊಡುವುದನ್ನು ನಿಲ್ಲಿಸಿದರೇ ಎಲ್ಲವೂ ಸರಿ ಹೋಗುತ್ತದೆ. ಭ್ರಷ್ಟಾಚಾರದಲ್ಲಿ ರಾಜ್ಯವೇ ಹೊತ್ತಿ ಉರಿಯುತ್ತಿದೆ. ಎಸಿಬಿ ಏನು ಮಾಡುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ವಿನಮ್ರವಾಗಿ ಉತ್ತರಿಸಿದ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಎಸಿಬಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನೀಡುತ್ತೇವೆ ಬಿ ರಿಪೋರ್ಟ್‌ನ ಸಂಪೂರ್ಣ ಮಾಹಿತಿ ನೀಡುತ್ತೇವೆ. ಸರ್ಕಾರವು ಹೈಕೋರ್ಟ್ ಆದೇಶವನ್ನು ಸಂಪೂರ್ಣವಾಗಿ ಪಾಲಿಸುತ್ತದೆ. ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ಈ ನನ್ನ ಹೇಳಿಕೆಯನ್ನು ಹೈಕೋರ್ಟ್ ದಾಖಲಿಸಿಕೊಳ್ಳಬಹುದು ಎಂದು ಹೇಳುವ ಮೂಲಕ ತಮ್ಮ ಹೇಳಿಕೆಗೆ ಬದ್ಧವಾಗಿರುವುದನ್ನು ನ್ಯಾಯಮೂರ್ತಿಗಳಿಗೆ ಸ್ಪಷ್ಟಪಡಿಸಿದರು.

ಕೊನೆಗೆ ನ್ಯಾಯಮೂರ್ತಿಗಳು ಜು.7ರೊಳಗೆ ಎಸಿಬಿ ಸಲ್ಲಿಸಿರುವ ಬಿ ರಿಪೋರ್ಟ್‌ಗಳ ಸಂಪೂರ್ಣ ಮಾಹಿತಿ ನೀಡಬೇಕೆಂದು ತಾಕೀತು ಮಾಡಿದರು.

ತಮಿಳುನಾಡಿಗೆ ಸಂಪೂರ್ಣ ಸ್ವಾಯತ್ತತೆ ನೀಡಿ

ಮುಖ್ಯಮಂತ್ರಿ ನೇತೃತ್ವದಲ್ಲೇ ಕೇಂದ್ರಕ್ಕೆ ಸಂಸದ ಎ.ರಾಜಾ ಒತ್ತಾಯ

ಚೆನ್ನೈ, ಜು.4– ಪ್ರತ್ಯೇಕ ತಮಿಳುನಾಡು ರಾಜ್ಯಕ್ಕೆ ಸ್ವಾಯತ್ತತೆ ನೀಡುವಂತೆ ಡಿಎಂಕೆ ಸಂಸದ ಎ.ರಾಜಾ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ. DMK ಸಂಸದ ಎ.ರಾಜಾ ಅವರು ಇಲ್ಲಿನ ನಾಮಕ್ಕಲ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಉಪಸ್ಥಿತಿಯಲ್ಲೇ ಈ ಬೇಡಿಕೆ ಇಟ್ಟಿದ್ದಾರೆ.



ಸಂಸದ ಎ.ರಾಜಾ ಅವರು 'ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ವಿಷಯ ಕುರಿತು ಮಾತನಾಡಿದ ಅವರು, ನಮಗೆ ಪ್ರತ್ಯೇಕ ರಾಜ್ಯ ಸ್ವಾಯತ್ತತೆ ಸಿಗುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಸದ್ಯ ಎ.ರಾಜಾ ಅವರ ಭಾಷಣದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪರ ವಿರೋಧದ ಚರ್ಚೆ ಆರಂಭವಾಗಿದೆ.

ನಾವು ಪೆರಿಯಾರ್ ಅವರ ಮಾರ್ಗವನ್ನು ಅನುಸರಿಸುತ್ತಿದ್ದು, ರಾಷ್ಟ್ರೀಯ ಸಮಗ್ರತೆ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಪ್ರತ್ಯೇಕ ತಮಿಳುನಾಡು ಕೂಗನ್ನು ಬದಿಗಿಟ್ಟಿದೆವು. ಆದರೆ ತಮಿಳುನಾಡಿನಲ್ಲಿ ಅಸ್ತಿತ್ವಕ್ಕೆ ಡಿಎಂಕೆ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರದ ನಡುವಿನ ತಿಕ್ಕಾಟವೇ ಪ್ರತ್ಯೇಕ ರಾಜ್ಯದ ಕೂಗಿಗೆ ಕಾರಣವಾಗಿದೆ. ಹಾಗಾಗಿ ನಮ್ಮ ಬೇಡಿಕೆಯನ್ನು ಪರಿಗಣಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಒತ್ತಾಯಿಸಿದ್ದಾರೆ.

ಕೇಂದ್ರವು ಹೆಚ್ಚಿನ ಅಧಿಕಾರ ಅನುಭವಿಸುವುದನ್ನು ಮುಂದುವರಿಸಿದೆ. ತಮಿಳುನಾಡಿನ ಶೇ.6.5ರಷ್ಟು ಜಿಎಸ್‌ಟಿ ಪಾಲಿನಲ್ಲಿ ಕೇವಲ ಶೇ.2.2ರಷ್ಟನ್ನು ಪಡೆಯುತ್ತಿದೆ. ಸಣ್ಣ–ಸಣ್ಣ ಸಮಸ್ಯೆಗಳಿಗೂ ರಾಜ್ಯಗಳು ಕೇಂದ್ರವನ್ನು ಅವಲಂಬಿಸಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 2013 ರಲ್ಲೂ ಪ್ರತ್ಯೇಕತೆಯ ಕೂಗು ಕೇಳಿಬಂದಿತ್ತು. 2021 ಮೇ ತಿಂಗಳಿನಲ್ಲಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ತಮಿಳುನಾಡಿನಲ್ಲಿ ಅಧಿಕಾರವನ್ನು ಹಿಡಿಯುತ್ತಿದ್ದಂತೆ ಈ ಪ್ರತ್ಯೇಕತೆಯ ಕೂಗು ತೀವ್ರಗೊಂಡಿತ್ತು. ಸ್ಟಾಲಿನ್ ಕೇಂದ್ರ ಸರ್ಕಾರವನ್ನು ಒಕ್ಕೂಟ ಸರ್ಕಾರ ಎಂದು ಕರೆಯುವ ನಿರ್ಣಯ ಕೈಗೊಂಡಿದ್ದು, ಸ್ಟಾಲಿನ್ ತಂತ್ರಕ್ಕೆ ಬಿಜೆಪಿ ಪ್ರತಿ ತಂತ್ರವಾಗಿ ಪ್ರತ್ಯೇಕ ಕೊಂಗುನಾಡು ಬೇಡಿಕೆಯನ್ನು ಹುಟ್ಟುಹಾಕಿತ್ತು ಎಂದು ವರದಿಯಾಗಿತ್ತು.

ಗೃಹಿಣಿ ಕೊಲೆ; ಪತಿ, ಅತ್ತೆ, ಮಾವನ ವಿರುದ್ಧ ಕೇಸ್ ದಾಖಲು

ಹಾಸನ, ಜು.4– ಗೃಹಿಣಿಯನ್ನು ಕೊಲೆ ಮಾಡಿರುವ ಆರೋಪದ ಮೇರೆಗೆ ಆಕೆಯ ಪತಿ ಮತ್ತು ಮನೆಯವರ ವಿರುದ್ಧ ಪ್ರಕರಣ ದಾಖಲಾಗಿದೆ.

ಹಾಸನ ತಾಲೂಕು ದೊಡ್ಡಮಂಡಿಗನಹಳ್ಳಿ ಗ್ರಾಮದ ಮಂಜುನಾಥ್ ಅಲಿಯಾಸ್ ಮಧು ಎಂಬಾತನ ಪತ್ನಿ ತೇಜಸ್ವಿನಿ ಅಲಿಯಾಸ್ ದೀಪು (28) ಹತ್ಯೆ ಮಾಡಲಾಗಿದೆ ಎಂದು ಆಕೆಯ ತಾಯಿ ಲಲಿತಾ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿವರ: ತೇಜಸ್ವಿನಿ ಮತ್ತು ಮಂಜುನಾಥ್ ಮದುವೆ 7 ವರ್ಷಗಳ ಹಿಂದೆ ನಡೆದಿದ್ದು, ಆ ಸಂದರ್ಭದಲ್ಲಿ 150 ಗ್ರಾಂ ಚಿನ್ನ ಮತ್ತು ನಗದು ನೀಡಲಾಗಿತ್ತು. ಆದರೂ ಹೆಚ್ಚಿನ ವರದಕ್ಷಿಣೆ ತರುವಂತೆ ಪತಿ ಮಂಜುನಾಥ, ಆತನ ತಂದೆ ಬಸವೇಗೌಡ, ತಾಯಿ ಸರೋಜಮ್ಮ ಕಿರುಕುಳ ನೀಡುತ್ತಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಹಿಂದೆ ಬೆಂಗಳೂರಿನ ಟೊಯೊಟಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ ಮದ್ಯಪಾನ ಹಾಗೂ ಜೂಜಾಟದ ಚಟಕ್ಕೆ ಬಿದ್ದು, ಸಾಲ ಮಾಡಿಕೊಂಡು ಕೆಲಸ ತೊರೆದು ಗ್ರಾಮಕ್ಕೆ ವಾಪಸ್ಸಾಗಿದ್ದ. ಜೀವನ ನಿರ್ವಹಣೆ ಕಷ್ಟವಾದಾಗ ತೇಜಸ್ವಿನಿ ತಾನು ಕೆಲಸಕ್ಕೆ ಹೋಗುತ್ತೇನೆ ಎಂದು ಹೇಳಿದಾಗ ಅದಕ್ಕೆ ಆತ ಮತ್ತು ಆತನ ಮನೆಯವರು ನಿರಾಕರಿಸಿದ್ದರು. ಆದರೂ ಜೀವನೋಪಾಯಕ್ಕಾಗಿ ತೇಜಸ್ವಿನಿ ರಿಲಯನ್ಸ್‌ನಲ್ಲಿ ಪ್ಯಾಕಿಂಗ್ ಕೆಲಸಕ್ಕೆ ಹೋಗುತ್ತಿದ್ದಳು. ಆದರೆ, ಆಕೆಯ ಮೇಲೆ ಅನುಮಾನಪಟ್ಟ ಪತಿ ಮಂಜುನಾಥ್ ಪದೇ ಪದೆ ಹೊಡೆಯುತ್ತಿದ್ದ. ಜೂ.7 ರಂದು ಮಧ್ಯಾಹ್ನ ತೇಜಸ್ವಿನಿ ತನ್ನ ತಾಯಿಗೆ ಕರೆ ಮಾಡಿ ಪತಿ ಮತ್ತು ಆತನ ಮನೆಯವರು ಕೆಲಸಕ್ಕೆ ಹೋಗಲು ಬಿಡದೆ ರೂಂನಲ್ಲಿ ಕೂಡಿಹಾಕಿದ್ದಾರೆ. ನಿಮ್ಮ ತಂದೆಯ ಮನೆ ಮತ್ತು ರಾಜಘಟ್ಟದಲ್ಲಿರುವ ಜಮೀನನ್ನು ಬರೆಸಿಕೊಡು ಎಂದು ಹಿಂಸೆ ನೀಡುತ್ತಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾರೆ. ಮರುದಿನ ಅಕ್ಕಪಕ್ಕದ ಮನೆಯವರು ತೇಜಸ್ವಿನಿ ತಾಯಿಗೆ ಕರೆ ಮಾಡಿ ನಿಮ್ಮ ಮಗಳನ್ನು ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ ಎಂದು ತಿಳಿಸಿದ ಮೇರೆಗೆ ಅವರು ಬಂದು ನೋಡಿದಾಗ ತೇಜಸ್ವಿನಿ ಮೃತಪಟ್ಟಿರುವುದು ಗೊತ್ತಾಗಿದೆ. ತನ್ನ ಮಗಳನ್ನು ಅಳಿಯ ಮತ್ತು ಆತನ ಅಪ್ಪ–ಅಮ್ಮ ಹೊಡೆದು ಹತ್ಯೆ ಮಾಡಿ ನೇಣು ಬಿಗಿದಿದ್ದಾರೆ ಎಂದು ಲಲಿತಾ ನೀಡಿದ ದೂರು ದಾಖಲಿಸಿಕೊಂಡಿರುವ ಹಾಸನ ಟೌನ್ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬೂಕನಕೆರೆಯಲ್ಲಿ ಹೋಬಳಿ ಮಟ್ಟದ ಉಚಿತ ನೇತ್ರ ತಪಾಸಣಾ ಶಿಬಿರ ಹಾಗೂ ಕಂದಾಯ ಅದಾಲತ್

ನೇತ್ರ ತಪಾಸಣೆ ಶಿಬಿರದ ಸದ್ಬಳಕೆಗೆ ಸಚಿವರ ಸಲಹೆ

ಕೆ.ಆರ್.ಪೇಟೆ, ಜು.4(ಶ್ರೀನಿವಾಸ್)– ಎಲ್ಲಾ ಹೋಬಳಿಗಳಲ್ಲೂ ಉಚಿತ ನೇತ್ರ ತಪಾಸಣೆ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ಸ್ಥಳೀಯ ಶಾಸಕರೂ ಆದ ಡಾ.ನಾರಾಯಣಗೌಡ ಸಲಹೆ ನೀಡಿದರು.



ತಾಲೂಕಿನ ಬೂಕನಕೆರೆ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಹೋಬಳಿ ಮಟ್ಟದ ಉಚಿತ ನೇತ್ರ ತಪಾಸಣೆಯ ಶಿಬಿರ ಹಾಗೂ ಕಂದಾಯ ಅದಾಲತ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕು ಮಟ್ಟದಲ್ಲಿ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ ಇನ್ನೂ ಸಾಕಷ್ಟು ಮಂದಿಗೆ ಕಣ್ಣಿನ ತಪಾಸಣೆ ಮಾಡಿಸಿ ಚಿಕಿತ್ಸೆ ಕೊಡಿಸುವ ಅವಶ್ಯಕತೆ ಇದೆ ಎಂದು ಮಾಹಿತಿ ಇದ್ದ ಕಾರಣ ಹೋಬಳಿ ಕೇಂದ್ರಗಳಲ್ಲಿ ಉಚಿತವಾಗಿ ಕಣ್ಣಿನ ತಪಾಸಣೆಯನ್ನು ಆಯೋಜಿಸಲಾಗಿದೆ. ಇದನ್ನು ಜನರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರತಿಯೊಬ್ಬರಿಗೂ ಆರೋಗ್ಯ ಬಹಳ ಮುಖ್ಯವಾಗಿದೆ. ಮನುಷ್ಯನಿಗೆ ಬಹು ಮುಖ್ಯ ಅಂಗವಾದ ಪಂಚೇಂದ್ರೀಯಗಳಲ್ಲಿ ಒಂದಾದ ಕಣ್ಣು ಚೆನ್ನಾಗಿದ್ದರೆ ಎಲ್ಲವೂ ಸರಿಯಾಗಿರುತ್ತದೆ ಎಂದು ಅರಿತು ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ ಉಚಿತವಾಗಿ ಕಣ್ಣಿನ ತಪಾಸಣೆ ಮಾಡಿಸಿ ಅಗತ್ಯವಿದ್ದರೆ ಶಸ್ತ್ರಚಿಕಿತ್ಸೆ ಮಾಡಿಸಿ ಕನ್ನಡಕವನ್ನು ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಜನರಿಗೆ ಆರೋಗ್ಯ ಸೇವೆ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಅಧಿಕಾರಿಗಳು ತಾಲೂಕು ಕೇಂದ್ರದಲ್ಲಿಯೇ ವಾಸ್ತವ್ಯ ಹೂಡಬೇಕು. ಆಗ ಮಾತ್ರ ತಾಲೂಕಿನ ಅಭಿವೃದ್ಧಿ ಸಾಧ್ಯವಾಗಿದೆ. ಮೈಸೂರು, ಬೆಂಗಳೂರಿನಿಂದ ನಿತ್ಯ ಓಡಾಡುವ ಅಧಿಕಾರಿಗಳು ಮಧ್ಯಾಹ್ನ 12ಗಂಟೆಗೆ ಕಚೇರಿಗೆ ಬಂದು ಸಂಜೆ 4ಗಂಟೆಗೆ ಕಚೇರಿಯಿಂದ ಹೊರ ಹೋಗುತ್ತಿದ್ದಾರೆ ಎಂಬ ದೂರುಗಳು ಕೇಳಿ ಬರುತ್ತಿದ್ದು, ಇಂತಹ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಇದೇ ವೇಳೆ ಬೂಕನಕೆರೆ ವ್ಯಾಪ್ತಿಯಲ್ಲಿ ಪಿಂಚಣಿ, ಜಾಬ್ ಕಾರ್ಡ್ ಸೇರಿದಂತೆ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ಸಚಿವ ಡಾ.ನಾರಾಯಣಗೌಡ ಅವರು ವಿತರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಸ್.ಅಶ್ವಥಿ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಪಾಂಡವಪುರ ಎಸಿ ಶಿವಾನಂದಮೂರ್ತಿ, ಜಿಲ್ಲಾ ಆರೋಗ್ಯಾಧಿಕಾರಿ ಧನಂಜಯ, ತಹಸೀಲ್ದಾರ್ ರೂಪಾ, ತಾಪಂ ಇಓ ಸತೀಶ್, ಬಿಇಓ ಸೀತಾರಾಂ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂಧನ್, ಆಯುಷ್ ಅಧಿಕಾರಿ ಡಾ.ಲೋಕೇಶ್, ರಾಜಸ್ವ ನಿರೀಕ್ಷಕರಾದ ರಾಜಮೂರ್ತಿ, ಚಂದ್ರಕಲಾ, ಗ್ರಾಪಂ ಅಧ್ಯಕ್ಷೆ ಸುನಂದಮ್ಮ, ಉಪಾಧ್ಯಕ್ಷೆ ಜ್ಯೋತಿ ಮಂಜುನಾಥ್, ಮುಖಂಡರಾದ ಬಿ.ಜವರಾಯಿಗೌಡ, ಅಂಚಿಸಣ್ಣಸ್ವಾಮೀಗೌಡ, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್, ಅರವಿಂದ್, ಸಚಿವರ ಆಪ್ತ ಸಹಾಯಕ ದಯಾನಂದ್, ಬಿಜೆಪಿ ತಾಲೂಕು ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಮೋದೂರು ಮಂಜುನಾಥ್, ಕಾರಿಗನಹಳ್ಳಿ ಕುಮಾರ್, ಭಾರತೀಪುರ ಪುಟ್ಟಣ್ಣ, ರಾಮೇಗೌಡ, ಸೋಮಶೇಖರ್, ರಂಗಸ್ವಾಮಿ, ಕೃಷ್ಣೇಗೌಡ, ಶ್ಯಾಂಪ್ರಸಾದ್, ಭಾಗ್ಯಮ್ಮ ಸೇರಿದಂತೆ ಇತರರಿದ್ದರು.

ಕೆ.ಆರ್.ಪೇಟೆ ತಾಲೂಕಿನ ವ್ಯಾಪ್ತಿಯಲ್ಲಿ ಏತ ನೀರಾವರಿ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಸಿಎಂ ಬಸವರಾಜ ಬೊಮ್ಮಾಯಿ ಅವರ ಸಹಕಾರದಿಂದ ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಾಗಿ ಸಾಕಷ್ಟು ಅನುದಾನ ದೊರಕಿದೆ. ರಾಜಕೀಯ ಅನ್ನೋದು ನೀರಿನ ಮೇಲಿನ ಗುಳ್ಳೆಯ ರೀತಿ, ಅಭಿವೃದ್ಧಿಯೇ ಶಾಶ್ವತ. ಹಾಗಾಗಿ, ಎಲ್ಲರೂ ಸೇರಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳೋಣ.

–ಡಾ.ನಾರಾಯಣಗೌಡ, ಸಚಿವರು.

ಜೆಡಿಎಸ್ ಮುಖಂಡನ ಬರ್ಬರ ಹತ್ಯೆ

ನಾಗಮಂಗಲ, ಜು.4(ಮೋಹನ್‌ರಾಜ್)– ಜೆಡಿಎಸ್ ಮುಖಂಡ ಹಾಗೂ ಬೆಳ್ಳೂರಿನ ವಿಎಸ್‌ಎಸ್‌ಎನ್ ಪತ್ತಿನ ಸಹಕಾರ ಸಂಘದ ನಿರ್ದೇಶಕರೊಬ್ಬರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿ, ಕೊಲೆ ಮಾಡಿರುವ ಘಟನೆ ಭಾನುವಾರ ತಡರಾತ್ರಿ ತಾಲೂಕಿನ ಬೆಳ್ಳೂರು ಪಟ್ಟಣದ ಅರಳಿಕಟ್ಟೆ ಬಳಿ ನಡೆದಿದೆ. ಗ್ರಾಮದ ನೀರಗಂಟಿ ಕೆಂಪಣ್ಣ ಅವರ ಪುತ್ರ ಹಾಗೂ ವಿಎಸ್‌ಎಸ್‌ಎನ್ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸುನೀಲ್‌ಕುಮಾರ್(36) ಹತ್ಯೆಯಾದ ವ್ಯಕ್ತಿ.



ಘಟನೆ ವಿವರ: ಬೆಳ್ಳೂರಿನ ಅಂಬೇಡ್ಕರ್ ಬೀದಿಯಲ್ಲಿ ಎರಡನೇ ಹಂತದ ನಾಯಕನಾಗಿ ಬೆಳೆಯುತ್ತಿದ್ದ ಸುನೀಲ್‌ಕುಮಾರ್ ಮೂಲತಃ ಜೆಡಿಎಸ್ ಪಕ್ಷದ ಕಾರ್ಯಕರ್ತನಾಗಿ, ಕ್ಷೇತ್ರದ ಶಾಸಕ ಸುರೇಶ್‌ಗೌಡ ಬೆಂಬಲಿಗನಾಗಿ ಗುರುತಿಸಿಕೊಂಡಿದ್ದ. ಈತ ಬೆಳ್ಳೂರಿನ ವಿಎಸ್‌ಎಸ್‌ಎನ್ ಪತ್ತಿನ ಸಹಕಾರ ಸಂಘದ ನಿರ್ದೇಶಕನಾಗಿಯೂ ಆಯ್ಕೆಯಾಗಿದ್ದ. ಬೆಳ್ಳೂರು ಪಟ್ಟಣದಲ್ಲಿ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದ ಸುನೀಲ್, ವಾರ ಹಾಗೂ ತಿಂಗಳು ಬಡ್ಡಿಯಂತೆ ಜನಕ್ಕೆ ಹಣ ನೀಡುತ್ತಿದ್ದ.

ಈತನಿಗೆ ಎರಡು ಮದುವೆಯಾಗಿತ್ತು. ಭಾನುವಾರ ರಾತ್ರಿ ಮನೆಯಲ್ಲಿದ್ದ ಸುನೀಲ್‌ಗೆ ಫೋನ್‌ವೊಂದು ಬಂದಿದ್ದು, ಬೆಳ್ಳೂರಿನ ಅರಳಿಕಟ್ಟೆ ಬಳಿ ಬರುವಂತೆ ಹೇಳಿದ್ದಾರೆ. ಅರ್ಧಗಂಟೆ ಹೋಗಿ ಬರುವುದಾಗಿ ಹೇಳಿ ಅರಳಿಕಟ್ಟೆ ಬಳಿ ಬಂದು ಫೋನ್‌ನಲ್ಲಿ ಮಾತನಾಡುವಾಗ ಮಾರಕಾಸ್ತ್ರಗಳನ್ನು ಹಿಡಿದು ಬಂದ ಐದಾರು ಮಂದಿಯ ಗುಂಪು ಬರ್ಬರವಾಗಿ ಹಲ್ಲೆ ನಡೆಸಿ ಅಲ್ಲಿಂದ ಪರಾರಿಯಾಗಿದ್ದಾರೆ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ಸುನೀಲ್‌ನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಮೇಲ್ನೋಟಕ್ಕೆ ಫೈನಾನ್ಸ್ ವ್ಯವಹಾರವೇ ಸುನೀಲ್‌ಕುಮಾರ್ ಹತ್ಯೆಗೆ ಕಾರಣವೇ ಎಂಬುದನ್ನು ಪೊಲೀಸರು ಶಂಕಿಸಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಸುನೀಲ್ ಬೆಳ್ಳೂರಿನಲ್ಲಿ ರಾಜಕೀಯವಾಗಿ ಹಾಗೂ ಹಣಕಾಸಿನಲ್ಲಿ ಒಳ್ಳೆಯ ಹೆಸರು ಮಾಡಿದ್ದ. ಜೊತೆಗೆ ಯಾವುದೇ ಅಪರಾಧ ಚಟುವಟಿಕೆಯಲ್ಲಿ ಭಾಗಿಯಾಗದಿದ್ದರೂ ದುಷ್ಕರ್ಮಿಗಳು ಯಾವ ಕಾರಣಕ್ಕೆ ಹತ್ಯೆ ಮಾಡಿದ್ದಾರೆ ಎಂಬುದು ತಿಳಿದು ಬಂದಿಲ್ಲ. ಆರೋಪಿಗಳ ಬಂಧನಕ್ಕೆ ಈಗಾಗಲೇ ತಂಡವೊಂದನ್ನು ರಚಿಸಲಾಗಿದೆ ಎಂದರು. ಸ್ಥಳಕ್ಕೆ ಬೆಳ್ಳೂರು ಪೊಲೀಸರು ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ಪರಾರಿಯಾಗಿರುವ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಕ್ರೈಂ ಬಾಕ್ಸ್

ಬೈಕ್ ಡಿಕ್ಕಿ: ಪಾದಚಾರಿ ಸಾವು

ಭಾರತೀನಗರ, ಜು.4(ಅಣ್ಣೂರು ಸತೀಶ್)– ಬೈಕ್ ಡಿಕ್ಕಿ ಹೊಡೆದು ಪಾದಚಾರಿಯೊಬ್ಬ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ.

ಸಮೀಪದ ಬೊಮ್ಮನದೊಡ್ಡಿ ಗ್ರಾಮದ ನಿವಾಸಿ ತುರ್ವೆಗೌಡ(70) ಮೃತಪಟ್ಟವರು. ಈತ ತೆಂಗಿನ ಮರದಿಂದ ಬಿದ್ದು ಮೃತಪಟ್ಟಿದ್ದ ಸಂಬಂಧಿಯೊಬ್ಬರನ್ನು ನೋಡಿಕೊಂಡು ಬೊಮ್ಮನದೊಡ್ಡಿ ಗ್ರಾಮಕ್ಕೆ ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್ ಡಿಕ್ಕಿ ಹೊಡೆದಿದೆ.

ಪರಿಣಾಮ ತೀವ್ರವಾಗಿ ತಲೆಗೆ ಪೆಟ್ಟುಬಿದ್ದು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ತೆಂಗಿನ ಮರದಿಂದ ಬಿದ್ದು ರೈತ ಸಾವು

ಭಾರತೀನಗರ, ಜು.4(ಅಣ್ಣೂರು ಸತೀಶ್)– ತೆಂಗಿನ ಮರದಿಂದ ಬಿದ್ದು ರೈತನೊಬ್ಬ ಸಾವನ್ನಪ್ಪಿರುವ ಘಟನೆ ಸಮೀಪದ ಬಿದರಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಬಂದೀಗೌಡ(54) ಮೃತಪಟ್ಟ ರೈತ. ಈತ ಇತ್ತೀಚೆಗೆ ತಮ್ಮ ಜಮೀನಿನಲ್ಲಿ ತೆಂಗಿನ ಮರಹತ್ತಿ ತೆಂಗಿನಕಾಯಿ ಕೀಳಲು ಹೋದಾಗ ಆಯಾತಪ್ಪಿ ಮರದಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು.

ನಂತರ ಇವರನ್ನು ಆಸ್ಪತ್ರೆಯುಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ರಾತ್ರಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಹಸೀಲ್ದಾರ್ ಪ್ರಮೋದ್‌ಪಾಟೀಲ್‌ಗೆ ಅದ್ದೂರಿ ಬೀಳ್ಕೊಡುಗೆ



ಪಾಂಡವಪುರ, ಜು.4– ಪಟ್ಟಣದ ಮಿನಿ ವಿಧಾನಸೌಧದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ನಿರ್ಗಮಿತ ತಹಸೀಲ್ದಾರ್ ಪ್ರಮೋದ್‌ಪಾಟೀಲ್ ಅವರಿಗೆ ಅದ್ದೂರಿ ಬೀಳ್ಕೊಡುಗೆ ನೀಡಲಾಯಿತು.

ಪಾಂಡವಪುರದಿಂದ ಬೆಂಗಳೂರಿಗೆ 3 ತಿಂಗಳ ಹಿಂದೆ ವರ್ಗಾವಣೆಗೊಂಡ ತಹಸೀಲ್ದಾರ್ ಪ್ರಮೋದ್ ಪಾಟೀಲ್ ಹಾಗೂ ಅವರ ಪತ್ನಿ ಮೋನಿಕಾ ಅವರ ಮೇಲೆ ಪುಷ್ಪ ವೃಷ್ಟಿ ಸುರಿಸುವ ಮೂಲಕ ಸಂಭ್ರಮದಿಂದ ಅಧಿಕಾರಿಗಳು ಬೀಳ್ಕೊಟ್ಟರು.

ಈ ವೇಳೆ ತಹಸೀಲ್ದಾರ್ ನಯನ, ಎಸಿ ಶಿವಾನಂದಮೂರ್ತಿ, ಸರ್ಕಲ್ ಇನ್ಸ್‌ಪೆಕ್ಟರ್ ಸುಮಾ ಅವರು ಪ್ರಮೋದ್‌ಪಾಟೀಲ್ ದಂಪತಿಗಳಿಗೆ ಹೂಗುಚ್ಛ ಹಾಗೂ ಉಡುಗೊರೆ ನೀಡಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ತಾಲೂಕು ಅಧಿಕಾರಿಗಳು, ಸಿಬ್ಬಂದಿ ವರ್ಗ, ನೌಕರರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.



ಮದ್ದೂರಿನ ರೋಟರಿ ಭವನದಲ್ಲಿ ಅಂತಾರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯರಾದ ಡಾ.ಸಿದ್ದೇಗೌಡ, ಡಾ.ಸತೀಶ್, ಡಾ.ಸುಹಾಸ್, ಡಾ.ದರ್ಶನ್, ಡಾ.ವಿದ್ಯಾಸಾಗರ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ರೋಟರಿ ಸಂಸ್ಥೆ ಅಧ್ಯಕ್ಷ ಲಕ್ಷ್ಮಣ್‌ಗೌಡ ಕಾರ್ಯದರ್ಶಿ ಶಶಿಗೌಡ ಪ್ರಕಾಶ್, ಹೊನ್ನೇಗೌಡ, ಕುಮಾರ್, ರಾಜೇಶ್ ಇತರರಿದ್ದರು.

ಕೆ.ಆರ್.ಸಾಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿಗೆ ಬೀಳ್ಕೊಡುಗೆ

ಶ್ರೀರಂಗಪಟ್ಟಣ, ಜು.4(ವಿನಯ್ ಕಾರೇಕುರ)– ತಾಲೂಕಿನ ಕೆ.ಆರ್.ಸಾಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಗ್ರಾಪಂ, ಸರ್ಕಾರಿ ನೌಕರರ ಯೋಜನಾ ಶಾಖೆ ಹಾಗೂ ಆಶಾ ಕಾರ್ಯಕರ್ತರ ಬಳಗದಿಂದ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸಲೀಂಪಾಷ ಅವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.



ಲೇಖಕರಾಗಿರುವ ಸಲೀಂಪಾಷ ಅವರು ಕೆ.ಆರ್.ಸಾಗರದಲ್ಲಿ 5 ವರ್ಷ ಸೇರಿದಂತೆ ಜಿಲ್ಲೆಯಲ್ಲಿ 25 ವರ್ಷ ಸೇವೆ ಸಲ್ಲಿಸಿದ್ದಾರೆ. ಚಿಣ್ಯ, ಚಿನಕುರಳಿ, ನಾರಾಯಣಪುರ, ಕ್ಯಾತನಹಳ್ಳಿ, ಅರಳಕುಪ್ಪೆ, ಬನ್ನಂಗಾಡಿ, ಕೆ.ಆರ್.ಸಾಗರದಲ್ಲಿ ಸೇವೆ ಸಲ್ಲಿಸುವುದರ ಜೊತೆಗೆ ಜಿಲ್ಲಾ ಮಲೇರಿಯ ಕಚೇರಿಯಲ್ಲಿ ಜಿಲ್ಲಾ ಮೇಲ್ವಿಚಾರಕರಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಇಲಾಖೆಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರವಾಗಿದ್ದಾರೆ.

ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಅನೇಕ ಜಾಗೃತಿ ಗೀತೆಗಳನ್ನು ರಚಿಸಿ ಸ್ವಯಂ ಹಾಡುವುದರ ಮೂಲಕ ಸಾಮಾಜಿಕ ಆರೋಗ್ಯ ಜಾಗೃತಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರು. ಇವರ ಜಾಗೃತಿ ಕಾರ್ಯಕ್ರಮಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅಧಿಕಾರಿಗಳ ಗಮನ ಸೆಳೆದು ಪ್ರಶಂಸೆಗೆ ಪಾತ್ರವಾಗಿದ್ದರು. ಆರೋಗ್ಯ ಇಲಾಖೆಯ ಉತ್ತಮ ಸೇವೆಗಾಗಿ ಇವರಿಗೆ ಜಿಲ್ಲಾಡಳಿತ ಜಿಲ್ಲಾ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಸ್ತುತ ಇವರು ಮಂಗಳೂರು ಆರೋಗ್ಯ ಸಹಾಯಕರ ತರಬೇತಿ ಕೇಂದ್ರಕ್ಕೆ ವರ್ಗಾವಣೆಯಾಗಿದ್ದಾರೆ.

ಬೀಳ್ಕೊಡುಗೆ ಸಮಾರಂಭದಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಕೆ.ಜಿ.ಭವಾನಿ ಶಂಕರ್, ವೈದ್ಯಾಧಿಕಾರಿಗಳಾದ ಡಾ.ಶಾಹೀನ್‌ತಾಜ್, ಡಾ.ಚಂದ್ರಿಕಾ, ಡಾ.ಬಿ.ಎಂ.ರೇಖಾ, ಸರ್ಕಾರಿ ನೌಕರರ ಯೋಜನಾ ಶಾಖೆಯ ಅಧ್ಯಕ್ಷ ಶಿವಪ್ಪ, ಗ್ರಾಪಂ ಅಧ್ಯಕ್ಷ ನರಸಿಂಹ, ಪಿಡಿಓ ರಫೀಕ್ ಕರ್ಜಗಿ, ಮಾಜಿ ಅಧ್ಯಕ್ಷ ನಾಗೇಂದ್ರ ಕುಮಾರ್, ಕಾರ್ಯದರ್ಶಿ ರಘು, ನಾಗೇಶ್, ನಾಯ್ಡು, ಚೇತನ್‌ಕುಮಾರ್, ಕೆ.ಆರ್.ಸೌಮ್ಯಾ, ದಾಕ್ಷಾಯಿಣಿ, ಶಶಿಕಲಾ, ಸಲ್ಮಾ ಜಬೀನ್, ನಾಗವೇಣಿ ಸೇರಿದಂತೆ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

ಹೊರ ರಾಜ್ಯದ ಕಾರ್ಮಿಕರಿಂದ ಅಪರಾಧ ಪ್ರಕರಣ ಹೆಚ್ಚಳ

ನಿಗಾ ವಹಿಸಲು ಅಧಿಕಾರಿಗಳಿಗೆ ಐಜಿಪಿ ಸೂಚನೆ

ಮಡಿಕೇರಿ,ಜು.4– ಕೊಡಗು ಜಿಲ್ಲೆಯಲ್ಲಿ ಹೊರ ರಾಜ್ಯದ ಕಾರ್ಮಿಕರಿಂದ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ ವಲಸೆ ಕಾರ್ಮಿಕರ ಮೇಲೆ ನಿಗಾ ವಹಿಸಲಾಗುವುದು ಎಂದು ದಕ್ಷಿಣ ವಲಯ ಪೊಲೀಸ್ ಮಹಾ ನಿರ್ದೇಶಕರಾದ ಪ್ರವೀಣ್ ಮಧುಕರ್ ಪವಾರ್ ತಿಳಿಸಿದ್ದಾರೆ.

ಸೋಮವಾರ ಮಡಿಕೇರಿಗೆ ಭೇಟಿ ನೀಡಿದ ಅವರು, ಜಿಲ್ಲೆಯಲ್ಲಿ ಅಪರಾಧ ಚಟುವಟಿಕೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಕುರಿತು ಜಿಲ್ಲೆಯ ಪೊಲೀಸ್ ಉನ್ನತ ಅಧಿಕಾರಿಗಳೊಂದಿಗೆ ಸುದೀರ್ಘ ಸಭೆ ನಡೆಸಿದರು. ಬಳಿಕ ನಗರದ ಸಾಯಿ ಹಾಕಿ ಕ್ರೀಡಾಂಗಣದ ಸಮೀಪ ನೂತನವಾಗಿ ನಿರ್ಮಾಣವಾಗುತ್ತಿರುವ ಜಿಲ್ಲಾ ಪೊಲೀಸ್ ಕಚೇರಿ ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಮಗಾರಿ ಮತ್ತು ಕಟ್ಟಡದ ರೂಪುರೇಷೆ ಬಗ್ಗೆ ಚರ್ಚಿಸಿದ ಐಜಿಪಿ ಪ್ರವೀಣ್ ಪವಾರ್, ಶೀಘ್ರವಾಗಿ ಕಾಮಗಾರಿ ಪೂರೈಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಐಜಿಪಿ ಪ್ರವೀಣ್‌ಪವಾರ್, ಮುಂಬರುವ ಬಕ್ರೀದ್ ಹಬ್ಬದ ಸಂದರ್ಭ ಸೇರಿದಂತೆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಜಿಲ್ಲೆಯ ಚೆಕ್‌ಪೋಸ್ಟ್‌ಗಳನ್ನು ಬಿಗಿಗೊಳಿಸಿ ಸೂಕ್ತ ತಪಾಸಣೆ ನಡೆಸಲು ಸೂಚಿಸಲಾಗಿದೆ. ಅಕ್ರಮ ಗೋ ಸಾಗಾಟ ಮತ್ತಿತ್ತರ ಕಾನೂನುಬಾಹಿರ ಕೃತ್ಯಕ್ಕೆ ಕಡಿವಾಣ ಹಾಕಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪೊಲೀಸ್ ಬೀಟ್ ಹೆಚ್ಚಳ, ಸಿ.ಸಿ. ಕ್ಯಾಮರಾಗಳ ಅಳವಡಿಕೆಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.

ಹೊರರಾಜ್ಯದ ಕಾರ್ಮಿಕರಿಂದ ಆಗುತ್ತಿರುವ ಅಪರಾಧ ಪ್ರಕರಣಗಳನ್ನು ಮನಗಂಡು ವಲಸೆ ಕಾರ್ಮಿಕರ ಮೇಲೆ ಹೆಚ್ಚಿನ ನಿಗಾ ವಹಿಸಲು ಸೂಚಿಸಲಾಗಿದೆ. ಹೊರ ರಾಜ್ಯಗಳ ಕಾರ್ಮಿಕರ ದಾಖಲೆಗಳು ಹಾಗೂ ಅವರ ಹಿನ್ನೆಲೆ ಬಗ್ಗೆ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. ಆಯಾಯ ಭಾಗದ ಬೀಟ್ ಪೊಲೀಸ್‌ರು ಕಾರ್ಮಿಕರ ಮೇಲೆ ನಿಗಾ ಇಡುವುದು ಸೇರಿದಂತೆ ಹೊರ ರಾಜ್ಯದ ಕಾರ್ಮಿಕರ ಮೇಲೆ ಇಲಾಖೆ ಕಣ್ಣಿಡಲಿದೆ ಎಂದರು.

ಇನ್ನು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಕುಡಿದು ವಾಹನ ಚಾಲಿಸುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ 2020ರಲ್ಲಿ ವಾಹನ ಅಪಘಾತದಿಂದ 50 ಮಂದಿ ಮೃತಪಟ್ಟ ಪ್ರಕರಣಗಳು ದಾಖಲಾಗಿದ್ದರೆ, 2021ರಲ್ಲಿ ಈ ಪ್ರಕರಣಗಳ ಸಂಖ್ಯೆ 60ರಷ್ಟಿತ್ತು. ಆದರೆ ಈ ವರ್ಷ ಜೂನ್ ಅಂತ್ಯಕ್ಕೆ 44 ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿ ನೀಡಿದರು. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಿದೆ. ಇದರಿಂದ ಕುಡಿದು ವಾಹನ ಚಾಲಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ಅಪಘಾತ ಪ್ರಕರಣಗಳು ಬೆಳಗಿನ ಜಾವ ಮತ್ತು ರಾತ್ರಿಯಲ್ಲಿ ನಡೆದಿವೆ. ಈ ಹಿನ್ನೆಲೆ ಜಿಲ್ಲೆಯಲ್ಲಿ ಬೆಳಗಿನ ವೇಳೆ ಮತ್ತು ಸಂಜೆ 'ಡ್ರಿಂಕ್ ಅಂಡ್ ಡ್ರೈವ್' ತಪಾಸಣೆ ಮಾಡಲಾಗುತ್ತದೆ ಎಂದರು.

ಅಲ್ಲದೇ ಕೆಲ ಅಪಘಾತವಲಯಗಳಲ್ಲಿ ರಸ್ತೆ ವಿಸ್ತರಿಸುವ ಬಗ್ಗೆಯೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ಪ್ರವೀಣ್ ಮಧುಕರ್ ಪವಾರ್ ತಿಳಿಸಿದರು. ಈ ಸಂದರ್ಭ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಎಂ.ಅಯ್ಯಪ್ಪ, ಮಡಿಕೇರಿ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕ ಗಜೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ವಿಪತ್ತು ಮಿತ್ರ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ



ಕುಶಾಲನಗರ, ಜು.4–ಜಿಲ್ಲೆಯಲ್ಲಿ ಮಳೆಗಾಲ ಆರಂಭವಾಗಿದ್ದು, ಎದುರಾಗಬಹುದಾದ ವಿವಿಧ ರೀತಿಯ ಅಪಾಯಗಳನ್ನು ಮೊದಲೇ ಗುರುತಿಸಿ ಅತ್ಯಂತ ವ್ಯವಸ್ಥಿತವಾದ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಿ, ಸದಾ ಸನ್ನದ್ಧವಾಗಿರುವುದು ಅತೀ ಅಗತ್ಯ ಎಂದು ಚೆಸ್ಕಾಂ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಹೇಳಿದರು.

ಜಿಲ್ಲಾಡಳಿತ ಮತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಅಗ್ನಿಶಾಮಕ ಇಲಾಖೆ ವತಿಯಿಂದ ಕೂಡಿಗೆ ಕೃಷಿ ತರಬೇತಿ ಕೇಂದ್ರದಲ್ಲಿ ಸ್ವಯಂ ಸೇವಕರಿಗೆ ಏರ್ಪಡಿಸಿದ್ದ ವಿಪತ್ತು ಮಿತ್ರ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅನಾಹುತಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಸ್ವಯಂ ಸೇವಕರಿಗೆ ಸೂಕ್ತ ತರಬೇತಿ ನೀಡುವ ಮೂಲಕ ಪೂರ್ವಸಿದ್ಧತೆ ಪ್ರಕ್ರಿಯೆ ಪರಿಹಾರಕ್ಕೂ ಅತೀ ಮುಖ್ಯ ಎಂದು ತಿಳಿಸಿದರು.

ಮೈಸೂರು ಪ್ರಾಂತ್ಯದ ಅಗ್ನಿಶಾಮಕ ಅಧಿಕಾರಿ ಪಿ.ಎಸ್.ಜಯರಾಮಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಪತ್ತು ನಿರ್ವಹಣೆಗೆ ಇನ್ನೂರು ಸ್ವಯಂ ಸೇವಕರಿಗೆ ತರಬೇತಿ ನೀಡಲಾಗುತ್ತಿದೆ.

ಕೊಡಗು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ ಮಾತನಾಡಿ, ಪ್ರತಿಯೊಂದಕ್ಕೂ ಪೂರ್ವ ಸಿದ್ಧತೆ ಅತ್ಯಂತ ಮುಖ್ಯ ಈಗ ಸಾಕಷ್ಟು ತಾಂತ್ರಿಕ ಪ್ರಗತಿ ಹೊಂದಿದ್ದು ಅದನ್ನು ಬಳಸಿ ಜಿಲ್ಲೆಯ ಭೌಗೋಳಿಕ ಪರಿಸ್ಥಿತಿ ಅಧ್ಯಯನ ಮಾಡಿ ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಹೇಗೆ ಅಪಾಯಗಳನ್ನು ಕಡಿಮೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಪೂರ್ವಸಿದ್ಧತೆ ಪ್ರಕ್ರಿಯೆಯೊಂದಿಗೆ ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭ ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಂಚಾಲಕ ಅನನ್ಯ ವಾಸುದೇವ್,ಮಂಡ್ಯ ಜಿಲ್ಲೆಯ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್,ಪಿರಿಯಾಪಟ್ಟಣ ಅಗ್ನಿಶಾಮಕ ಠಾಣಾಧಿಕಾರಿ ಅಜಯ್ ಕುಮಾರ್, ದಾವಣಗೆರೆ ಜಿಲ್ಲೆಯ ಚನ್ನಗಿರಿ ಠಾಣಾಧಿಕಾರಿ ಎಚ್.ಬಿ.ಸಂತೋಷ್, ಜಗಳೂರು ಅಗ್ನಿಶಾಮಕ ಠಾಣಾಧಿಕಾರಿ ಆರ್.ಹನುಮಂತರಾಯ ಹಾಗೂ ಕುಶಾಲನಗರ ಅಗ್ನಿಶಾಮಕ ಠಾಣೆ ಸಿಬ್ಬಂದಿಗಳಾದ ಪ್ರಶಂತ್, ಸಂದೀಪ್, ಶಂಕರ್ ಮತ್ತಿತರರು ಇದ್ದರು. 12 ದಿನಗಳ ಕಾಲ ನಡೆಯುವ 2ನೇ ತರಬೇತಿ ಕಾರ್ಯಕ್ರಮಕ್ಕೆ ಜಿಲ್ಲೆಯ ವಿವಿಧೆಡೆಗಳಿಂದ 200 ಸ್ವಯಂ ಸೇವಕ ಭಾಗವಹಿಸಿದ್ದರು.

ಶಾಲಾ ಕಾಲೇಜಲ್ಲಿ ಸಾಹಿತ್ಯ ಪೂರಕ ಚಟುವಟಿಕೆ ಸಕ್ರಿಯಗೊಳಿಸಬೇಕು

ಜಿಲ್ಲಾ ಕಸಾಪ ಅಧ್ಯಕ್ಷ ಕೇಶವ ಕಾಮತ್



ಕುಶಾಲನಗರ, ಜು.4– ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಶಾಲಾ ಕಾಲೇಜುಗಳ ಹಂತದಲ್ಲಿ ಹಮ್ಮಿಕೊಳ್ಳುವ ಮೂಲಕ ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಬೆಳೆಸಬೇಕು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಹೇಳಿದರು.

ಇಲ್ಲಿನ ತಾಲೂಕು ಕಸಾಪ ಕಛೇರಿಯಲ್ಲಿ ಏರ್ಪಡಿಸಿದ್ದ ವಿಶೇಷ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಜಿಲ್ಲೆಯಾದ್ಯಂತ ಕನ್ನಡ ಸಾಹಿತ್ಯ ಪರ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕೆಂದು ತಾಲೂಕು ಘಟಕಗಳ ಅಧ್ಯಕ್ಷರಿಗೆ ಸೂಚಿಸಿದರು. ವಾರ್ಷಿಕ ದತ್ತಿ ಕಾರ್ಯಕ್ರಮಗಳನ್ನು ಸಕಾಲದಲ್ಲಿ ನಡೆಸಬೇಕು. ಹಾಗೆಯೇ ಹತ್ತನೇ ತರಗತಿ ವಾರ್ಷಿಕ ಪರೀಕ್ಷೆಯ ಕನ್ನಡ ವಿಷಯದಲ್ಲಿ ಅತ್ಯಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಹಾಗೂ ಶೇ.100 ಫಲಿತಾಂಶ ಗಳಿಸಿರುವ ಸರ್ಕಾರಿ ಕನ್ನಡ ಶಾಲೆಗಳನ್ನು ಗೌರವಿಸುವ ಎಂದು ಕಾಮತ್ ಸಲಹೆ ನೀಡಿದರು. ಕಸಾಪ ಮಾಜಿ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್, ಕಸಾಪ ಸಲಹೆಗಾರ ವಿ.ಪಿ.ಶಶಿಧರ್ ಮಾತನಾಡಿದರು.

ಈ ಸಂದರ್ಭ ತಾಲೂಕು ಅಧ್ಯಕ್ಷ ಕೆಎಸ್.ಮೂರ್ತಿ, ಗೌರವ ಕಾರ್ಯದರ್ಶಿ ಎಸ್.ನಾಗರಾಜು, ಕೋಶಾಧಿಕಾರಿ ಹೆಚ್.ವಿ.ಉಮೇಶ್, ಜಿಲ್ಲಾ ಸಮಿತಿ ನಿರ್ದೇಶಕ ಮೆ.ನಾ.ವೆಂಕಟನಾಯಕ್, ಫ್ಯಾನ್ಸಿ ಮುತ್ತಣ್ಣ, ಎಂ.ಇ.ಮೋಹಿದ್ದೀನ್, ಕೆ.ಎಸ್.ಮಹೇಶ್, ಟಿ.ಜಿ.ಪ್ರೇಮಕುಮಾರ್, ಸುಲೇಮಾನ್ ಸೇರಿದಂತೆ ಪರಿಷತ್ತಿನ ತಾಲೂಕು ನಿರ್ದೇಶಕರು ಇದ್ದರು.

ಸಂತಾಪ : ಈಚೆಗೆ ನಿಧನರಾದ ಸಾಹಿತ್ಯ ಪರಿಷತ್ತಿನ ಸಲಹೆಗಾರ ಮನುಶೆಣೈ ಅವರ ನಿಧನಕ್ಕೆ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

ಭ್ರಷ್ಟ ವ್ಯವಸ್ಥೆ ವಿರುದ್ಧ ಸಂಘಟಿತ ಹೋರಾಟ ಅತ್ಯಗತ್ಯ

ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ



ಮಡಿಕೇರಿ,ಜು.4– ಭ್ರಷ್ಟ ವ್ಯವಸ್ಥೆ ಮತ್ತು ದುರಾಡಳಿತದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಸಂಘಟಿತ ಹೋರಾಟ ನಡೆಸಬೇಕೆಂದು ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಕರೆ ನೀಡಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿಣಿ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪಕ್ಷ ಸಂಘಟನೆಗೆ ಎಲ್ಲರೂ ಮುಂದಾಗಬೇಕು. ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಪಕ್ಷ ಬಲಿಷ್ಠಗೊಂಡರೆ ಜಿಲ್ಲೆಯಲ್ಲಿ ಸಂಘಟನೆ ಸುಲಭವೆಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯೆಯಾಗಿ 6 ವರ್ಷಗಳ ಅವಧಿಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದಕ್ಕೆ ಕಾರ್ಯಕರ್ತರು ಹಾಗೂ ಜನರು ನೀಡಿದ ಸಹಕಾರ ಶ್ಲಾಘನಾರ್ಹವೆಂದರು.

ಅಧಿಕಾರಿಗಳ ಕರ್ತವ್ಯಲೋಪದಿಂದ ಮಡಿಕೇರಿ ನಗರಸಭೆಯ ಆಡಳಿತ ವ್ಯವಸ್ಥೆ ವಿಫಲವಾಗಿದೆ. ಕೆಲವು ಅಕ್ರಮಗಳನ್ನು ತೆನ್ನಿರಾ ಮೈನಾ ಅವರು ದಾಖಲೆ ಸಹಿತ ಬಯಲಿಗೆ ತಂದಿದ್ದಾರೆ. ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಮತ್ತು ನಗರ ಕಾಂಗ್ರೆಸ್ ಜಂಟಿಯಾಗಿ ಜಿಲ್ಲಾ ಕಾಂಗ್ರೆಸ್ ಸಹಯೋಗದಲ್ಲಿ ನಗರಸಭೆಯ ದುರಾಡಳಿತದ ವಿರುದ್ಧ ಪ್ರತಿಭಟನೆ ನಡೆಸಬೇಕೆಂದು ವೀಣಾ ಅಚ್ಚಯ್ಯ ಕರೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜಾ ಉತ್ತಪ್ಪ ಮಡಿಕೇರಿ ಬ್ಲಾಕ್ ಸಮಿತಿ ಅತ್ಯಂತ ಬಲಿಷ್ಠವಾಗಿದ್ದು, ಇದೇ ರೀತಿಯಲ್ಲಿ ವಲಯ ಹಾಗೂ ಬೂತ್ ಸಮಿತಿ ರಚಿಸಬೇಕೆಂದು ಸಲಹೆ ನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ. ಹಂಸ ಮುಂದಿನ ದಿನಗಳಲ್ಲಿ ವೀಣಾ ಅಚ್ಚಯ್ಯ ಹಾಗೂ ಇತರ ಮುಖಂಡರೊಂದಿಗೆ ಪ್ರತಿ ಬೂತ್‌ಗಳಿಗೆ ತೆರಳಿ ಪಕ್ಷ ಸಂಘಟಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಕೊಕ್ಕಲೇರ ಸುಜು ತಿಮ್ಮಯ್ಯ ನೇಮಕಾತಿ ಪತ್ರ ಪಡೆದ ಪಧಾಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಕ್ಷಣ ಆರಂಭಿಸುವಂತೆ ಸೂಚಿಸಿದರು.

ಡಿಸಿಸಿ ಕಾರ್ಯದರ್ಶಿ ಮಂದ್ರಿರ ಮೋಹನ್ ದಾಸ್, ಬ್ಲಾಕ್ ಉಪಾಧ್ಯಕ್ಷ ಪ್ರಭುರೈ, ಪ್ರಧಾನ ಕಾರ್ಯದರ್ಶಿ ಯಶ್ ದೋಲ್ಪಾಡಿ, ಮಡಿಕೇರಿ ನಗರ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಸಂಘಟನಾ ಕಾರ್ಯದರ್ಶಿಗಳಾದ ರವೂಫ್ ಶೇಖ್, ರವಿಗೌಡ, ಖಜಾಂಚಿ ಬಲ್ಲಚಂಡ ಚಂದನ್, ಚೆರಿಯಮನೆ ಭಾರ್ಗವ, ನಗರಸಭೆ ಮಾಜಿ ಸದಸ್ಯ ಪ್ರಕಾಶ್ ಆಚಾರ್ಯ ಮಾತನಾಡಿ ಹಲವು ಸಲಹೆಗಳನ್ನು ನೀಡಿದರು.


ಜಿಲ್ಲಾ ಕಾಂಗ್ರೆಸ್ ಹಿಂದುಳಿದ ಘಟಕದ ಅಧ್ಯಕ್ಷ ಬಾನಂಡ ಪ್ರಥ್ಯು, ವಕ್ತಾರ ಪಿ.ಎಲ್. ಸುರೇಶ್, ವಲಯ ಕಾಂಗ್ರೆಸ್ ಅಧ್ಯಕ್ಷರುಗಳಾದ ಇಬ್ರಾಹಿಂ, ಪ್ರದೀಪ್ ಕೊಟ್ಟಕೇರಿಯನ, ನಂದ, ಕೇಶವ, ಬ್ಲಾಕ್ ಪದಾಧಿಕಾರಿಗಳಾದ ಪಡಿಯೋಟಿರ ಕವಿತಾ, ಲಿಯಾಕತ್ ಆಲಿ, ಶಿವು ಮೂರ್ನಾಡು, ಮಹಮ್ಮದ್ ಆಲಿ, ಧನಂಜಯ, ವಸಂತ್ ಭಟ್, ಪೂರ್ಣಿಮಾ, ಪ್ರೇಮ, ಹನೀಫ್, ಎಂ.ಎಂ.ಹಫೀಝ್ ಉರ್ ರೆಹಮಾನ್, ಅಣ್ಣಚ್ಚಿರ ಸತೀಶ್, ವಾಯಿನ್, ಹೊಟ್ಟೆಂಗಡ ಉತ್ತಯ್ಯ, ಚಿಮ್ಮಚುಮ್ಮಣ್ಣ, ಜೆ.ಸಿ.ಜಗದೀಶ್, ಸೈಮನ್ ಮತ್ತಿತರ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು.

ವಾಜಪೇಯಿ ವಸತಿ ಶಾಲೆಗೆ 8 ದಿನ ರಜೆ

ಮಡಿಕೇರಿ,ಜು.4– ಮಳೆ ಹಾಗೂ ಭಾಗಮಂಡಲ ಪ್ರವಾಹ ಹಿನ್ನೆಲೆ ಭಾಗಮಂಡಲ ಸಮೀಪದ ಕೋರಂಗಾಲದಲ್ಲಿರುವ ವಾಜಪೇಯಿ ವಸತಿ ಶಾಲೆಗೆ 8 ದಿನಗಳ ಕಾಲ ರಜೆ ಘೋಷಣೆ ಮಾಡಲಾಗಿದೆ. ಮಳೆಯಿಂದ ಶಾಲೆಗೆ ವಿದ್ಯುತ್ ಸಂಪರ್ಕ ಕಡಿತಗೊಂಡ ಹಿನ್ನೆಲೆಯಲ್ಲಿ ಶಾಲೆಗೆ 8 ದಿನಗಳ ಕಾಲ ರಜೆ ಘೋಷಣೆ ಮಾಡಲಾಗಿದ್ದು ವಿದ್ಯಾರ್ಥಿಗಳು ತಮ್ಮ ಊರುಗಳಿಗೆ ತೆರಳುತ್ತಿದ್ದಾರೆ. ಇಡೀ ಜಿಲ್ಲೆಯಲ್ಲಿ ಶಾಲಾ ಕಾಲೇಜು ಎಂದಿನಂತೆ ನಡೆಯಲಿದೆ.

ರಸ್ತೆಗೆ ಉರುಳಿದ ಭಾರೀ ಗಾತ್ರದ ಮರ

- ಚಲಿಸುತ್ತಿದ್ದ ಜೀಪ್ ಮೇಲೆ ಬಿದ್ದ ವಿದ್ಯುತ್ ತಂತಿ
- ವಿದ್ಯುತ್ ಕಡಿತದಿಂದ ತಪ್ಪಿದ ಅನಾಹುತ



ಗೋಣಿಕೊಪ್ಪ, ಜು.4– ಪೊನ್ನಂಪೇಟೆ – ಕಾನೂರು ಮುಖ್ಯರಸ್ತೆಯಲ್ಲಿ ಮಧ್ಯೆ ಸೋಮವಾರ ಮಧ್ಯಾಹ್ನ ವಿದ್ಯುತ್ ತಂತಿ ಮೇಲೆ ಭಾರೀ ಗಾತ್ರದ ಮರ ಉರುಳಿ ಬಿದ್ದಿದೆ. ಆ ವೇಳೆ ಅದೇ ಮಾರ್ಗವಾಗಿ ಚಲಿಸುತ್ತಿದ್ದ ಜೀಪ್ ಮೇಲೆ ವಿದ್ಯುತ್ ತಂತಿ ಬಿದ್ದಿದ್ದು, ಆ ಸಂದರ್ಭದಲ್ಲಿ ವಿದ್ಯುತ್ ಕಡಿತಗೊಂಡಿದ್ದರಿಂದ ಸಂಭವಿಸಬಹುದಾಗಿದ್ದ ಭಾರೀ ಅಪಾಯ ತಪ್ಪಿದಂತಾಗಿದೆ.

ಮಧ್ಯಾಹ್ನ 2 ಗಂಟೆ ಸುಮಾರಿಗೆ ತೂಚಮಕೇರಿ ಎಂಬಲ್ಲಿ ಮರ ಬಿದ್ದಾಗ 4–5 ಕಂಬಗಳು ಧರೆಗೆ ಉರುಳಿದವು. ರಸ್ತೆಯಲ್ಲಿ ತೆರಳುತ್ತಿದ್ದ ಜೀಪ್ ಮೇಲೆ ವಿದ್ಯುತ್ ತಂತಿ ಬಿದ್ದಿದೆ. ಚಾಲಕ ಕೊಳ್ಳಿಮಾಡ ಜೀವನ್ ಜೀವಪಾಯದಿಂದ ಪಾರಾಗಿದ್ದಾರೆ. ನಂತರ ಮರ ತೆರವು ಕಾರ್ಯ ನಡೆಸಲಾಯಿತು. ಸೆಸ್ಕ್ ಸಿಬ್ಬಂದಿ ತಂತಿ ಬೇರ್ಪಡಿಸಿದರು.

ಬಿಜೆಪಿ ಬೆಂಬಲಿತರಿಗೆ ಚಾ.ನಗರ ಎಪಿಎಂಸಿ ಗದ್ದುಗೆ

- ಅಧ್ಯಕ್ಷರಾಗಿ ಮನೋಜ್ ಪಟೇಲ್, ಉಪಾಧ್ಯಕ್ಷರಾಗಿ ಕಲಾವತಿ ಆಯ್ಕೆ
- ಕಾಂಗ್ರೆಸ್ ಬೆಂಬಲಿತರಿಗೆ ಸೋಲು

ಚಾಮರಾಜನಗರ, ಜು.4(ಎಸ್‌ಎಸ್)– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆದು, ನಿರೀಕ್ಷೆಯಂತೆ ಬಿಜೆಪಿ ಬೆಂಬಲಿತರು ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ನೂತನ ಅಧ್ಯಕ್ಷರಾಗಿ ಮನೋಜ್ ಪಟೇಲ್, ಉಪಾಧ್ಯಕ್ಷ ಸ್ಥಾನಕ್ಕೆ ಕಲಾವತಿ ಆಯ್ಕೆಯಾದರು.

ಎಪಿಎಂಸಿ ಸಭಾಂಗಣದಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತರಾಗಿ ಮನೋಜ್ ಪಟೇಲ್, ಕಾಂಗ್ರೆಸ್ ಬೆಂಬಲಿತರಾಗಿ ಹೆಚ್.ಎಸ್. ಮಹದೇವಸ್ವಾಮಿ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತರಾಗಿ ಕಲಾವತಿ, ಕಾಂಗ್ರೆಸ್ ಬೆಂಬಲಿತರಾಗಿ ಎಲ್.ರಾಮಚಂದ್ರ ಉಮೇದುವಾರಿಕೆ ಸಲ್ಲಿಸಿದ್ದರು. ಚುನಾವಣೆಯಲ್ಲಿ ಮತದಾನಕ್ಕೆ ಅರ್ಹರಾಗಿದ್ದ ಎಲ್ಲಾ 16 ನಿರ್ದೇಶಕರು ಮತ ಚಲಾಯಿಸಿದರು. ಮನೋಜ್ ಪಟೇಲ್ ಮತ್ತು ಕಲಾವತಿ ತಲಾ 9 ಮತಗಳನ್ನು ಪಡೆದು ಕ್ರಮವಾಗಿ ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆಯಾದರು. ಹೆಚ್.ಎಸ್.ಮಹದೇವಸ್ವಾಮಿ ಮತ್ತು ರಾಮಚಂದ್ರ ತಲಾ 7 ಮತಗಳನ್ನು ಪಡೆದು ಎರಡು ಮತಗಳ ಅಂತರದಿಂದ ಸೋಲು ಅನುಭವಿಸಿದರು. ವರ್ತಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಕಂಡಿದ್ದ ವೆಂಕಟರಾವ್ ಅವರು ಬಿಜೆಪಿ ಬೆಂಬಲಿತ ಅಭ್ಯರ್ಥಿಗಳನ್ನು ಬೆಂಬಲಿಸಿದ್ದರಿಂದ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನ ಬಿಜೆಪಿಗೆ ಬಹಳ ಸುಲಭವಾಗಿ ಒಲಿಯಿತು.



ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ 12 ನಿರ್ದೇಶಕರು, ಮೂವರು ನಾಮನಿರ್ದೇಶಿತರು ಹಾಗೂ ತೆಂಗು ಬೆಳೆಗಾರರ ಸಂಘದ ಓರ್ವ ಪ್ರತಿನಿಧಿ ಮತದಾನದ ಹಕ್ಕು ಹೊಂದಿದ್ದು, ಒಟ್ಟು 16 ಮತದಾರರು ಮತ ಚಲಾಯಿಸಿದರು. ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು 7 ಸ್ಥಾನಗಳಲ್ಲಿ ಗೆದ್ದಿದ್ದರು. 4 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತರು ಗೆಲುವು ಸಾಧಿಸಿದ್ದರು. ಇನ್ನುಳಿದ 1 ಸ್ಥಾನ ವರ್ತಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವೆಂಕಟರಾವ್ ಗೆದ್ದಿದ್ದರು. ಬಿಜೆಪಿ ಬೆಂಬಲಿತ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ ಗೆದ್ದಿದ್ದ ನಾಲ್ವರು(ತಮ್ಮನ್ನು ಸೇರಿದಂತೆ) ಮೂವರು ನಾಮನಿರ್ದೇಶಿತರು, ತೆಂಗು ಬೆಳೆಗಾರರ ಸಂಘದ ಅರಕಲಗೂಡು ಲಿಂಗಣ್ಣ, ಪಕ್ಷೇತರ ಅಭ್ಯರ್ಥಿ ವೆಂಕಟರಾವ್ ಅವರ ಮತಗಳನ್ನು ಪಡೆದು ಗದ್ದುಗೆ ಹಿಡಿದರು. ಕಾಂಗ್ರೆಸ್ ಬೆಂಬಲಿತರು ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ತನ್ನ ಪಕ್ಷದ 7 ಬೆಂಬಲಿತರ ಮತಗಳನ್ನು ಮಾತ್ರ ಪಡೆದರು. ಚುನಾವಣಾಧಿಕಾರಿಯಾಗಿ ತಹಸೀಲ್ದಾರ್ ಬಸವರಾಜು ಕಾರ್ಯ ನಿರ್ವಹಿಸಿದರು.

> ನನ್ನ ಅಧಿಕಾರದ ಅವಧಿಯಲ್ಲಿ ರೈತರು ಬೆಳೆದ ತರಕಾರಿ, ಹಣ್ಣು ಹಾಗೂ ಇತರ ಉತ್ಪನ್ನಗಳನ್ನು ಸಂಗ್ರಹಿಸಿಡಲು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರ ಸಹಕಾರದೊಂದಿಗೆ ಕೋಲ್ಡ್ ಸ್ಟೋರೇಜ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು. ರೈತರು ಹಾಗೂ ವರ್ತಕರ ನಡುವೆ ಸೇತುವೆಯಂತೆ ಕೆಲಸ ನಿರ್ವಹಿಸಿ, ಎಪಿಎಂಸಿ ಮೂಲಕ ದೊರೆಯುವ ಸವಲತ್ತನ್ನು ಅರ್ಹರಿಗೆ ತಲುಪಿಸಲಾಗುವುದು.
>
> –ಮನೋಜ್ ಪಟೇಲ್,
>
> **ಚಾ.ನಗರ ಎಪಿಎಂಸಿ ನೂತನ ಅಧ್ಯಕ್ಷ.**

ಸನ್ಮಾನ: ನೂತನ ಅಧ್ಯಕ್ಷ–ಉಪಾಧ್ಯಕ್ಷರಾಗಿ ಮನೋಜ್ ಪಟೇಲ್ ಹಾಗೂ ಕಲಾವತಿ ಆಯ್ಕೆಯಾಗಿ ಹೊರ ಬರುತ್ತಿದ್ದಂತೆಯೇ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಅವರಿಬ್ಬರಿಗೂ ಸಿಹಿ ತಿನ್ನಿಸಿ, ಹಾರ ಹಾಕಿ ಅಭಿನಂದಿಸಿದರು. ಶಾಸಕ ಎನ್.ಮಹೇಶ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಹಾಸನ ಜಿಲ್ಲಾ ಉಸ್ತುವಾರಿ ಜಿ.ನಿಜಗುಣರಾಜು, ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್. ಸುಂದರ್, ರೈತ ಮುಖಂಡ ಅಮ್ಮನಪುರ ಮಲ್ಲೇಶ್, ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜು, ಮುಖಂಡರಾದ ಡಾ.ಎ.ಆರ್.ಬಾಲು, ಹನುಮಂತಶೆಟ್ಟಿ, ಮಂಗಲ ಶಿವಕುಮಾರ್, ಕೆಲ್ಲಂಬಳ್ಳಿ ಸೋಮಶೇಖರ್ ಇತರರು ನೂತನ ಅಧ್ಯಕ್ಷ–ಉಪಾಧ್ಯಕ್ಷರಿಗೆ ಶುಭ ಕೂರಿದರು.

ಹನೂರಲ್ಲಿ ಅದ್ದೂರಿ ಕೆಂಪೇಗೌಡರ ಜಯಂತ್ಯೋತ್ಸವ



ಹನೂರು, ಜು.4(ಸೋಮು)–ಪಟ್ಟಣದಲ್ಲಿಂದು ವಿಜೃಂಭಣೆಯಿಂದ ಕೆಂಪೇಗೌಡರ 513ನೇ ಜಯಂತಿಯನ್ನು ಆಚರಿಸಲಾಯಿತು. ಪಟ್ಟಣದ ಆರ್‌ಎಂಸಿ ಆವರಣದಲ್ಲಿ ಕೆಂಪೇಗೌಡ ಪ್ರತಿಮೆಯ ಮೆರವಣಿಗೆಗೆ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಸೋಮನಾಥೇಶ್ವರ ಸ್ವಾಮೀಜಿ ಹಾಗೂ ಶಾಸಕ ಆರ್.ನರೇಂದ್ರ ಚಾಲನೆ ನೀಡಿದರು. ಬಳಿಕ ಪಟ್ಟಣದ ಮುಖ್ಯರಸ್ತೆಯಲ್ಲಿ ಹೊರಟು ಮೆರವಣಿಗೆ ಬಂಡಳ್ಳಿ ರಸ್ತೆಯ ಜಿ.ವಿ.ಗೌಡ ಕಾಲೇಜಿನವರೆಗೆ ಸಾಗಿತು.

ಆಕರ್ಷಕ ಗಜಾರೂಢ ಸಹಿತ ಅಲಂಕೃತ ವಾಹನದಲ್ಲಿ ಧೀರ ಕೆಂಪೇಗೌಡ ಭಾವಚಿತ್ರ ಮೆರವಣಿಗೆ ಮಾಡಲಾಯಿತು. ಡೊಳ್ಳು ಕುಣಿತ, ವೀರಗಾಸೆ, ಕಂಸಾಳೆ ನೃತ್ಯ, ಡೋಲು, ತಮಟೆ, ಕೇರಳ ನೃತ್ಯಗಳು ಗಮನ ಸೆಳೆದವು. ಯುವತಿಯರು ಕಳಸ ಹೊತ್ತು ಸಾಗಿದರು. ತಾಲೂಕಿನ ವಿವಿಧ ಗ್ರಾಮಗಳಿಂದ ಸಮುದಾಯದ ಮುಖಂಡರು ಹಾಗೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆಯಲ್ಲಿ ಡೊಳ್ಳು, ತಮಟೆ ತಾಳಮೇಳ ಸದ್ದಿಗೆ ಮಕ್ಕಳು, ಯುವಕರು ಮೆರವಣಿಗೆ ಉದ್ದಕ್ಕೂ ಕುಣಿದು ಕುಪ್ಪಳಿಸಿದರು.

ಪಪಂ ಸದಸ್ಯರು, ಒಕ್ಕಲಿಗ ಸಂಘದ ರಾಜ್ಯಾಧ್ಯಕ್ಷ ಮಂಜೇಶ್‌ಗೌಡ, ಚಾಮರಾಜನಗರ ಎಸ್ಪಿ ಶಿವಕುಮಾರ್, ಡಿವೈಎಸ್ಪಿ ನಾಗರಾಜು, ಮಾನಸ ಫೌಂಡೇಶನ್ ಅಧ್ಯಕ್ಷ ದತ್ತೇಶ್‌ಕುಮಾರ್ ಹಾಗೂ ಸಮುದಾಯದ ಮುಖಂಡರು ಸೇರಿದಂತೆ ಪಕ್ಷಾತೀತವಾಗಿ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಮತ್ತಿಪುರದಲ್ಲಿ ನವಜಾತ ಶಿಶು ಪತ್ತೆ

ಮಗು ಬಿಟ್ಟು ಹೋದ ತಾಯಿ ಮತ್ತೆ ಪ್ರತ್ಯಕ್ಷ..!

ಕೊಳ್ಳೇಗಾಲ, ಜು.4(ನಾಗೇಂದ್ರಸ್ವಾಮಿ)–ಎರಡು ದಿನದ ಹಿಂದೆ ಜನಿಸಿದ ಹಸುಗೂಸನ್ನು ಬಸ್ ನಿಲ್ದಾಣದ ಸಮೀಪ ಬಿಟ್ಟು ಹೋದ ತಾಯಿಯೊಬ್ಬರು ಪೊಲೀಸರ ಪರಿಶೀಲನೆ ವೇಳೆ ಪ್ರತ್ಯಕ್ಷವಾಗಿ ಮಗು ತನ್ನದೆಂದು ಒಪ್ಪಿಕೊಂಡರೂ, ಸಾಕಲು ಆಗದೆ ಅಸಹಾಯಕತೆ ವ್ಯಕ್ತಪಡಿಸಿದ ಘಟನೆ ತಾಲೂಕಿನ ಮತ್ತಿಪುರದಲ್ಲಿ ಸೋಮವಾರ ಜರುಗಿದೆ.



ಇಂದು ಬೆಳ್ಳಂಬೆಳಗ್ಗೆ ತಾಲೂಕಿನ ಮತ್ತೀಪುರ ಬಸ್ ನಿಲ್ದಾಣದ ಸಮೀಪದಲ್ಲಿ ಎರಡು ದಿನದ ಜನಿಸಿದ ಗಂಡು ಮಗು ಪತ್ತೆಯಾಗಿತ್ತು ಮಗುವನ್ನು ಬಟ್ಟೆಯಿಂದ ಸುತ್ತಿ ಬಸ್ ನಿಲ್ದಾಣ ಸಮೀಪ ಕಸದ ರಾಶಿ ಬಳಿ ಬಿಟ್ಟು ತಾಯಿ ನಾಪತ್ತೆಯಾಗಿದ್ದರು. ನವಜಾತ ಶಿಶು ಕಂಡ ಗ್ರಾಮಸ್ಥರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸುತ್ತಿದ್ದ ವೇಳೆ ಮಗುವಿನ ತಾಯಿ ದಿಢೀರ್ ಪ್ರತ್ಯಕ್ಷಳಾಗಿ 'ಮಗು ತನ್ನದೆಂದು ಒಪ್ಪಿಕೊಂಡಿದ್ದಾರೆ.

10 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದೆ. ಈ ಸಂದರ್ಭದಲ್ಲಿ ಒಬ್ಬರ ಪರಿಚಯವಾಗಿ, ನಂತರ ಅವರನ್ನು ಮದುವೆಯಾಗಿದ್ದೆ. ಮದುವೆಯಾದ ಕೆಲವು ದಿನಗಳ ನಂತರ ಅವರು ನನ್ನನ್ನು ಬಿಟ್ಟು ಹೋದರು. ಸದ್ಯ ಮಗುವನ್ನು ನೋಡಿಕೊಳ್ಳಲು ಆಗದ ಕಾರಣ ಬಸ್ ತಂಗುದಾಣದಲ್ಲಿ ಇಟ್ಟು ಬಂದೆ ಎಂದು ತಾಯಿ ವಿಚಾರಣೆಯ ಸಂದರ್ಭದಲ್ಲಿ ತಿಳಿಸಿದ್ದಾರೆ.

ಬಳಿಕ ಪೊಲೀಸರು ಆಕೆಯನ್ನು ಸಮಾಧಾನಪಡಿಸಿದರು. ಕಾನೂನು ಪ್ರಕಾರ ಬೇರೆಯವರಿಗೆ ಮಗುವನ್ನು ದತ್ತು ಕೊಡಿಸುವುದಾಗಿ ಬುದ್ಧಿವಾದ ಹೇಳಿ, ಮರಳಿ ಮಗುವನ್ನು ಆಕೆಯ ಮಡಿಲಿಗೆ ನೀಡಿದರು. ಅಲ್ಲದೆ ದತ್ತು ಕೊಡಿಸುವವರೆಗೆ ಮಗುವಿಗೆ ತೊಂದರೆ ಮಾಡದಂತೆ ಎಚ್ಚರಿಕೆ ನೀಡಿ, ತಾತ್ಕಾಲಿಕವಾಗಿ ಪ್ರಕರಣ ಸುಖಾಂತ್ಯಗೊಳಿಸಿದ್ದಾರೆ.

ಅಕ್ರಮ ಕಟ್ಟಡಗಳ ತೆರವಿಗೆ ಕ್ರಮ ವಹಿಸಿ

ಪಪಂ ಸದಸ್ಯರ ಒಕ್ಕೊರಲ ಆಗ್ರಹ



ಯಳಂದೂರು, ಜು.4(ವಿ.ನಾಗರಾಜ)– ಯಳಂದೂರು ಪಟ್ಟಣ ವ್ಯಾಪ್ತಿಯಲ್ಲಿ 35ಕ್ಕೂ ಹೆಚ್ಚು ಅಕ್ರಮ ಕಟ್ಟಡಗಳ ಕಾಮಗಾರಿ ನಡೆಯುತ್ತಿದ್ದು, ಇದನ್ನು ತಡೆಯುವಲ್ಲಿ ಪಪಂ ಅಧಿಕಾರಿ ವರ್ಗ ವಿಫಲವಾಗಿದೆ. ಕೂಡಲೇ ಇಂತಹ ಕಟ್ಟಡಗಳನ್ನು ತೆರವುಗೊಳಿಸಲು ನಿರ್ದಾಕ್ಷಿಣ್ಯ ಕ್ರಮ ವಹಿಸಬೇಕು ಎಂದು ಪಪಂ ಸದಸ್ಯರು ಒಕ್ಕೊರಲಿನಿಂದ ಆಗ್ರಹಿಸಿದರು.

ಸೋಮವಾರ ಪಪಂ ಸಭಾಂಗಣದಲ್ಲಿ ಅಧ್ಯಕ್ಷೆ ಪ್ರಭಾವತಿ ರಾಜಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಿತು. ಪಟ್ಟಣದ ಕಂದಾಯ ವಸೂಲಿ ಮಾಡಲು ಹೋಗುವ ನೌಕರ ವರ್ಗ ಅಕ್ರಮ ನಲ್ಲಿ ಸಂಪರ್ಕ, ಕಟ್ಟಡಗಳ ನಿರ್ಮಾಣಗಳ ಬಗ್ಗೆ ಮಾಹಿತಿ ನೀಡುವುದಿಲ್ಲ ಕೆಲ ಬೀದಿ–ರಸ್ತೆಯಲ್ಲಿ ನಲ್ಲಿಯ ಸಂಪರ್ಕಕ್ಕೆ ಹಳ್ಳಗಳನ್ನು ತೋಡಲಾಗಿದ್ದು, ವಾಹನ ಸಂಚಾರಕ್ಕೆ ತೊಡಕಾಗಿದೆ. ಇದನ್ನು ಮುಚ್ಚಿಸಬೇಕು. ಅಕ್ರಮವಾಗಿ ನಲ್ಲಿ ಸಂಪರ್ಕ ಕಡಿತಗೊಳಿಸಬೇಕು ಎಂದು ಒತ್ತಾಯಿಸಿದರು. ಎಲೆಕೇರಿ ಬೀದಿಯಲ್ಲಿ ಕಟ್ಟಡ ಕಾಮಗಾರಿ ಮಾಡಲು ಚರಂಡಿಯನ್ನೇ ಮುಚ್ಚಲಾಗಿದೆ. ರಸ್ತೆಯಲ್ಲಿ ಸಂಚರಿಸಲು ಕಷ್ಟವಾಗಿದೆ. ಇಂತಹ ಅನೇಕ ಪ್ರಕರಣಗಳು ಪಟ್ಟಣದಲ್ಲಿ ನಡೆಯುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಭೆಯಲ್ಲಿ ಪಟ್ಟಣದ ಅಭಿವೃದ್ಧಿ ಕುರಿತ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಉಪಾಧ್ಯಕ್ಷೆ ಲಕ್ಷ್ಮಿ ಮಲ್ಲು, ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ್, ಮಹದೇವನಾಯಕ, ಸವಿತಾ ಬಸವರಾಜು, ಕೆ.ಮಲ್ಲಯ್ಯ, ಮಂಜು, ಬಿ.ರವಿ, ಸುಶೀಲಾ ಪ್ರಕಾಶ್, ಶಾಂತಮ್ಮ ನಿಂಗರಾಜು ನಾಮನಿರ್ದೇಶಿತ ಸದಸ್ಯರಾದ ಮಹೇಶ್, ರಘು, ನಿಂಗರಾಜು, ಮುಖ್ಯಾಧಿಕಾರಿ ಮಲ್ಲೇಶ್, ಜೆಇ ನಾಗೇಂದ್ರ, ರಾಜಸ್ವ ನಿರೀಕ್ಷಕ ನಂಜುಂಡಶೆಟ್ಟಿ, ಪರಶಿವಮೂರ್ತಿ, ಲಕ್ಷ್ಮಿ ಮಲ್ಲಿಕಾರ್ಜುನ, ಜಯಲಕ್ಷ್ಮಿ, ರಘು, ರಾಜು ಸೇರಿದಂತೆ ಹಲವರಿದ್ದರು.

ವ್ಹೀಲಿಂಗ್ ಮಾಡುತ್ತಿದ್ದ ಇಬ್ಬರು ಯುವಕರ ವಿರುದ್ಧ ಕೇಸ್

ಕೊಳ್ಳೇಗಾಲ,ಜು.4(ನಾಗೇಂದ್ರಸ್ವಾಮಿ)– ದ್ವಿಚಕ್ರ ವಾಹನದಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಇಬ್ಬರು ಯುವಕರ ವಿರುದ್ಧ ಕೊಳ್ಳೇಗಾಲ ಟೌನ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಹನೂರು ತಾಲೂಕಿನ ಮಂಗಲ ಗ್ರಾಮದ ಜುಬೇರ್(19) ಮತ್ತು ಇಫ್ರಾಜ್(18) ಕೊಳ್ಳೇಗಾಲ–ಬೆಂಗಳೂರು ರಸ್ತೆಯಲ್ಲಿ ಡಿಯೋ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ಇಬ್ಬರೂ ಯುವಕರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದಾರೆ

'ಅತಿವೇಗ... ತಿಥಿ ಬೇಗ' ಜಾಗರೂಕತೆಯಿಂದ ವಾಹನ ಚಲಾಯಿಸಿ, ನಿಯಮ ಪಾಲಿಸಿ ಎಂಬಿತ್ಯಾದಿ ಫಲಕಗಳನ್ನು ಪೊಲೀಸ್ ಇಲಾಖೆ ಅಳವಡಿಸಿ ಆಗಿಂದಾಗ್ಗೆ ತಿಳಿವಳಿಕೆ ನೀಡುತ್ತಿದ್ದರೂ ಸಹ ಯುವಕರು ಇದನ್ನು ಲೆಕ್ಕಿಸದೆ, ನಿಯಮ ಉಲ್ಲಂಘಿಸಿ ವಾಹನ ಚಲಾಯಿಸುತ್ತಿರುವ ಕ್ರಮ ಸರಿಯಲ್ಲ. ಈ ರೀತಿ ವರ್ತನೆ ಪ್ರದರ್ಶಿಸಿದರೆ ಮುಂದಿನ ದಿನಗಳಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಅನಿವಾರ್ಯ ಎಂದು ಡಿವೈಎಸ್ಪಿ ನಾಗರಾಜು ಎಚ್ಚರಿಸಿದ್ದಾರೆ.

ಬಿಜೆಪಿಯಿಂದ ತಾಪಂ ಮಾಜಿ ಉಪಾಧ್ಯಕ್ಷ ದಯಾನಿಧಿ ಉಚ್ಚಾಟನೆ

ಚಾಮರಾಜನಗರ, ಜು.4(ಎಸ್‌ಎಸ್)–ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಪಿ.ಎನ್.ದಯಾನಿಧಿ ಅವರನ್ನು ಪಕ್ಷ ವಿರೋಧಿ ಚಟುವಟಿಕೆ ಕಾರಣದಿಂದ ಪಕ್ಷದಿಂದ 6 ವರ್ಷಗಳವರೆಗೆ ಉಚ್ಚಾಟಿಸಲಾಗಿದೆ.



ಈ ಬಗ್ಗೆ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್ ಅವರು ಆದೇಶ ಹೊರಡಿಸಿದ್ದಾರೆ. ಆದೇಶದಲ್ಲಿ ದಯಾನಿಧಿ ಅವರನ್ನು ಈ ಕೂಡಲೇ ಜಾರಿಗೆ ಬರುವಂತೆ ಉಚ್ಚಾಟಿಸಲಾಗಿದೆ ಎಂದು ತಿಳಿಸಲಾಗಿದೆ. ಆದರೆ ಪಕ್ಷ ವಿರೋಧಿ ಚಟುವಟಿಕೆ ಏನು ಎಂಬುದನ್ನು ನಿಖರವಾಗಿ ತಿಳಿಸಿಲ್ಲ. ಇತ್ತೀಚೆಗೆ ನಡೆದ ಚಾಮುಲ್ ಅಧ್ಯಕ್ಷಗಾದಿ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡ ಹೆಚ್.ಎಸ್.ಬಸವರಾಜು ಅವರಿಗೆ ಅಧ್ಯಕ್ಷ ಸ್ಥಾನ ಕೊನೆ ಕ್ಷಣದಲ್ಲಿ ತಪ್ಪಿದ ಕಾರಣ ಅವರ ಬೆಂಬಲಿಗರಾಗಿದ್ದ ಪಿ.ಎನ್.ದಯಾನಿಧಿ ಅವರು ಪಕ್ಷದ ಮುಖಂಡರ ಮೇಲೆ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ತಿಳಿದು ಬಂದಿದೆ.

ಈ ಬಗ್ಗೆ 'ಮೈಸೂರುಮಿತ್ರ'ನೊಂದಿಗೆ ಮಾತನಾಡಿದ ಪಿ.ಎನ್.ದಯಾನಿಧಿ, ನನ್ನನ್ನು ಪಕ್ಷದಿಂದ ಉಚ್ಚಾಟಿಸಿರುವುದು ನನಗೆ ಮಾಧ್ಯಮದವರಿಂದ ತಿಳಿಯಿತೇ ಹೊರತು ಪಕ್ಷದಿಂದ ಯಾವುದೇ ಮಾಹಿತಿ ಇಲ್ಲ. ನಾನು ಪಕ್ಷಕ್ಕೆ ನಿಷ್ಠೆಯಿಂದ ಇದ್ದು, ಎಲ್ಲಾ ಚುನಾವಣೆಗಳಲ್ಲೂ ಪಕ್ಷದ ಅಧಿಕೃತ ಅಭ್ಯರ್ಥಿ ಪರ ಕೆಲಸ ನಿರ್ವಹಿಸಿದ್ದೇನೆ.

ಚಾಮುಲ್ ಅಧ್ಯಕ್ಷ ಚುನಾವಣೆ ವೇಳೆ ಬಿಜೆಪಿಯ ಕೆಲವು ಮುಖಂಡರ ಪಿತೂರಿಯಿಂದ ಹಿರಿಯರು ಹಾಗೂ ಅನುಭವಿಯಾಗಿದ್ದ ಹೆಚ್.ಎಸ್.ಬಸವರಾಜು ಅವರಿಗೆ ಅಧ್ಯಕ್ಷ ಸ್ಥಾನ ಕೈತಪ್ಪಿತು. ಇದರಿಂದ ಬೇಸರಗೊಂಡು ನಾನು ಪಕ್ಷದ ನಾಯಕರ ಬಳಿ ಅಸಮಾಧಾನ ವ್ಯಕ್ತಪಡಿಸಿದ್ದು ನಿಜ. ಇದನ್ನು ಹೊರತುಪಡಿಸಿ ನಾನು ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ. ಆದರೂ ಸಹ ನನ್ನ ರಾಜಕೀಯ ಬೆಳವಣಿಗೆಯನ್ನು ಸಹಿಸದೆ ಕೆಲವರು ನನ್ನ ವಿರುದ್ಧ ಷಡ್ಯಂತರ ನಡೆಸಿ ಉಚ್ಚಾಟನೆ ಮಾಡಿಸಿರುವುದು ನನಗೆ ನೋವು ತಂದಿದೆ ಎಂದರು.

ಮೈಸೂರು ಮಿತ್ರ ಮಂಗಳವಾರ 5 ಜುಲೈ 2022

ಒಂದನೇ ಪುಟದಿಂದ

ಪೌರಕಾರ್ಮಿಕರ ಮುಷ್ಕರ ಅಂತ್ಯ

ಉಭಯ ಸದನಗಳ ಅನುಮೋದನೆಯನ್ನು ಮೂರು ತಿಂಗಳಲ್ಲಿ ಪಡೆಯಲು ನಿರ್ಣಯ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಮುಷ್ಕರ ಅಂತ್ಯಕ್ಕೆ ಪೌರಕಾರ್ಮಿಕ ಮುಖಂಡರು ತೀರ್ಮಾನ ಮಾಡಿದರು. ಇದರಿಂದ ಕಸ ಸಂಗ್ರಹ, ತ್ಯಾಜ್ಯ ವಿಲೇವಾರಿ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಆತಂಕ ದೂರವಾಗಿದೆ. ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಅಧ್ಯಕ್ಷತೆಯಲ್ಲಿ ಇಡೀ ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರು ಸೇರಿದಂತೆ ಇನ್ನಿತರ ಸ್ವಚ್ಛತಾ ಕಾರ್ಮಿಕರು ಜು.1ರಂದು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದರು.

ಅಂತೆಯೇ ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘ, ಮೈಸೂರು ಮಹಾನಗರ ಪಾಲಿಕೆ ಸ್ವಚ್ಛತೆ ವಾಹನ ಚಾಲಕರ ಸಂಘದ ಜಂಟಿ ಆಶ್ರಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸದರಿ ಸ್ವಚ್ಛತಾ ಕಾರ್ಮಿಕರು ಮುಷ್ಕರ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವುದು ಸವಾಲಾಗಿ ಪರಿಣಮಿಸಿತ್ತು.

ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆ ಮುಖ್ಯದ್ವಾರದ ಎದುರು ಬೆಳಗ್ಗೆಯಿಂದ ಸಂಜೆಯವರೆಗೆ ಮುಷ್ಕರನಿರತ ಸ್ವಚ್ಛತಾ ಕಾರ್ಮಿಕರು ಪ್ರತಿಭಟನೆ ನಡೆಸಿದರೆ, ಖಾಯಂ ಪೌರಕಾರ್ಮಿಕರ ಮೂಲಕ ಹಿಂದೆ ಪ್ರತಿದಿನ ಮಾಡುತ್ತಿದ್ದಂತೆ ಪರಿಪೂರ್ಣವಾಗಿ ಇಡೀ ನಗರದ ಸ್ವಚ್ಛತಾ ಕೆಲಸ ಮಾಡಿಸಲು ಸಾಧ್ಯವಾದ ಪರಿಸ್ಥಿತಿ ಪಾಲಿಕೆಗೆ ಎದುರಾಗಿತ್ತು. ಪಾಲಿಕೆಯ ನೇರಪಾವತಿ ಮತ್ತು ಹೆಚ್ಚುವರಿ ಪೌರಕಾರ್ಮಿಕರು ಸೇರಿದಂತೆ 2 ಸಾವಿರಕ್ಕೂ ಹೆಚ್ಚು ಸ್ವಚ್ಛತಾ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ 530 ಖಾಯಂ ಪೌರಕಾರ್ಮಿಕರ ಮೇಲೆ ಹೆಚ್ಚಿನ ಕೆಲಸ ಹೊರೆ ಬಿದ್ದಿತ್ತು. ದೇವರಾಜ ಮಾರುಕಟ್ಟೆ, ಬೋಟಿ ಬಜಾರ್, ಸಂತೆಪೇಟೆ ಸೇರಿದಂತೆ ನಗರದ ಹೃದಯ ಭಾಗವೂ ಸೇರಿದಂತೆ ಎಲ್ಲಾ 65 ವಾರ್ಡ್‌ಗಳಲ್ಲಿ ರಸ್ತೆಬದಿಯಲ್ಲಿ ಕಸದ ರಾಶಿ ಗುಡ್ಡೆ ಹಿಡಿದು ದುರ್ವಾಸನೆ ಬೀರುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಇಂದು ಬೈಕ್‌ಗಳ ಮೂಲಕ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡಿದ್ದ ಮುಷ್ಕರನಿರತರ ಮುಖಂಡರು, ನಾಳೆಯಿಂದ (ಮಂಗಳವಾರದಿಂದ) ಕೆಲಸ ಸ್ಥಗಿತಗೊಳಿಸಿ ಬೆಂಬಲ ನೀಡುವಂತೆ ಖಾಯಂ ಪೌರಕಾರ್ಮಿಕರಲ್ಲಿ ಮನವಿ ಮಾಡಿದ್ದರು. ಸೋಮವಾರ ಸಂಜೆ ವೇಳೆಗೆ ಬೇಡಿಕೆ ಈಡೇರಿಸುವ ಸಂಬಂಧ ಸರ್ಕಾರ ಲಿಖಿತ ಭರವಸೆ ನೀಡಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ನಾಳೆಯಿಂದ ಎಂದಿನಂತೆ ಮುಷ್ಕರನಿರತ ಸ್ವಚ್ಛತಾ ಕಾರ್ಮಿಕರು ಕರ್ತವ್ಯಕ್ಕೆ ಮರಳಲಿದ್ದಾರೆ. ಅಂತೆಯೇ ಮುಷ್ಕರದೊಂದಿಗೆ ಪ್ರತಿಭಟನಾನಿರತರಾಗಿದ್ದ ನಗರ ಪಾಲಿಕೆಯ ಸ್ವಚ್ಛತಾ ಕಾರ್ಮಿಕರು ನಾಳೆ ಕೆಲಸ ಆರಂಭಿಸಲು ಸಜ್ಜಾಗಿದ್ದಾರೆ. ಮುಷ್ಕರ ಆರಂಭಿಸಿದ ಜು.1ರಂದೇ ಪೌರಕಾರ್ಮಿಕರ ಮುಖಂಡರೊಂದಿಗೆ ಸಭೆ ನಡೆಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಆದರೆ ಪೌರಕಾರ್ಮಿಕರ ಮುಖಂಡರು ಬೇಡಿಕೆಗಳ ಸಂಬಂಧ ಸರ್ಕಾರ ನೀಡಿದ್ದ ಭರವಸೆಯಲ್ಲಿ ಕೆಲ ಮಾರ್ಪಾಡು ಮಾಡುವಂತೆ ಪಟ್ಟು ಹಿಡಿದು ಮುಷ್ಕರ ಮುಂದುವರೆಸಿದ್ದರು.

ಮುಷ್ಕರದ 4ನೇ ದಿನವಾದ ಸೋಮವಾರ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಪೌರಕಾರ್ಮಿಕರ ಮುಖಂಡರೊಂದಿಗೆ ಸಭೆ ನಡೆಸಿದರಲ್ಲದೆ, ಜು.1ರ ಸಭಾ ನಡಾವಳಿಯನ್ನು ಪೌರಕಾರ್ಮಿಕರ ಮುಖಂಡರ ಬೇಡಿಕೆಯಂತೆ ಪರಿಷ್ಕರಿಸಿದ ಹಿನ್ನೆಲೆಯಲ್ಲಿ ಮುಷ್ಕರ ಅಂತ್ಯಗೊಳಿಸಲಾಯಿತು.

ನೇರ ಪಾವತಿ ಪೌರಕಾರ್ಮಿಕರನ್ನು 3 ತಿಂಗಳೊಳಗೆ ಖಾಯಂಗೊಳಿಸಲು ಪ್ರಕ್ರಿಯೆ ಪ್ರಾರಂಭ ಮಾಡುವ ಭರವಸೆ ನೀಡಿದ್ದಾರೆ. ಮನೆ ಮನೆ ಕಸ ಸಂಗ್ರಹ ಹಾಗೂ ಕಸ ಸಾಗಾಣಿಕೆ ಮಾಡುವ ವಾಹನ ಚಾಲಕರು ಸೇರಿದಂತೆ ಇನ್ನಿತರ ಸ್ವಚ್ಛತಾ ಕಾರ್ಮಿಕರನ್ನು ನೇರಪಾವತಿಯಡಿಗೆ ತರುವ ಮೂಲಕ ಗುತ್ತಿಗೆ ಪದ್ಧತಿಯನ್ನು ಸಂಪೂರ್ಣ ರದ್ದುಗೊಳಿಸುವ ಭರವಸೆ ಸಿಕ್ಕಿದೆ. ಮುಖ್ಯಮಂತ್ರಿಗಳು ಹಾಗೂ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಪೌರಕಾರ್ಮಿಕರು ನಾಳೆಯಿಂದ ಕೆಲಸಕ್ಕೆ ಮರಳುವಂತೆ ಕೋರುತ್ತೇನೆ.
–ನಾರಾಯಣ್, ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷರು.

ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು ಸೋಮವಾರ ಸಭೆ ನಡೆಸಿ, ಜು.1ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳನ್ನು ನಮ್ಮ ಒತ್ತಾಯದಂತೆ ಪರಿಷ್ಕರಿಸಿ ಅಂತಿಮಗೊಳಿಸಿದ್ದಾರೆ. ಜು.1ರಂದು ನಡೆದ ಸಭೆಯಲ್ಲಿ ಖಾಯಂ ಸಂಬಂಧ ಕಾಲಮಿತಿ ನಿಗದಿ ಮಾಡಿರಲಿಲ್ಲ. ಸೋಮವಾರದ ಸಭೆಯಲ್ಲಿ ಈ ಸಂಬಂಧ ಕಾಲಮಿತಿಯನ್ನು ಉಲ್ಲೇಖಿಸಲಾಗಿದೆ.
–ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ

ಮುಖ್ಯಮಂತ್ರಿಗಳ ಸಭೆಯ ಪರಿಷ್ಕೃತ ನಡಾವಳಿಗಳು

ತಿಂಗಳಲ್ಲಿ ಪಡೆಯುವುದು. ನೇರ ನೇಮಕಾತಿ ಪೌರ ಕಾರ್ಮಿಕರ ಸೇವೆಯನ್ನು ಖಾಯಂ ಮಾಡುವವರೆಗೂ ನೇರ ಪಾವತಿ ಪೌರ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬ ಪೌರಕಾರ್ಮಿಕ ಮುಖಂಡರ ಬೇಡಿಕೆ ಕುರಿತು ಸಹ ಸದರಿ ಸಮಿತಿಯ ಸಲಹೆ ಪಡೆಯುವುದು. ಪೌರಕಾರ್ಮಿಕರಿಗೆ ಸಾಮಾಜಿಕವಾಗಿ ಗೌರವ, ಸೌಲಭ್ಯ ಹಾಗೂ ಸುರಕ್ಷತೆ ಅಗತ್ಯ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಸರ್ಕಾರವು ಪೌರಕಾರ್ಮಿಕರ ಸಮಸ್ಯೆಗಳಿಗೆ ಮಾನವೀಯತೆಯಿಂದ ಸ್ಪಂದಿಸಲಿದೆ. ಈ ಉದ್ದೇಶದಿಂದಲೇ ಆಯವ್ಯಯದಲ್ಲಿ ಪೌರಕಾರ್ಮಿಕರಿಗೆ ಮಾಸಿಕ 2 ಸಾವಿರ ರೂ.ಗಳ ಸಂಕಷ್ಟ ಭತ್ಯೆ ಘೋಷಿಸಿದ್ದು, ಇದಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಲಾಗಿದೆ. ಇದರೊಂದಿಗೆ ಪೌರಕಾರ್ಮಿಕರ ನೇಮಕಾತಿ ಸರಳೀಕರಣಗೊಳಿಸಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗುವುದು ಹಾಗೂ ನೇಮಕಾತಿ ನೀತಿಯನ್ನೂ ಜಾರಿಗೆ ತರಲಾಗುವುದು. ಈ ಸಂದರ್ಭದಲ್ಲಿ ಐಪಿಡಿ ಸಾಲಪ್ಪ ವರದಿ, ಚಂದ್ರಶೇಖರ್ ಸಮಿತಿ ವರದಿ ಹಾಗೂ ರಾಷ್ಟ್ರೀಯ ಕಾನೂನು ಶಾಲೆಯ ವರದಿಗಳನ್ನು ಪರಿಗಣಿಸುವುದು. ಜೊತೆಗೆ ಬೇರೆ ರಾಜ್ಯಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳ ಮಾಹಿತಿಯನ್ನೂ ಪಡೆಯುವುದು. ಅಲ್ಲದೆ, ಬೇರೆ ರಾಜ್ಯಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳ ಮಾಹಿತಿಯನ್ನೂ ಕಲೆ ಹಾಕುವುದು. ಕಾನೂನಾತ್ಮಕ ರಕ್ಷಣೆ ನೀಡಲು ಮುಂದಿನ ಅಧಿವೇಶನದಲ್ಲಿ ವಿಶೇಷ ಕಾಯ್ದೆ ಮಂಡಿಸಲಾಗುವುದನ್ನು ಸಭೆಯಲ್ಲಿ ನಿರ್ಣಯಿಸಲಾಯಿತು.

ಇದರೊಂದಿಗೆ ಪೌರಕಾರ್ಮಿಕರಿಗೆ ಪ್ರತ್ಯೇಕವಾಗಿ ಗೃಹಭಾಗ್ಯ ಯೋಜನೆ ಜಾರಿಗೊಳಿಸಲು ಹೊಸದಾಗಿ ಮಂಜೂರಾತಿ ನೀಡಲಾಗುವುದು. ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ರೈತ ವಿದ್ಯಾನಿಧಿ ಮಾದರಿಯಲ್ಲಿ ವಿದ್ಯಾರ್ಥಿ ವೇತನ ನೀಡಲಾಗುವುದು. ಪೌರಕಾರ್ಮಿಕ ಮಹಿಳೆಯರಿಗೆ ಸರ್ಕಾರಿ ನೌಕರರಿಗೆ ನೀಡುವಂತೆ ಹೆರಿಗೆ ಸೌಲಭ್ಯಗಳನ್ನು ವಿಸ್ತರಿಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ ಸೌಲಭ್ಯ ಒದಗಿಸಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ವಾರ್ಡ್‌ನಲ್ಲಿ ಒಂದು ಅಥವಾ ಎರಡು ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಲು ನಿರ್ಣಯಿಸಲಾಗಿದೆ. ಬಿಬಿಎಂಪಿ ಹೊರತಾಗಿ ರಾಜ್ಯದ ಇತರ ಕಡೆ ಚಾಲ್ತಿಯಲ್ಲಿರುವ ಗುತ್ತಿಗೆ ಪದ್ಧತಿಯನ್ನು ಹಂತ ಹಂತವಾಗಿ ಕಸದ ನಿರ್ವಹಣೆಗೆ ತೊಂದರೆಯಾಗದಂತೆ ನೇರ ಪಾವತಿಯಡಿಯಲ್ಲಿ ತರಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಭೂ ಪರಿವರ್ತನೆ ನಿಷೇಧ

ಭೂಕುಸಿತವಾಗುತ್ತಿದೆ. ಇದಕ್ಕೆ ಅತಿಯಾದ ವಾಣಿಜ್ಯೀಕರಣವೇ ಕಾರಣ. ಜಿಲ್ಲೆಯ ಬೆಟ್ಟಗಳ ಅಡಿಯಲ್ಲಿರುವ ಸುಣ್ಣದ ಪದರಗಳು ನೀರಿನ ಒತ್ತಡದಿಂದ ಭೂಕಂಪಕ್ಕೆ ಕಾರಣವಾಗುತ್ತಿವೆ. ಬೆಟ್ಟಗಳನ್ನು ಕಡಿದು ರೆಸಾರ್ಟ್ ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗುತ್ತಿದೆ. ಇದರಿಂದಾಗಿ ಬೆಟ್ಟಗಳ ಬಿಗಿ ಕಡಿಮೆಯಾಗಿ ಮಳೆ ನೀರಿನ ಒತ್ತಡ ಹೆಚ್ಚಿ ಸಮಸ್ಯೆಯಾಗುತ್ತಿದೆ. ಭೂ ಪರಿವರ್ತನೆ ಮಾಡುವುದನ್ನು ನಿಷೇಧಿಸದೇ ಕೊಡಗು ಜಿಲ್ಲೆಯನ್ನು ಭೂಕಂಪದಂತಹ ಅಪಾಯಗಳಿಂದ ರಕ್ಷಿಸಲಾಗದು. ಪರವಾನಗಿ ಪಡೆದ 450 ಹೋಮ್ ಸ್ಟೇಗಳಿದ್ದರೆ, ಕಾನೂನು ಬಾಹಿರವಾಗಿ ತೆರೆದ 4000 ಕ್ಕೂ ಹೆಚ್ಚು ಹೋಮ್ ಸ್ಟೇಗಳಿವೆ.

ಹೋಮ್ ಸ್ಟೇಗಳ ಸಮೀಕ್ಷೆ ನಡೆಸಲು ಸರ್ಕಾರ ನಿರ್ಧರಿಸಿದ್ದು ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳು ಜಂಟಿಯಾಗಿ ಈ ಸಮೀಕ್ಷಾ ಕಾರ್ಯ ಮಾಡಲಿದೆ. ಹೋಮ್ ಸ್ಟೇಗಳು ಕಾನೂನು ಬಾಹಿರವಾಗಿರುವುದರಿಂದ ಇವುಗಳಿಂದ ಸರ್ಕಾರಕ್ಕೆ ಬರಬೇಕಾದ ತೆರಿಗೆ ಬರುತ್ತಿಲ್ಲ. ಹೋಮ್ ಸ್ಟೇಗಳನ್ನು ನೋಂದಣಿ ಮಾಡಿಸುವುದು ಕಡ್ಡಾಯಗೊಳಿಸಿದರೆ ತೆರಿಗೆ ಸಂಗ್ರಹವಾಗುತ್ತದೆ ಎಂದರು.

ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ನೀಡುವ ಸಂಬಂಧ ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಕಾಯ್ದೆ ಮಂಡಿಸುವುದಾಗಿ ಇದೇ ಸಂದರ್ಭದಲ್ಲಿ ನುಡಿದರು. ರಾಜ್ಯದಲ್ಲಿ ಡೀಮ್ಡ್ ಫಾರೆಸ್ಟ್ ಹೆಸರಿನಲ್ಲಿ ಅರಣ್ಯ ಇಲಾಖೆಯ ಕೈಲಿದ್ದ ಆರು ಲಕ್ಷ ಹೆಕ್ಟೇರ್ ಭೂಮಿ ರಾಜ್ಯ ಸರ್ಕಾರಕ್ಕೆ ಮರಳುತ್ತಿದ್ದು, ಈ ಪೈಕಿ ದಶಕಗಳ ಕಾಲದಿಂದ ವ್ಯವಸಾಯ ಮಾಡುವವರಿಗೆ ಒಂದಷ್ಟು ಪ್ರಮಾಣದ ಭೂಮಿ ನೀಡಿ ಉಳಿದ ಭೂಮಿಯನ್ನು ಸರ್ಕಾರದ ವಶದಲ್ಲಿಟ್ಟುಕೊಳ್ಳುತ್ತೇವೆ.


ಕೃಷಿಯ ಹೆಸರಿನಲ್ಲಿ ಇಂತಹ ಭೂಮಿಯನ್ನು ಒತ್ತುವರಿ ಮಾಡಿರುವವರ ಮೇಲೆ ಸರ್ಕಾರ ಕಣ್ಣಿಟ್ಟಿದ್ದು, ಈ ಮಾಫಿಯಾವನ್ನು ತಡೆಗಟ್ಟಲು ಸರ್ವ ರೀತಿಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು. ರೈತರ ಹೆಸರಿನ ಮಾಫಿಯಾದವರು ಬೆಟ್ಟಗಳ ಮೇಲೂ ಒತ್ತುವರಿ ಮಾಡಿಕೊಂಡ ಅಸಂಖ್ಯಾತ ಉದಾಹರಣೆಗಳಿವೆ. ಬಗರ್‌ಹುಕುಂ ಸಾಗುವಳಿದಾರರಿಗೆ ಭೂಮಿ ಮಂಜೂರು ಮಾಡುವಾಗ ಇಂತಹ ಮಾಫಿಯಾದವರನ್ನು ಸದೆ ಬಡಿಯುವುದಾಗಿ ತಿಳಿಸಿದರು. ಈಗಿರುವ ಗೋಮಾಳ ಭೂಮಿಯನ್ನು ಶಾಲೆ,ಆಸ್ಪತ್ರೆ ಸೇರಿದಂತೆ ರಾಜ್ಯ ಸರ್ಕಾರದ ವಿವಿಧ ಉದ್ದೇಶಗಳಿಗಾಗಿ ಮೀಸಲಿಡುವಂತೆ ಶಾಸಕರಿಗೆ ವಿವರಿಸುವುದಾಗಿ ಅವರು ಹೇಳಿದರು.

ಮೈಸೂರು ಮೃಗಾಲಯದಲ್ಲಿ ಸುತ್ತೂರು ಶ್ರೀಗಳ ವಿಹಾರ

ಪ್ರಾಣಿ-ಪಕ್ಷಿಗಳ ವೀಕ್ಷಿಸಿ; ಸಿಬ್ಬಂದಿಯ ಕಳಕಳಿ ಪ್ರಶಂಸಿಸಿದ ಶ್ರೀಗಳು



ಮೃಗಾಲಯ ಭೇಟಿಯ ನೆನಪಿನಾರ್ಥ ಗಿಡ ನೆಡುತ್ತಿರುವ ಶ್ರೀಗಳು



ಗೊರಿಲ್ಲಾಗೆ ಸೇಬು ತಿನ್ನಿಸುತ್ತಿರುವ ಶ್ರೀಗಳು

ಮೈಸೂರು,ಜು.4(ಎಂಟಿವೈ)– ಅತ್ಯುತ್ತಮ ನಿರ್ವಹಣೆಯಿಂದಾಗಿ ಮೈಸೂರಿನ ಚಾಮರಾಜೇಂದ್ರ ಮೃಗಾಲಯ ದೇಶದಲ್ಲಿಯೇ ಮಾದರಿ ಮೃಗಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಮೈಸೂರಿಗರು ಹೆಮ್ಮೆ ಪಡುವ ಸಂಗತಿಯಾಗಿದೆ ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಮೃಗಾಲಯಕ್ಕೆ ಸೋಮವಾರ ಮಧ್ಯಾಹ್ನ ಭೇಟಿ ನೀಡಿ, ಆಪರೇಷನ್ ಥಿಯೇಟರ್, ಪ್ರಾಣಿ–ಪಕ್ಷಿಗಳನ್ನು ವೀಕ್ಷಿಸಿದರು. ಇದೇ ವೇಳೆ ಸ್ಥಳೀಯ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್, ಸಮವಸ್ತ್ರ ವಿತರಿಸಿದ ಬಳಿಕ ಮಾತನಾಡಿದ ಅವರು, ರಾಜರ ಆಳ್ವಿಕೆ ಅವಧಿಯಲ್ಲಿ ಸ್ಥಾಪಿತವಾದ ಮೈಸೂರು ಮೃಗಾಲಯ ಇಂದು ದೊಡ್ಡಮಟ್ಟದಲ್ಲಿ ವಿಸ್ತಾರಗೊಂಡಿದೆ. ದೇಶ–ವಿದೇಶಗಳ ಪ್ರಾಣಿ–ಪಕ್ಷಿಗಳನ್ನು ತಂದು ಇಲ್ಲೀಗ ರಕ್ಷಣೆ ಮಾಡುತ್ತಿರುವುದು ಮಾತ್ರವಲ್ಲದೆ, ಅವುಗಳ ಸಂತತಿ ವೃದ್ಧಿಯ ಮೂಲಕವೂ ಪ್ರವಾಸಿಗರಿಗೆ ಮುದದ ವಾತಾವರಣ ಕಲ್ಪಿಸುತ್ತಿರುವುದು ಶ್ಲಾಘನೀಯ. ಜಗತ್ತಿನ ಅನೇಕ ಅಪರೂಪದ ಪ್ರಾಣಿಗಳನ್ನು ಈ ಮೃಗಾಲಯದಲ್ಲಿ ಜೋಪಾನವಾಗಿ ರಕ್ಷಣೆ ಮಾಡಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಮೃಗಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರಾಣಿ–ಪಕ್ಷಿಗಳನ್ನು ಮನುಷ್ಯರಂತೆ ಪ್ರೀತಿಯಿಂದ ಕಾಣುವ ಮೂಲಕ ಆರೈಕೆ ಮಾಡುತ್ತಿರುವುದರಿಂದಲೇ ಮೃಗಾಲಯದ ಏಳಿಗೆ ಸಾಧ್ಯವಾಗಿದೆ. ಪ್ರಾಣಿಗಳನ್ನು ಸ್ತ್ರೀ–ಪುರುಷ ವಾಚಕವಾಗಿಯೇ ಕರೆಯುವ ಮೂಲಕ ಪಾಲನೆ ಪೋಷಣೆ ಮಾಡುತ್ತಿರುವುದು ಪ್ರಾಣಿಗಳ ಮೇಲಿನ ಮಮಕಾರ, ಪ್ರೀತಿ ತೋರ್ಪಡಿಸುತ್ತದೆ. ಸಿಬ್ಬಂದಿಯ ಶ್ರಮದಿಂದಾಗಿ ಮೈಸೂರು ಮೃಗಾಲಯದ ಕೀರ್ತಿ ವಿಶ್ವಮಟ್ಟಕ್ಕೆ ಪಸರಿಸುವಂತಾಗಬೇಕು ಎಂದು ಶುಭಕೋರಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಸೌಲಭ್ಯ ಮತ್ತು ಸವಲತ್ತು ಇದೆ. ಸರಕಾರಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣದೊಂದಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲು ಸಾರ್ವಜನಿಕರು ಸೇರಿದಂತೆ ಸಂಘ–ಸಂಸ್ಥೆಗಳು ನೆರವಾಗಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಸುತ್ತೂರು ಶ್ರೀಗಳನ್ನು ಹಲವು ಬಾರಿ ಮೃಗಾಲಯಕ್ಕೆ ದಯಮಾಡಿಸಬೇಕು ಎಂದು ಮನವಿ ಮಾಡಿದ್ದೆ. ಶ್ರೀಗಳು ಮೃಗಾಲಯ ವೀಕ್ಷಣೆಗೆ ಆಗಮಿಸಿರುವುದು ಸಂತಸ ತಂದಿದೆ. ಇದೇ ವೇಳೆ ಜಿರಾಫೆ ಮರಿ ಹಾಕಿರುವುದು ಸಂತಸ ತಂದಿದೆ. ಶ್ರೀಗಳ ಮಾರ್ಗದರ್ಶನದಲ್ಲಿ ಮೈಸೂರು ಮೃಗಾಲಯವನ್ನು ವಿಶ್ವ ಪ್ರಸಿದ್ಧಿಗೊಳಿಸಲು ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸುತ್ತೂರು ಶ್ರೀಗಳು ಇಟ್ಟಿಗೆಗೂಡಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬ್ಯಾಗ್ ಮತ್ತು ಸಮವಸ್ತ್ರ ವಿತರಿಸಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಮಂಜುನಾಥಸ್ವಾಮಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ, ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕ ಅಜಿತ್ ಎಂ. ಕುಲಕರ್ಣಿ, ಪ್ರಾಧಿಕಾರದ ಸದಸ್ಯರಾದ ಜ್ಯೋತಿ ರೇಚಣ್ಣ, ಗೋಕುಲ್ ಗೋವರ್ಧನ್, ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಬಿಇಓ ರಾಮಾರಾಧ್ಯ, ಇಟ್ಟಿಗೆಗೂಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಮಾಲಂಗಿ ಸುರೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೃಗಾಲಯ ವೀಕ್ಷಣೆ: ಬ್ಯಾಟರಿ ಚಾಲಿತ ವಾಹನದಲ್ಲಿ ಮೃಗಾಲಯವನ್ನು ಪ್ರದಕ್ಷಿಣೆ ಹಾಕಿದ ಸುತ್ತೂರು ಶ್ರೀಗಳು, ಕಳೆದ ತಿಂಗಳು ಬಿಳಿ ಹುಲಿಗೆ ಜನಿಸಿದ ಮರಿಗಳು, ಚಿಂಪಾಂಜಿ, ಗೊರಿಲ್ಲಾ, ಹೂಲಾಕ್ ಗಿಬ್ಬನ್ ಸೇರಿದಂತೆ ಹೊಸದಾಗಿ ತಂದಿರುವ ಕೆಲ ಪ್ರಾಣಿಗಳನ್ನು ವೀಕ್ಷಿಸಿದರು. ಈ ವೇಳೆ ಗೊರಿಲ್ಲಾಗೆ ಸೇಬು ತಿನ್ನಿಸಿದರು. ಮೃಗಾಲಯ ಭೇಟಿಯ ನೆನಪಿನಾರ್ಥ ಶ್ರೀಗಳು ಗಿಡ ನೆಟ್ಟರು.

ಎಟಿ ಅಂಡ್ ಎಸ್ ಕಾರ್ಮಿಕರಿಂದ ಪ್ರತಿಭಟನೆ



ಮೈಸೂರು,ಜು.4(ಎಂಟಿವೈ)– ಎಟಿ ಅಂಡ್ ಎಸ್ ಕಾರ್ಖಾನೆ ಆಡಳಿತ ಮಂಡಳಿ ಕಾನೂನುಬಾಹಿರವಾಗಿ ವಜಾಗೊಳಿಸಲಾಗಿರುವ ನೌಕರರನ್ನು ಮರು ನೇಮಕ ಮಾಡಿಕೊಳ್ಳುವಂತೆ ಆಗ್ರಹಿಸಿ 490 ದಿನಗಳಿಂದಲೂ ಪ್ರತಿಭಟನೆ ನಡೆಸುತ್ತಿದ್ದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಧರಣಿಯ 500ನೇ ದಿನವಾದ ಜು.14ರಂದು ಕಾರ್ಖಾನೆ ಮುಂದೆ 'ಜನತಾ ನ್ಯಾಯಾಲಯ'ದ ಹೆಸರಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 12 ವರ್ಷಗಳಿಂದಲೂ ಕಾರ್ಖಾನೆಯಲ್ಲಿ ಯಾವುದೇ ಕನಿಷ್ಠ ವೇತನ ಅಥವಾ ಇತರೆ ಸೌಲಭ್ಯವಿಲ್ಲದೇ ಕಾರ್ಮಿಕರು ದುಡಿಯುತ್ತಿದ್ದಾರೆ. ಇದೇ ವೇಳೆ ಇದನ್ನು ವಿರೋಧಿಸಿದ 72 ಕಾರ್ಮಿಕರನ್ನು ಲಾಕ್‌ಡೌನ್ ದುರುಪಯೋಗಪಡಿಸಿಕೊಂಡು ವಜಾಗೊಳಿಸಲಾಗಿದೆ. ಅಂತಹ ಕಾರ್ಮಿಕರು ಕಾರ್ಖಾನೆ ಎದುರು ಕಳೆದ 490 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೂ ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡಿಲ್ಲ. ಕಾರ್ಖಾನೆ ಆಡಳಿತ ಮಂಡಳಿಯೂ ನ್ಯಾಯ ದೊರಕಿಸಿಕೊಡುತ್ತಿಲ್ಲ. ಹೀಗಾಗಿ ಜು. 14ರಂದು ಕಾರ್ಖಾನೆ ಎದುರು ವಿವಿಧ ಸಂಘಟನೆಗಳ ಜೊತೆಗೂಡಿ ಸುಮಾರು 3000 ಮಂದಿಗೂ ಹೆಚ್ಚು ಜನರು ಸೇರುವಂತೆ ಸಂತ್ರಸ್ತ ಕಾರ್ಮಿಕರು ತಮ್ಮ ಕುಟುಂಬಗಳೊಡನೆ ಜನತಾ ನ್ಯಾಯಾಲಯದೋಪಾದಿ ಪ್ರತಿಭಟನೆ ಹಮ್ಮಿಕೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಉಗ್ರ ನರಸಿಂಹೇಗೌಡ, ಹೊಸಕೋಟೆ ಬಸವರಾಜು, ಉಮೇಶ್, ಆಲಗೂಡು ಶಿವಕುಮಾರ್ ಹಾಗೂ ಸಂತ್ರಸ್ತ ಕಾರ್ಮಿಕರು ಇದ್ದರು.


ಭದ್ರತಾ ಲೋಪ: ಪಿಎಂ ಮೋದಿ ಹೆಲಿಕಾಪ್ಟರ್ ಬಳಿ ಕಾಂಗ್ರೆಸ್ ಕಾರ್ಯಕರ್ತರಿಂದ ಕಪ್ಪು ಬಲೂನ್ ಹಾರಾಟ

ವಿಜಯವಾಡ(ಆಂಧ್ರ): ಆಂಧ್ರಪ್ರದೇಶದಲ್ಲಿ ಪ್ರಧಾನಿ ಮೋದಿ ಪ್ರವಾಸ ವೇಳೆ ಭದ್ರತಾ ಲೋಪವಾಗಿದೆ. ಇಂದು ಪ್ರಧಾನಿ ನರೇಂದ್ರ ಮೋದಿ ಅವರ ಹೆಲಿಕಾಪ್ಟರ್ ಬಳಿ ಪ್ರತಿಭಟನಾಕಾರರು ಭದ್ರತಾ ಲೋಪದಿಂದ ಕಪ್ಪು ಬಲೂನ್‌ಗಳು ಹಾರಾಡಿವೆ. ವಿಜಯವಾಡದಲ್ಲಿ ಪ್ರಧಾನಿ ಮೋದಿಯವರ ಹೆಲಿಕಾಪ್ಟರ್ ಟೇಕಾಫ್ ಆಗುತ್ತಿರುವಾಗ ಕಪ್ಪು ಬಲೂನ್‌ಗಳು ಗಗನದತ್ತ ಮುಖಮಾಡಿ ಹಾರಾಡಿದ್ದವು. ಪ್ರಧಾನಿ ಮೋದಿ ಅವರ ಹೆಲಿಕಾಪ್ಟರ್ ಟೇಕ್ ಆಫ್ ಆದ ವಿಮಾನ ನಿಲ್ದಾಣದಲ್ಲಿ ಕೆಲವು ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸುತ್ತಿದ್ದರು. ಅವರು ಕಪ್ಪು ಬಲೂನ್‌ಗಳು ಮತ್ತು ಫಲಕಗಳನ್ನು ಹಿಡಿದು ಪ್ರಧಾನಿಯನ್ನು ಗುರಿಯಾಗಿಸಿಕೊಂಡು ಘೋಷಣೆಗಳನ್ನು ಕೂಗುತ್ತಿದ್ದರು ಎಂದು ವರದಿಯಾಗಿದೆ.



ಕಾಂಗ್ರೆಸ್ ಪ್ರತಿಭಟನಾಕಾರರು ಕಪ್ಪು ಬಲೂನ್‌ಗಳನ್ನು ಹಾರಿಸಿದ್ದಾರೆನ್ನಲಾಗಿದೆ. ಈ ಸಂಬಂಧ ಕೆಲವರನ್ನು ಪೊಲೀಸರು ಬಂಧಿಸಿದ್ದಾರೆ. ಆಂಧ್ರಪ್ರದೇಶದ ಭೀಮಾವರಂನಲ್ಲಿ ಸೋಮವಾರ ನಡೆದ ಸ್ವಾತಂತ್ರ್ಯ ಹೋರಾಟಗಾರ ಅಲ್ಲೂರಿ ಸೀತಾರಾಮ ರಾಜು ಅವರ 125 ನೇ ಜನ್ಮ ದಿನಾಚರಣೆಯ ವಿಶೇಷ ಕಾರ್ಯಕ್ರಮದಲ್ಲಿ 30 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಪ್ರಧಾನಿ ಮೋದಿ ಅನಾವರಣಗೊಳಿಸಿದರು.

ಮೈಸೂರು ಮೃಗಾಲಯದಲ್ಲಿ ಜಿರಾಫೆ ಮರಿ ಜನನ



ಸಾಂದರ್ಭಿಕ ಚಿತ್ರ

ಮೈಸೂರು,ಜು.4(ಎಂಟಿವೈ)– ಮೈಸೂರು ಮೃಗಾಲಯದಲ್ಲಿ ಮತ್ತೊಂದು ವಿಶೇಷ. ವಿದೇಶದಿಂದ ವಲ್ಲಭಿ, ಹೂಲಾಕ್ ಗಿಬ್ಬನ್ ಸೇರ್ಪಡೆ ಬೆನ್ನ ಹಿಂದೆಯೇ ಜಿರಾಫೆ ಮರಿ ಜನಿಸಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇಂದು ಮೃಗಾಲಯ ವೀಕ್ಷಣೆಗೆ ಬಂದಿದ್ದ ವೇಳೆಯೇ ಬಬ್ಲಿ ಮತ್ತು ಭರತ್ ಜೋಡಿಗೆ 3ನೇ ಹೆಣ್ಣು ಮರಿ ಜನಿಸಿದೆ. ತಾಯಿ ಮತ್ತು ಮರಿ ಆರೋಗ್ಯದಿಂದಿವೆ. ಮುನ್ನೆಚ್ಚರಿಕೆ ದೃಷ್ಟಿಯಿಂದ ಜಿರಾಫೆ ಮನೆ ಸಮೀಪ ಯಾರನ್ನು ಬಿಟ್ಟಿಲ್ಲ.

ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ ಮಾತನಾಡಿ, ಸುತ್ತೂರು ಶ್ರೀಗಳು ಭೇಟಿ ನೀಡಿದ ದಿನವೇ ಜಿರಾಫೆ ಮರಿಗೆ ಜನನ ನೀಡಿರುವುದು ಮೃಗಾಲಯದ ಸೌಭಾಗ್ಯವೆಂದೇ ಭಾವಿಸಿದ್ದೇವೆ. ಈ ಹಿಂದೆ ಸುತ್ತೂರು ಕಿರಿಯ ಸ್ವಾಮೀಜಿ ಭೇಟಿ ನೀಡಿದ್ದಾಗಲೂ ಜಿರಾಫೆ ಮರಿ ಹಾಕಿತ್ತು. ಈಗ ಹಿರಿಯ ಸ್ವಾಮೀಜಿ ಭೇಟಿ ನೀಡಿದ ದಿನವೇ ಬಬ್ಲಿ ಹಾಗೂ ಭರತ್ ಜೋಡಿಗೆ ಹೆಣ್ಣು ಮರಿ ಜನಿಸಿದೆ ಎಂದರು.

ವಿಶ್ವದಲ್ಲೇ ಅಳಿವಿನಂಚಿಗೆ ಸರಿದಿರುವ ಜಿರಾಫೆ ಸಂತತಿ ವೃದ್ಧಿಗಾಗಿ ಶ್ರಮಿಸಲಾಗುತ್ತಿದೆ. ಕೇವಲ 2 ಸಾವಿರಕ್ಕೂ ಕಡಿಮೆ ಸಂಖ್ಯೆಯ ಜಿರಾಫೆಗಳಿರುವುದರಿಂದ ಒಂದೊಂದು ಮರಿ ಜನಿಸಿದರೂ ಅತ್ಯಂತ ಹೆಚ್ಚು ಮಹತ್ವ ಪಡೆದುಕೊಳ್ಳುತ್ತದೆ. ಪ್ರಸ್ತುತ ಮೈಸೂರು ಮೃಗಾಲಯದಲ್ಲಿ 3 ಗಂಡು, 4 ಹೆಣ್ಣು ಸೇರಿದಂತೆ ಒಟ್ಟು 7 ಜಿರಾಫೆಗಳಿವೆ ಎಂದರು.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಮೈಸೂರು, ಜು. 4– ಮೈಸೂರಿನ ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಪ್ರತಿ ಬುಧವಾರದಂದು ಹಿರಿಯ ನಾಗರಿಕರಿಗೆ ಕಣ್ಣಿನ ಉಚಿತ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ಇದರ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.

ವರ್ಷಾಂತ್ಯಕ್ಕೆ ಕೆ.ಆರ್. ಕ್ಷೇತ್ರದ ನಿರ್ವಸತಿಗರಿಗೆಲ್ಲ ಸೂರು

● ಶಾಸಕ ರಾಮದಾಸ್ ಭರವಸೆ ● ಗೊರೂರು, ರಮಾಬಾಯಿನಗರ ಆಶ್ರಯ ಮನೆ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ

ಮೈಸೂರು,ಜು.4(ಎಂಟಿವೈ)– ವರ್ಷಾಂತ್ಯದೊಳಗೆ ಕೆ.ಆರ್.ಕ್ಷೇತ್ರದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವವರಿಗೆ ಸೂರು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ 6 ಸಾವಿರ ಮನೆ ಮಂಜೂರು ಮಾಡಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.


ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೊರೂರು ಭಾಗದ 1ರಿಂದ 8 ಬ್ಲಾಕ್ ಹಾಗೂ ರಮಾಬಾಯಿನಗರ ಆಶ್ರಯ ಮನೆಗಳ ನಿವಾಸಿಗಳಿಗೆ ಹಕ್ಕುಪತ್ರ ಮತ್ತು ಹಕ್ಕು ಖುಲಾಸೆ ಪತ್ರ ವಿತರಿಸಿ ಮಾತನಾಡಿದ ಅವರು, ಮೈಸೂರಿನ ಕೆ.ಆರ್.ಕ್ಷೇತ್ರದ ವಸತಿಹೀನರಿಗೆ 2000–01ನೇ ಸಾಲಿನಲ್ಲಿ ನೀಡಲಾಗಿದ್ದ ಮನೆಯಲ್ಲಿ ಫಲಾನುಭವಿಗಳು ವಾಸಿಸುತ್ತಿದ್ದರೂ ಪೂರ್ಣ ಪ್ರಮಾಣದ ಹಕ್ಕನ್ನು ನೀಡಿರಲಿಲ್ಲ. ಹಕ್ಕುಪತ್ರ ಹಾಗೂ ಹಕ್ಕು ಖುಲಾಸೆ ಪತ್ರದ ನಿರೀಕ್ಷೆಯಲ್ಲಿ ಫಲಾನುಭವಿಗಳು ಇದ್ದರು. ಆದರೆ ಕೆಲ ಕಾರಣಗಳಿಂದ ಪೂರ್ಣ ಪ್ರಮಾಣದ ಹಕ್ಕು ನೀಡಲು ಸಾಧ್ಯವಾಗಿರಲಿಲ್ಲ. ಫಲಾನುಭವಿಗಳ ಒತ್ತಾಯದ ಮೇರೆಗೆ ಈ ಹಿಂದೆ ಇದ್ದ ತೊಡಕನ್ನು ನಿವಾರಿಸಿ, ಇದೀಗ ಹಕ್ಕುಪತ್ರ ಹಾಗೂ ಹಕ್ಕು ಖುಲಾಸೆ ಪತ್ರ ನೀಡಲಾಗುತ್ತಿದೆ. ಗೊರೂರು ಹಾಗೂ ರಮಾಬಾಯಿನಗರದಲ್ಲಿ 3850 ಮಂದಿಗೆ ಮನೆ ನೀಡಲಾಗಿತ್ತು. ಆ ಎಲ್ಲಾ ಫಲಾನುಭವಿಗಳಿಗೂ ಹಂತ ಹಂತವಾಗಿ ಹಕ್ಕುಪತ್ರ ನೀಡಲಾಗುತ್ತದೆ. ಪಾಲಿಕೆಗೆ ಕಟ್ಟಬೇಕಾದ ಹಣ ಮನ್ನಾ ಮಾಡಲಾಗಿದೆ ಎಂದು ತಿಳಿಸಿದರು.

ಮನೆ ನಿರ್ಮಾಣ ಮಾಡಿದ್ದ ಕಾಲಘಟ್ಟದಲ್ಲಿ ಗೊರೂರು ಹಾಗೂ ರಮಾಬಾಯಿನಗರ ಮೈಸೂರಿನ ಮೂಲೆಯಲ್ಲಿದೆ ಎಂಬ ಭಾವನೆ ಫಲಾನುಭವಿಗಳೂ ಸೇರಿದಂತೆ ಎಲ್ಲರಲ್ಲಿತ್ತು. ಆದರೆ, ಈಗ ಆ ಎರಡು ಬಡಾವಣೆ ಮೈಸೂರಿನ ಹೃದಯಭಾಗದಲ್ಲಿರುವಂತೆ ನಗರ ಬೆಳೆದಿದೆ. ಹಕ್ಕುಪತ್ರ ಸಿಕ್ಕಿದೆ ಎಂದು ಮನೆ ಮಾರಿಕೊಳ್ಳಬೇಡಿ. ಮನೆ ಖರೀದಿಗಾಗಿ ಕೆಲವರು ಮುಗಿಬೀಳಬಹುದು. ಆದರೆ, ಯಾವುದೇ ಕಾರಣಕ್ಕೂ ಮನೆ ಮಾರಾಟ ಮಾಡದೆ, ಅದೇ ಮನೆಯಲ್ಲಿ ಸುಖ ಜೀವನ ನಡೆಸಬೇಕು. ಒಂದು ವೇಳೆ ಮನೆ ವಿಸ್ತರಿಸಬೇಕಾದರೆ, ಅಥವಾ ಶೌಚಾಲಯ ನಿರ್ಮಾಣ ಸೇರಿದಂತೆ ಕೆಲವು ಮಾರ್ಪಾಡಾಗಬೇಕಾದರೆ ಕೇಂದ್ರ ಸರ್ಕಾರದ ಯೋಜನೆಗಳಿಂದ ಆರ್ಥಿಕ ನೆರವು ಕೊಡಿಸುವುದಾಗಿ ಭರವಸೆ ನೀಡಿದರು.

ಹೌಸ್ ಫಾರ್ ಆಲ್: ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷ ಸಂದಿದೆ. ದೇಶದೆಲ್ಲೆಡೆ ಆಜಾದಿ ಕಾ ಅಮೃತ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಈ ವರ್ಷದ ಅಂತ್ಯದೊಳಗೆ ಕೆಆರ್.ವಿಧಾನಸಭಾ ಕ್ಷೇತ್ರವನ್ನು ಬಾಡಿಗೆ ಮನೆ ಮುಕ್ತ ಕ್ಷೇತ್ರವನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ನಮ್ಮ ಕ್ಷೇತ್ರದಲ್ಲಿ ಯಾರೆಲ್ಲಾ ಬಾಡಿಗೆ ಮನೆಯಲ್ಲಿದ್ದಾರೋ, ಅವರಿಗೆಲ್ಲಾ ಸ್ವಂತ ಮನೆ ಮಂಜೂರು ಮಾಡಿಕೊಡಲಾಗುತ್ತದೆ. ಈಗಾಗಲೇ 6 ಸಾವಿರ ಮನೆ ಮಂಜೂರಾಗಿದ್ದು, ಅವರಲ್ಲಿ 4300 ಮಂದಿ ಮನೆ ಮಂಜೂರಾಗಿರುವ ಮಂಜೂರಾತಿ ಪತ್ರ ನೀಡಲಾಗುತ್ತಿದೆ. ಒಂದು ವಾರದಿಂದ ಈ ಲೆಟರ್ ಅನ್ನು ಫಲಾನುಭವಿಗಳಿಗೆ ನೀಡುವ ಪ್ರಕ್ರಿಯೆ ಬಿರುಸಿನಿಂದ ಸಾಗಿದೆ. ಅಲ್ಲದೆ, ಫಲಾನುಭವಿಗಳು ಹಣ ಕಟ್ಟಲು ಜೂ.30 ಕೊನೆ ದಿನವಾಗಿತ್ತು. ಅದನ್ನು ಜು.7ರವರೆಗೆ ವಿಸ್ತರಿಸಲಾಗಿದೆ. ಇನ್ನಷ್ಟು ಮಂದಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಅವರಿಗೂ ಮನೆ ನೀಡಲಾಗುತ್ತದೆ. ಅದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹೆಚ್ಚುವರಿಯಾಗಿ 6 ಸಾವಿರ ಮನೆ ಮಂಜೂರು ಮಾಡಿದ್ದಾರೆ ಎಂದು ವಿವರಿಸಿದರು.

ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಮೂರು ವಿಧದ ಮನೆ ನಿರ್ಮಾಣ ಮಾಡಲಾಗುತ್ತಿದೆ. ವಿವಿಧ ಅಳತೆಯ ಮನೆಗಳಿಗೆ 10 ಲಕ್ಷ, 11 ಲಕ್ಷ ಹಾಗೂ 14 ಲಕ್ಷ ರೂ. ನಿಗದಿ ಮಾಡಲಾಗಿದೆ. ಕೇಂದ್ರ ಸರ್ಕಾರ ಫಲಾನುಭವಿಗಳಿಗೆ 2.50 ಲಕ್ಷ ರೂ. ಆರ್ಥಿಕ ನೆರವು ನೀಡುತ್ತದೆ. ಉಳಿದ ಹಣ ಕಟ್ಟಲು ಕೆಲವು ಬ್ಯಾಂಕ್‌ಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಒಪ್ಪಂದಕ್ಕೆ ಸಹಿ ಮಾಡಿರುವ ಬ್ಯಾಂಕ್‌ಗಳು ಸಾಲ ಸೌಲಭ್ಯ ನೀಡಲು ಸಮ್ಮತಿಸಿವೆ. ಬ್ಯಾಂಕ್‌ಗಳು ಶೇ.10ರಷ್ಟು ಬಡ್ಡಿ ದರದಲ್ಲಿ ಸಾಲ ನೀಡಿದರೆ, ಅದರಲ್ಲಿ ಕೇಂದ್ರ ಸರ್ಕಾರವೇ ಶೇ.6 ರಷ್ಟು ಬಡ್ಡಿಯನ್ನು ಫಲಾನುಭವಿಗಳ ಖಾತೆಗೆ ನೀಡುತ್ತದೆ. ಉಳಿದ ಶೇ.4ರಷ್ಟು ಬಡ್ಡಿಯನ್ನು ಮಾತ್ರ ಫಲಾನುಭವಿಗಳು ಕಟ್ಟಬೇಕಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 100 ಮಂದಿಗೆ ಹಕ್ಕು ಪತ್ರ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಫಲಾನುಭವಿಗಳು ತಮಗೆ ಮಂಜೂರಾಗಿರುವ ಮನೆಗಳನ್ನು ಸಂರಕ್ಷಿಸಿಕೊಂಡು ಜೀವನ ಸಾಗಿಸುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಪೌರಕಾರ್ಮಿಕರ ಬೇಡಿಕೆ ಹಂತ ಹಂತವಾಗಿ ಈಡೇರಿಕೆ

ಮೈಸೂರು,ಜು.4(ಎಂಟಿವೈ)– ಪೌರಕಾರ್ಮಿಕರ ಬೇಡಿಕೆ ಈಡೇರಿಕೆಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಪೌರಕಾರ್ಮಿಕರ ಬೇಡಿಕೆಗಳನ್ನು ಒಂದೇ ಬಾರಿ ಬಗೆಹರಿಸುವ ವಿಚಾರವಲ್ಲ. ಹಂತ ಹಂತವಾಗಿ ಬಗೆಹರಿಸಲಾಗುತ್ತದೆ ಎಂದು ಶಾಸಕ ಎಸ್.ಎ.ರಾಮದಾಸ್ ಭರವಸೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿ ಮುಂದೆ ಪೌರಕಾರ್ಮಿಕರು ಕಳೆದ ನಾಲ್ಕು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಸೋಮವಾರ ಬೆಳಗ್ಗೆ ಆಗಮಿಸಿದ ಶಾಸಕ ಎಸ್.ಎ.ರಾಮದಾಸ್ ಪ್ರತಿಭಟನಾನಿರತರಿಂದ ಮನವಿ ಸ್ವೀಕರಿಸಿದರು. ಈ ವೇಳೆ ಮಾತನಾಡಿದ ಅವರು, ಪೌರಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಎಲ್ಲಾ ಬೇಡಿಕೆಗಳನ್ನು ಒಂದೇ ಬಾರಿಗೆ ಈಡೇರಿಸಲು ಕಷ್ಟವಾಗಲಿದೆ. ಹಂತ ಹಂತವಾಗಿ ಈ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳುತ್ತದೆ. ಈ ಬಗ್ಗೆ ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಮಾಹಿತಿ ಸಂಗ್ರಹ ಮಾಡುತ್ತಿದ್ದಾರೆ. ನಾನು ಮುಖ್ಯಮಂತ್ರಿಯೊಂದಿಗೆ ಮಾತನಾಡಿದ್ದೇನೆ. ನೀವು ನಿಮ್ಮ ಹಕ್ಕಿಗಾಗಿ ಪ್ರತಿಭಟನೆ ಮಾಡುತ್ತಿದ್ದೀರಿ. ಅದಕ್ಕೆ ಸಾರ್ವಜನಿಕರ ಸಹಕಾರ ಮುಖ್ಯ. ಸಾರ್ವಜನಿಕರಿಗೂ ತೊಂದರೆಯಾಗದಂತೆ ಕರ್ತವ್ಯಕ್ಕೆ ಹಾಜರಾಗುವಂತೆ ಮನವಿ ಮಾಡಿದರು.

ದಕ್ಷಿಣಕಾಶಿಯಲ್ಲಿ ಗಿರಿಜಾ ಕಲ್ಯಾಣ ವೈಭವ

ದೈವ ದಂಪತಿ ವಿವಾಹ ಕಣ್ತುಂಬಿಕೊಂಡ ಸಹಸ್ರಾರು ಭಕ್ತರು

ನಂಜನಗೂಡು, ಜೂ.4(ಸುದರ್ಶನ್)– ತಳಿರು, ತೋರಣಗಳಿಂದ ಸಿಂಗರಿಸಿದ್ದ ಮಂಗಳ ಮಂಟಪ... ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿದ್ದ ದೇಗುಲದ ಆವರಣ... ಮಂಗಳ ಕಾರ್ಯಕ್ಕೆ ಸಾಕ್ಷಿಯಾಗಿಲು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು... ವರುಣನ ಶುಭ ಸಿಂಚನದ ನಡುವೆ ವರಪೂಜೆ, ಕಾಶಿಯಾತ್ರೆ, ಅರಿಶಿನ ಶಾಸ್ತ್ರ, ಧಾರಾ ಮುಹೂರ್ತ, ಕನ್ಯಾದಾನ...

ಇದು ಸಾಮಾನ್ಯರ ಮದುವೆ ಸಂದರ್ಭವಲ್ಲ. ಜಗದೀಶನ ಸಾನ್ನಿಧ್ಯದ ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರನ ದೇಗುಲದಲ್ಲಿ ವೈಭವದಿಂದ ನಡೆದ ಗಿರಿಜಾ ಕಲ್ಯಾಣ ಮಹೋತ್ಸವದ ದೃಶ್ಯಗಳು.

ಮದುವೆಯ ಕಾಲ ಮುಗಿದು ಆಷಾಢದ ವಿರಾಮ ಆರಂಭವಾದಾಗ ಈ ಭಾಗದ ಭಕ್ತರ ಆರಾಧ್ಯ ದೈವ ಶ್ರೀಕಂಠೇಶ್ವರನಿಗೆ ವಿವಾಹದ ಸಂಭ್ರಮ. ಪ್ರತಿವರ್ಷ ಆಷಾಢ ಮಾಸದಲ್ಲಿ ಪ್ರಾರಂಭವಾಗುವ ಗಿರಿಜಾ ಕಲ್ಯಾಣ, ವಾರ ಕಾಲ ನಡೆಯಲಿದ್ದು, ದೇವ ದಂಪತಿ ವಿವಾಹ ಮಹೋತ್ಸವದಲ್ಲಿ ಸಹಸ್ರಾರು ಭಕ್ತರು ಪಾಲ್ಗೊಂಡು ಭಕ್ತಿ ಪರವಶರಾಗಿ ಪುನೀತರಾಗುತ್ತಾರೆ.

ಗಿರಿಜಾ ಕಲ್ಯಾಣೋತ್ಸವದ ಮೊದಲ ದಿನವಾದ ಭಾನುವಾರ ವರಪೂಜೆ ಕಾರ್ಯಕ್ರಮ ನಡೆಯಿತು. ಪ್ರಾರಂಭದಲ್ಲಿ ಅರಿಶಿನ ಕುಂಕುಮ ಹಾಗೂ ಎಣ್ಣೆಯನ್ನು ಮೆರವಣಿಗೆ ಮಾಡಿ, ಅರಿಶಿನ ಕುಂಕುಮವನ್ನು ರಥ ಬೀದಿಗಳ ಮನೆಯವರಿಗೆ ನೀಡಿ ಸಂಪ್ರದಾಯದಂತೆ ಮದುವೆಗೆ ಆಹ್ವಾನಿಸಲಾಯಿತು. ನಂತರ ವರಪೂಜೆ ಕಾರ್ಯಕ್ರಮ ಧಾರ್ಮಿಕ ವಿಧಿವಿಧಾನದಂತೆ ನಡೆಸಲಾಯಿತು.

ಎರಡನೆ ದಿನವಾದ ಸೋಮವಾರ ಬೆಳಗಿನಿಂದಲೇ ಕಲ್ಯಾಣೋತ್ಸವದ ಅಂಗವಾಗಿ ನಾನಾ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬೆಳಗ್ಗೆ 9 ಗಂಟೆಗೆ ಅನುಜ್ಞಾಪೂರ್ವಕವಾಗಿ ಮೂಲದೇವರ ಪ್ರಾರ್ಥನೆ ನೆರವೇರಿಸಲಾಯಿತು. ಬಳಿಕ ಕನ್ನಡಿ ಕಳಶ ಹೊತ್ತು ಕಪಿಲಾ ಸ್ನಾನಘಟ್ಟದಲ್ಲಿ ಗಂಗೆ ಪೂಜೆ, ಮಂಗಳಸ್ನಾನ ನೆರವೇರಿಸಿ, ನವಗ್ರಹ ಹೋಮ ಸೇರಿದಂತೆ ಸಕಲ ಪೂಜಾ ವಿಧಿ ವಿಧಾನವನ್ನು ಶಾಸ್ತ್ರೋಕ್ತವಾಗಿ ಕೈಗೊಳ್ಳಲಾಯಿತು. ಸಂಜೆ 5 ಗಂಟೆಗೆ ದೇವಾಲಯದಿಂದ ಸಕಲ ಅಲಂಕಾರದೊಂದಿಗೆ ಸ್ವಾಮಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇರಿಸಿ ದೇವಾಲಯದ ಸುತ್ತ ಮೆರವಣಿಗೆ ಮಾಡಿಸಿ ಕಾಶಿಯಾತ್ರೆ ನೆರವೇರಿಸಲಾಯಿತು. ಈ ವೇಳೆ ಜಾನಪದ ಕಲಾ ತಂಡಗಳಾದ ವೀರಗಾಸೆ, ಪೂಜಾ ಕುಣಿತ, ನಂದಿಧ್ವಜ, ಬೀಸು ಕಂಸಾಳೆ ನೃತ್ಯ, ಯಕ್ಷಗಾನ, ತಂಡಗಳು ಮೆರವಣಿಗೆಗೆ ಮೆರಗು ತಂದವು.

ಸಂಜೆ 6 ರಿಂದ 7 ಗಂಟೆಯೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಸಂಬಂಧ ಮಾಲಾ ನಿರೀಕ್ಷಣಾ ಪೂರ್ವಕ ಪೂಜೆ ಬಳಿಕ ಶ್ರೀಕಂಠೇಶ್ವರ ಉತ್ಸವ ಮೂರ್ತಿಯನ್ನು ಕಲ್ಯಾಣ ಮಂಟಪದಲ್ಲಿ ಹಾಗೂ ಪಾರ್ವತಿ ಅಮ್ಮನ ಮೂರ್ತಿಯನ್ನು ವಸಂತ ಮಂಪಟದಲ್ಲಿ ಕೂರಿಸಿ ಧಾರ್ಮಿಕ ಕೈಂಕರ್ಯ ನೆರವೇರಿಸಲಾಯಿತು. ಬಳಿಕ ಕಲ್ಯಾಣ ಮಂಟಪಕ್ಕೆ ಅಮ್ಮನವರ ಮೂರ್ತಿಯನ್ನು ಬರಮಾಡಿಕೊಳ್ಳಲಾಯಿತು. ನಂತರ ಧಾರಾ ಮಹೋತ್ಸವದೊಂದಿಗೆ ವಿಶಕಂಠನಿಂದ ಪಾವರ್ತಿ ಅಮ್ಮನವರಿಗೆ ಮಾಂಗಲ್ಯಧಾರಣೆ ನೆರವೇರಿಸಿ, ಧಾರೆ ಎರೆದು ಕನ್ಯಾದಾನ ಮಾಡಲಾಯಿತು. ನಂತರ ದೇವ ದಂಪತಿಗಳನ್ನು ಹಸೆಮಣೆಗೇರಿಸಲಾಯಿತು. ಈ ಎಲ್ಲಾ ಕಾರ್ಯಗಳು ಅರ್ಚಕ ನಾಗಚಂದ್ರ ದೀಕ್ಷಿತ್‌ರ ನೇತೃತ್ವದಲ್ಲಿ ನಡೆಸಲಾಯಿತು.

ನಂತರ ಮುತ್ತೈದೆಯರು, ಅತಿಥಿಗಳಿಗೆ ಗೌರವಪೂರ್ವಕವಾಗಿ ಬಾಗಿನ ನೀಡುವ ಪದ್ಧತಿ ನಡೆದುಕೊಂಡು ಬಂದಿದ್ದು ಅಕ್ಕಿ, ತೆಂಗಿನಕಾಯಿ, ಬೇಳೆ, ಬೆಲ್ಲ, ಅರಿಶಿನ, ಕುಂಕುಮ ಹಾಗೂ ಬಳೆಯೊಂದಿಗೆ ಬಾಗಿನ ನೀಡಲಾಯಿತು. ಈ ಮಂಗಳಕರ ಸೌಭಾಗ್ಯ ಕಣ್ತುಂಬಿಕೊಳ್ಳಲೆಂದೇ ಸಾವಿರಾರು ಭಕ್ತರು ನೆರದಿದ್ದರಲ್ಲದೆ, ತಮ್ಮ ಬೇಡಿಕೆ ಈಡೇರಿಸುವಂತೆ ಹರಕೆ ಕಟ್ಟಿಕೊಂಡು ಭಕ್ತಿ ಸಮರ್ಪಿಸಿದರು. ಕಲ್ಯಾಣ ಮಹೋತ್ಸವದ ಸೇವಾರ್ಥದಾರರಿಂದ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.



ಶ್ರೀಕಂಠೇಶ್ವರ ದೇವಾಲಯದಲ್ಲಿ ಈ 2 ದಿನಗಳ ಕಾಲ ಮಾತ್ರ ಗಿರಿಜಾ ಶಂಕರರನ್ನು ಬೇರ್ಪಡಿಸಲಾಗುತ್ತದೆ. ಧಾರೆಯೊಂದಿಗೆ ಮತ್ತೆ ಒಂದಾಗುವ ಶ್ರೀಕಂಠೇಶ್ವರ ದಂಪತಿಗೆ ಮೂರನೆಯ ದಿನ ಉರುಟಣೆ, ಉಯ್ಯಾಲೋತ್ಸವಗಳನ್ನು ನಡೆಸಿದರೆ, ನಾಲ್ಕನೆಯ ದಿನ ಪಾಕಿನಿ ಉತ್ಸವ ನಡೆಸಲಾಗುತ್ತದೆ. ಐದನೆಯ ದಿನ ನಾಗಬಲಿ, ಶೇಷಹೋಮ, ಆರನೆಯ ದಿನ ವಿವಾಹ ಮಂಟಪದ ಕಂಬಗಳಿಗೆ ಪೂಜೆ ನೆರವೇರಿಸಿ ತೆಪ್ಪೋತ್ಸವ ಹಾಗೂ ಓಕಳಿ ಉತ್ಸವ ನಡೆಸಲಾಗುತ್ತದೆ. ಏಳನೇ ದಿನ ಮತ್ತೆ ತೆಪ್ಪೋತ್ಸವದೊಂದಿಗೆ ಶ್ರೀಯವರ ಶಯನೋತ್ಸವದೊಂದಿಗೆ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ತೆರೆ ಬೀಳಲಿದೆ. ಸಂಪ್ರದಾಯ ಹಾಗೂ ಧಾರ್ಮಿಕ ಕ್ರಿಯೆಯಿಂದ ಕೂಡಿದ ವಿವಾಹವನ್ನು ಮರೆತುಹೋಗುತ್ತಿರುವ ಈ ಕಾಲ ಘಟ್ಟದಲ್ಲಿ ನಂಜನಗೂಡಿನ ಗಿರಿಜಾ ಕಲ್ಯಾಣ ಮಹೋತ್ಸವ ಜನರಿಗೆ ಸಂಪ್ರದಾಯದ ನೆನೆಪು ತಂದು ಕೊಡುತ್ತದೆ.

ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ



ಹೆಚ್.ಡಿ.ಕೋಟೆ, ಜು.4(ಮಂಜು)– ತಾಲೂಕಿನ ಮಾದಾಪುರ ವ್ಯವಸಾಯ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಚಿಕ್ಕಕೆರೆಯೂರು ಕೆ.ಮಹೇಶ್ ಅವರು ಮೈಸೂರಿನ ಎಂಸಿಡಿಸಿಸಿ ಬ್ಯಾಂಕ್ ಕೇಂದ್ರ ಕಚೇರಿಯಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡರನ್ನು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹರೀಶ್‌ಗೌಡರು, ಮಾದಾಪುರ ವ್ಯವಸಾಯ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಮಹೇಶ್ ಆಯ್ಕೆಯಾಗಿದ್ದು, ವ್ಯವಸಾಯ ಸೇವಾ ಸಹಕಾರ ಸಂಘವನ್ನು ಉತ್ತಮ ರೀತಿಯಲ್ಲಿ ಬೆಳೆಸಲು ಶ್ರಮಿಸಬೇಕು. ಮುಂದಿನ ದಿನಗಳಲ್ಲಿ ರೈತರಿಗೆ ಟ್ರಾಕ್ಟರ್, ಬೆಳೆಸಾಲ, ಐಪಿ ಸಾಲ ಕೊಡಿಸುವುದಾಗಿ ಇದೇ ವೇಳೆ ಭರವಸೆ ನೀಡಿದರು. ಈ ಸಂದರ್ಭ ವೈಮಲ್ ನಿರ್ದೇಶಕ ಹಿರೇಗೌಡ, ಕೆ.ಬಿ.ಸುಪ್ರೀತ್ ಸೇರಿದಂತೆ ಇನ್ನಿತರರಿದ್ದರು.



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಶಾಸಕ ಸಾ.ರಾ. ಮಹೇಶ್ ಪತ್ನಿ ಅನಿತಾ ಮಹೇಶ್ ಅವರನ್ನು ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ ಅಭಿನಂದಿಸಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಮು.ರಾ.ಹರ್ಷ ಕುಮಾರಗೌಡ, ಮುದುಗುಪ್ಪೆ ಮಂಜೇಗೌಡ, ವಡ್ಡರಕೊಪ್ಪಲು ಶ್ರೀಧರ್, ಸಾಲಿಗ್ರಾಮ ಎಸ್.ಎಸ್. ಮಂಜುನಾಥ್, ಎಸ್.ಎಲ್.ಮಂಜಣ್ಣ, ಹೊಳೆತಂದ್ರೆ ಮಂಜು ಇತರರಿದ್ದರು.

ಪೌರ ಕಾರ್ಮಿಕರಿಂದ ಅರೆಬೆತ್ತಲೆ ಪ್ರತಿಭಟನೆ



ಹುಣಸೂರು, ಜು.4(ಕೆಕೆ)– ಸೇವೆ ಖಾಯಂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪೌರ ಕಾರ್ಮಿಕರು ನಡೆಸುತ್ತಿರುವ ಪ್ರತಿಭಟನೆ 4ನೇ ದಿನಕ್ಕೆ ಕಾಲಿಟ್ಟಿದ್ದು, ಸೋಮವಾರ ಪೌರ ಕಾರ್ಮಿಕರು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ದಸಂಸ ರಾಜ್ಯ ಸಂಚಾಲಕ ಹರಿಹರ ಆನಂದಸ್ವಾಮಿ ಮತ್ತು ತಾಲೂಕು ಸಂಚಾಲಕ ಕೊಳಘಟ್ಟ ಕೃಷ್ಣ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿ ಮಾತನಾಡಿ, ಪೌರ ಕಾರ್ಮಿಕರ ಕೆಲಸಕ್ಕೆ ಸರ್ಕಾರ ಬೆಲೆ ಕಟ್ಟಲು ಸಾಧ್ಯವಿಲ್ಲ. ಸರ್ಕಾರ ಅವರ ಕೆಲಸ ಗೌರವಿಸುವ ಮೂಲಕ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪೌರ ಕಾರ್ಮಿಕರ ಮುಷ್ಕರದಿಂದಾಗಿ ನಗರ ಸಭಾ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಕಸ ವಿಲೇವಾರಿಯಾಗಿಲ್ಲ. ತುಂತುರು ಮಳೆ ಬೀಳುತ್ತಿರುವುದರಿಂದ ರಸ್ತೆಯಲ್ಲಿ ಬಿದ್ದಿರುವ ಕಸ ಕೊಳೆತು ಗಬ್ಬು ನರುತ್ತಿದೆ. ಒಳಚರಂಡಿ ಕಟ್ಟಿಕೊಂಡು ರಸ್ತೆ ಮೇಲೆ ನೀರು ಹರಿಯುತ್ತಿದೆ. ಹೀಗಾಗಿ ಸರ್ಕಾರ ಪೌರ ಕಾರ್ಮಿಕರ ಬೇಡಿಕೆ ಈಡೇರಿಸಬೇಕು ಎಂದರು. ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ನಮ್ಮ ನಾಯಕರು ಸರ್ಕಾರದ ಜೊತೆ ಮಾತುಕತೆ ನಡೆಸಲು ತೆರಳಿದ್ದಾರೆ. ಸರ್ಕಾರ ನಮ್ಮ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೇ ನಮ್ಮ ಮುಷ್ಕರ ನಿಲ್ಲುವುದಿಲ್ಲ. ಮುಂದಿನ ದಿನಗಳಲ್ಲಿ ಖಾಯಂ ನೌಕರರು ನಮ್ಮನ್ನು ಬೆಂಬಲಿಸುವ ಜೊತೆಗೆ ನಮ್ಮೊಂದಿಗೆ ಸೇರಲಿದ್ದಾರೆ ಎಂದರು.

ಹುಣಸೂರು ಜಾಗೃತಿ ಕ್ಲಬ್ ಬೆಂಬಲ: ಪೌರ ಕಾರ್ಮಿಕರ ಧರಣಿ ಬೆಂಬಲಿಸಿದ ಹುಣಸೂರು ಜಾಗೃತಿ ಕ್ಲಬ್ ಸದಸ್ಯರು, ಸರ್ಕಾರ ಪೌರ ಕಾರ್ಮಿಕರ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಕ್ಲಬ್ ಸದಸ್ಯ ಹಾಗೂ ಅಮ್ಮನ ಕೈ ರುಚಿ ಹೋಟೆಲ್ ಮಾಲೀಕ ಸಮರ್ಥ್ ಪೌರ ಕಾರ್ಮಿಕರಿಗೆ ಬೆಳಗಿನ ಉಪಾಹಾರ ವಿತರಿಸಿದರು.

ಈ ವೇಳೆ ಜಾಗೃತಿ ಕ್ಲಬ್ ಅಧ್ಯಕ್ಷ ಹೆಚ್.ವೈ.ಕೃಷ್ಣ, ಗೌರವಾಧ್ಯಕ್ಷ ಚನ್ನವೀರಯ್ಯ, ಸದಸ್ಯರಾದ ಯೋಗಾನಂದ್, ಜೇಕಬ್, ಪಾಂಡು, ಯೋಗಿ, ಮಂಜು, ಗಜೇಂದ್ರ ನಾಗರಾಜ್, ನಾಗೇಂದ್ರ, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಮುರುಗೇಶ್, ಶಿವಸ್ವಾಮಿ, ನಗರಸಭೆ ಮಾಜಿ ಅಧ್ಯಕ್ಷ ಕೆ.ಲಕ್ಷ್ಮಣ್, ಮಾದೇಶ್, ಪುರಸಭೆ ಮಾಜಿ ಅಧ್ಯಕ್ಷ ಕಣ್ಣಯ್ಯ, ಸುರೇಶ್ ಕುಮಾರ್, ನಗರಸಭೆ ಉಪಾಧ್ಯಕ್ಷ ರಮೇಶ್, ಕಾರ್ಯದರ್ಶಿ ದಿನೇಶ್ ಇತರರಿದ್ದರು.

ಕಾಂಗ್ರೆಸ್‌ಗೆ ಬರುವವರನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸೋಣ

ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್



ತಿ.ನರಸೀಪುರ ಜು.4(ಎಸ್‌ಕೆ)– ಪಕ್ಷ ಸಂಘಟನೆ ದೃಷ್ಟಿಯಿಂದ ಕಾಂಗ್ರೆಸ್‌ಗೆ ಬರುವವರನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸೋಣ. ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸುವುದು ಬೇಡ ಎಂದು ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡ ಕುರುಬ ಸಮುದಾಯದ ಪ್ರಭಾವಿ ನಾಯಕ ಗೋಪಿ ಬೋರೇಗೌಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಗ್ರಾಮದ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿದ ಕೀರ್ತಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಲ್ಲುತ್ತದೆ. ಅವರ ಅಧಿಕಾರವಧಿಯಲ್ಲಿ ನಾಲೆಗಳ ಆಧುನೀಕರಣ, ಕೆರೆಗಳ ಜೀರ್ಣೋದ್ಧಾರ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾರ್ಯಗಳು ನಡೆದವು. ಆದರೆ ಕಾಂಗ್ರೆಸ್ ಅವಧಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಆ ಕಡೆಯಿಂದ ಈ ಕಡೆಗೆ. ಈ ರಸ್ತೆಯಿಂದ ಆ ರಸ್ತೆಗೆ ಹಾಕಿಸಿದ್ದೇ ಹಾಲಿ ಶಾಸಕರ ಸಾಧನೆ ಎಂದು ಅವರ ಹೆಸರೇಳದೆ ವಾಗ್ದಾಳಿ ನಡೆಸಿದರು.

ಸಾಮಾಜಿಕ ಬದ್ಧತೆಯಿಂದ ಅಭಿವೃದ್ಧಿಗಾಗಿ ದುಡಿಯುವವರನ್ನು ಸೋಲಿಸಿದರೆ ಕೇವಲ ಪಕ್ಷದ ಕಾರ್ಯಕರ್ತರಿಗಷ್ಟೇ ಅಲ್ಲ. ಕ್ಷೇತ್ರದ ಮತದಾರರಿಗೂ ನಷ್ಟವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ನಾಗರತ್ನ ಮಾದೇಶ್, ಮಂಜು ಬಾದಾಮಿ, ಚಿಕ್ಕ ಯಜಮಾನ ರಾಜು, ಶಾಮಿಯಾನ ನಾಗೇಶ, ಅನೂಪ್, ನಾಗರಾಜು, ಗುರುಮಲ್ಲಪ್ಪ, ಮಹೇಶ್, ಸಾಗರ್, ಉಮೇಶ್, ಮಹೇಶ್, ಮಧು, ಮಹದೇವಸ್ವಾಮಿ, ಶಶಿ, ಮದನ್, ಗಿರಿ, ಅಂದಾನಿಗೌಡ, ಮೊಟ್ಟೆ ಮಹೇಶ, ಸಂತೋಷ್, ಸಿದ್ದರಾಜು, ಭೈರೇಗೌಡ, ಜೈ ಶಂಕರ್, ಯಶ್ವಂತ್, ಪ್ರಜ್ವಲ್, ಜಯಂತ್, ಅಜಯ್ ಇನ್ನಿತರರಿದ್ದರು.

ಬಿ.ಪಿ.ಶಿವಶಂಕರ್ ಬಿಳಿಕೆರೆ ಗ್ರಾಪಂ ಅಧ್ಯಕ್ಷ

ಹುಣಸೂರು, ಜು.4– ತಾಲೂಕಿನ ಬಿಳಿಕೆರೆ ಗ್ರಾಪಂ ನೂತನ ಅಧ್ಯಕ್ಷರಾಗಿ ಬಿ.ಪಿ.ಶಿವಶಂಕರ್ ಆಯ್ಕೆಯಾಗಿದ್ದಾರೆ.

ಬಿಳಿಕೆರೆ ಗ್ರಾಪಂ ಒಟ್ಟು 17 ಸದಸ್ಯ ಬಲ ಹೊಂದಿದ್ದು, ಆಂತರಿಕ ಒಪ್ಪಂದದ ಹಿನ್ನಲೆಯಲ್ಲಿ ಈ ಹಿಂದಿನ ಅಧ್ಯಕ್ಷ ಬಿ.ಎಂ. ಶಬರೀಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬಿ.ಪಿ.ಶಿವಶಂಕರ್ ಹಾಗೂ ರೇವಣ್ಣ ನಾಮಪತ್ರ ಸಲ್ಲಿಸಿದ್ದರು. ಸೋಮವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ 11 ಮತ ಪಡೆದ ಬಿ.ಪಿ.ಶಿವಶಂಕರ್ ಅಧ್ಯಕ್ಷರಾಗಿ ಆಯ್ಕೆಯಾದರೇ, 6 ಮತ ಪಡೆದ ರೇವಣ್ಣ ಪರಾಭವಗೊಂಡರು. ಈ ವೇಳೆ ಚುನಾವಣಾಧಿಕಾರಿ ಪರಿಶಿಷ್ಟ ಪಂಗಡ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜು ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸುತ್ತಿದ್ದಂತೆ ಶಿವಶಂಕರ್ ಬೆಂಬಲಿಗರು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನೂತನ ಅಧ್ಯಕ್ಷ ಶಿವಶಂಕರ್ ಮಾತನಾಡಿ, ಗ್ರಾಪಂ ವ್ಯಾಪ್ತಿಯಲ್ಲಿ ಬೀದಿದೀಪ, ನೀರು, ಸ್ವಚ್ಛತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸುತ್ತೇನೆ. ಅಲ್ಲದೇ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಸರ್ಕಾರದಿಂದ ಸಿಗುವ ಎಲ್ಲಾ ರೀತಿಯ ಸವಲತ್ತುಗಳನ್ನು ತರಲು ಕ್ರಮ ವಹಿಸುತ್ತೇನೆ. ಅಲ್ಲದೇ ಗ್ರಾಪಂನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಮಂಚಮ್ಮ, ಸದಸ್ಯರಾದ ಶಬರೀಶ್, ಯೋಗೇಶ್, ಮಹೇಶ್, ಶ್ವೇತಾ, ಜ್ಯೋತಿ, ಶಿಲ್ಪ, ಮಂಗಳಮ್ಮ, ಮಂಜು ಶ್ರೀಕಂಠಮೂರ್ತಿ, ಮುಖಂಡರಾದ ಗೌರಿಶಂಕರ್, ಶೇಖರೇಗೌಡ, ರಾಜಣ್ಣ, ಬಾಲು, ಮನು, ಮನುಗನಹಳ್ಳಿ ಗ್ರಾಪಂ ಅಧ್ಯಕ್ಷ ಚಂದ್ರು, ಮಿಲ್ಟ್ರಿಮೋಹನ್, ಗ್ರಾಮದ ಮುಖಂಡರು ಹಾಜರಿದ್ದರು.





ಮೂಗೂರು ಸಮೀಪದ ಕೊತ್ತೇಗಾಲ ಗ್ರಾಮದಲ್ಲಿ ನೂತನ ಗ್ರಾಪಂ ಕಚೇರಿ ಕಟ್ಟಡ ಕಾಮಗಾರಿಗೆ ಶಾಸಕ ಎಂ.ಅಶ್ವಿನ್‌ಕುಮಾರ್ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಮರಿಸ್ವಾಮಿ, ಉಪಾಧ್ಯಕ್ಷೆ ಮೀನಾಕ್ಷಿ ಪ್ರಕಾಶ್ ಮೂರ್ತಿ, ಇಓ ಕೃಷ್ಣ, ಮಾಜಿ ಅಧ್ಯಕ್ಷ ಕೆ.ಜಿ.ವೀರೇಶ್, ಪಿಡಿಓ ನಾಗರಾಜು, ಕಾರ್ಯದರ್ಶಿ ರವಿ, ಮುಖಂಡರಾದ ಮಹೇಶ್, ವಿಶ್ವನಾಥ್, ಚಿಕ್ಕಸ್ವಾಮಿ, ಶಿವಕುಮಾರ್, ಮಹದೇವ್, ಲಕ್ಷ್ಮಣ್, ಜಗಪತಿ, ಮಣಿಕಂಠ, ಗ್ರಾಪಂ ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು.

ಸಾರ್ವಜನಿಕರು ಸ್ವಚ್ಛತೆಗೆ ಆದ್ಯತೆ ನೀಡಿ: ಲತಾ ಬಸಪ್ಪ ಮನವಿ

ಸಿಂಧುವಳ್ಳಿ, ಜು.4(ಮೋಹನ್)– ಸಾರ್ವಜನಿಕರು ಸುತ್ತಮುತ್ತಲ ಪರಿಸರದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯದೆ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಸಿಂಧುವಳ್ಳಿ ಗ್ರಾಪಂ ಅಧ್ಯಕ್ಷೆ ಲತಾ ಬಸಪ್ಪ ಮನವಿ ಮಾಡಿದರು.

ಸಿಂಧುವಳ್ಳಿ ಗ್ರಾಪಂ ವ್ಯಾಪ್ತಿಯ ಕುರಹಟ್ಟಿ ಗ್ರಾಮದಲ್ಲಿ ಗ್ರಾಪಂ ವತಿಯಿಂದ ಉಚಿತವಾಗಿ ಕಸದ ಬುಟ್ಟಿ ವಿತರಿಸಿ ಮಾತನಾಡಿದ ಅವರು, ಗ್ರಾಮಸ್ಥರು ನಿಮ್ಮ ಮನೆಯ ಕಸವನ್ನು ಒಣಕಸ ಹಸಿ ಕಸಗಳನ್ನಾಗಿ ಬೇರ್ಪಡಿಸಿ. ಹಸಿ ಕಸವನ್ನು ತಿಪ್ಪೆ ಅಥವಾ ಸಸಿಗಳಿಗೆ ಹಾಕಿ. ಒಣ ಕಸವನ್ನು ಗ್ರಾಪಂ ಕಸ ಸಂಗ್ರಹಣಾ ವಾಹನಕ್ಕೆ ನೀಡಿ. ಇದರಿಂದ ಗ್ರಾಮೀಣ ಭಾಗದಲ್ಲಿ ಸ್ವಚ್ಛ ಪರಿಸರ ನಿರ್ಮಾಣವಾಗುತ್ತದೆ ಎಂದರು.

ಪಿಡಿಓ ಶಬಾನಾ ಮಾತನಾಡಿ, ಗ್ರಾಮೀಣ ಜನರು ಬಯಲು ಶೌಚ ತ್ಯಜಿಸಬೇಕು. ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡು ಬಳಸುವ ಮೂಲಕ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಎಲ್ಲೆಂದರಲ್ಲಿ ಕಸ ಬಿಸಾಡದೆ ಗ್ರಾಪಂಗೆ ಸಹಕಾರ ನೀಡಿ ಸ್ವಚ್ಛತೆ ಕಾಪಾಡಿ ಎಂದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಸುಮ ರಂಗಸ್ವಾಮಿ, ಸದಸ್ಯರಾದ ಶಾಂತ ಮಲ್ಲಪ್ಪ, ನಾಗಮ್ಮ, ಗಣೇಶ ನಾಯಕ, ಗ್ರಾಪಂ ಕಾರ್ಯದರ್ಶಿ ಸಿದ್ದಪ್ಪಾಜಿ, ಕೆ.ಎಸ್. ಮಹೇಶ್ ಹಾಗೂ ಮುಖಂಡರಿದ್ದರು.



ರಾಮಕೃಷ್ಣ ಹೆಗಡೆ ಸರ್ಕಾರದ ಮಾದರಿ ಆಡಳಿತ ನೀಡಲು ಪಕ್ಷಕ್ಕೆ ಮರುಚಾಲನೆ

ಲೋಕಶಕ್ತಿ ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್

ತಿ.ನರಸೀಪುರ ಜು.4(ಎಸ್‌ಕೆ)– ರಾಜ್ಯದಲ್ಲಿ ಅಧಿಕಾರ ವಿಕೇಂದ್ರಿಕರಣದ ಮೂಲಕ ಮಹಿಳೆಯರಿಗೆ ಶೇ.25ರಷ್ಟು ಮೀಸಲಾತಿ ನೀಡಿ ಜನೋಪಯೋಗಿ ಆಡಳಿತ ನಡೆಸಿದ ರಾಮಕೃಷ್ಣ ಹೆಗಡೆ ಸರ್ಕಾರದ ಮಾದರಿ ಆಡಳಿತವನ್ನು ರಾಜ್ಯದಲ್ಲಿ ಮತ್ತೆ ನೀಡಬೇಕೆಂಬ ಉದ್ದೇಶದೊಂದಿಗೆ ಪಕ್ಷಕ್ಕೆ ಮರುಚಾಲನೆ ನೀಡಲಾಗಿದೆ ಎಂದು ಲೋಕಶಕ್ತಿ ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್ ತಿಳಿಸಿದರು.

ಪಟ್ಟಣದ ವಿನಾಯಕ ಕಾಲೋನಿಯ ಭೈರವ ಕಾಂಪ್ಲೆಕ್ಸ್‌ನಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡ ಮಹಿಳೆಯರನ್ನು ಸ್ವಾಗತಿಸಿ ಮಾತನಾಡಿದ ಅವರು, ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ವೇಳೆ ಅಧಿಕಾರ ವಿಕೇಂದ್ರಿಕರಣದ ಮೂಲಕ ಜಾರಿಗೆ ತಂದ ಶೇ.25 ರಷ್ಟು ಮೀಸಲಾತಿಯಿಂದ ಇಂದು ಮಹಿಳೆಯರು ರಾಜಕಾರಣದಲ್ಲಿ ಉನ್ನತ ಸ್ಥಾನ ಪಡೆಯಲು ಸಾಧ್ಯವಾಗಿದೆ. ಹೆರಿಗೆ ಭತ್ಯೆ, ವಿಧವಾ ವೇತನ ಸೇರಿದಂತೆ ಮಹಿಳೆಯರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಅವರ ಆಡಳಿತಾವಧಿಯಲ್ಲೇ ಜಾರಿಗೆ ತಂದು ಜನಪ್ರಿಯತೆಗಳಿಸಿದ್ದರು. ಹಾಗಾಗಿ ನಿಷ್ಕ್ರಿಯವಾಗಿದ್ದ ಪಕ್ಷಕ್ಕೆ ಮತ್ತೆ ಮರು ಚಾಲನೆ ನೀಡಿ ಹೆಗಡೆಯವರ ಮಾದರಿ ಆಡಳಿತ ನೀಡಬೇಕೆಂಬ ಉದ್ದೇಶ ಹೊಂದಲಾಗಿದೆ. ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಪಕ್ಷಕ್ಕೆ ಅಭೂತಪೂರ್ವ ಬೆಂಬಲ ದೊರಕಿದ್ದು, ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲೂ ಪಕ್ಷವನ್ನು ಸದೃಢಗೊಳಿಸಲು ಕಾರ್ಯತಂತ್ರ ರೂಪಿಸಲಿದ್ದೇವೆ ಎಂದರು.

ಅವಕಾಶ ವಂಚಿತರು, ದಮನಿತ ವರ್ಗಕ್ಕೆ ಸೇರಿದವರನ್ನೆಲ್ಲಾ ಒಂದೇ ವೇದಿಕೆ ತಂದು ಸರ್ಕಾರ ಮತ್ತು ಸಂವಿಧಾನ ಕೊಟ್ಟಿರುವ ಪ್ರಮುಖ ಸವಲತ್ತು ಗಳನ್ನು ತಲುಪಿಸಲು ಲೋಕ್ ಶಕ್ತಿ ಪಕ್ಷ ಪ್ರಾಮಾಣಿಕ ಪ್ರಯತ್ನ ಮಾಡಲಿದೆ. ಮೌಲ್ಯಾಧಾರಿತ ರಾಜಕಾರಣಿ ರಾಮಕೃಷ್ಣ ಹೆಗಡೆಯವರ ಪಕ್ಷವನ್ನು ಮುಂಚೂಣಿಗೆ ತಂದು ರಾಜ್ಯದಲ್ಲಿ ಮತ್ತೆ ಸುಭೀಕ್ಷ ಸರ್ಕಾರ ನೀಡುವ ಮಹದಾಸೆ ಹೊಂದಿರುವ ಪಕ್ಷವನ್ನು ಸಾರ್ವಜನಿಕರು ಬೆಂಬಲಿಸಿ ಆಶೀರ್ವಾದ ಮಾಡುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸತೀಶ್ ಗೋವಿಂದಪ್ಪ, ಕಾರ್ಯಾಧ್ಯಕ್ಷ ಶಿವಕುಮಾರ್, ಹಿಂದುಳಿದ ವರ್ಗಗಳ ಅಧ್ಯಕ್ಷ ಎ.ಸಿ. ಪೂರ್ಣಚಂದ್ರ, ಪ.ವರ್ಗಗಳ ಘಟಕದ ಅಧ್ಯಕ್ಷ ಮಾದೇಶ್, ಜಿಲ್ಲಾ ಮಹಿಳಾ ಅಧ್ಯಕ್ಷೆ ಮೀನಾಕ್ಷಿ, ದ್ವಾರಕಾನಾಥ್ (ಕಲ್ಲಿ), ಮಂಜುನಾಥ್, ಮಂಗಳಮ್ಮ, ಜಯಮ್ಮ, ಭಾಗ್ಯಮ್ಮ, ಲಕ್ಷ್ಮಿ, ಚೈತ್ರಾ ಮತ್ತಿತರರಿದ್ದರು.



> ಪ್ರಸಕ್ತ ರಾಜ್ಯದ ರಾಜಕಾರಣ ಕಲುಷಿತಗೊಂಡಿದ್ದು, ಗ್ರಾಪಂನಲ್ಲಿ ನಡೆಯುವ ಭ್ರಷ್ಟಾಚಾರದಿಂದಾಗಿ ಸುಭೀಕ್ಷವಾಗಿರಬೇಕಾದ ಗ್ರಾಮಗಳು ಸುರಕ್ಷಿತವಾಗಿಲ್ಲ. ಇದಕ್ಕೆ ರಾಜಕಾರಣಿಗಳ ಇಚ್ಛಾಶಕ್ತಿ ಕೊರತೆಯೇ ಕಾರಣ. ಚುನಾವಣೆ ವೇಳೆ ವಿವಿಧ ಯೋಜನೆಗಳ ಜಾರಿ ಬಗ್ಗೆ ಆಶ್ವಾಸನೆ ನೀಡುವ ರಾಜಕೀಯ ಪಕ್ಷಗಳು ತದ ನಂತರ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗುತ್ತಿಲ್ಲ. ಹಾಗಾಗಿ ರಾಜ್ಯದಲ್ಲಿ ಆಡಳಿತ ಸುಭೀಕ್ಷವಾಗಿಲ್ಲ.
>
> **– ಚಂದ್ರಶೇಖರ ವಿ.ಸ್ಥಾವರಮಠ್,**
> *ಲೋಕಶಕ್ತಿ ಪಕ್ಷದ ರಾಜ್ಯಾಧ್ಯಕ್ಷ.*

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**777 ಚಾರ್ಲಿ (ಕ):** ಬೆ.10ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, **ಮಿನಿಯನ್ಸ್: ದಿ ರೈಸ್ ಆಫ್ ಗ್ರೂ (3ಡಿ)(ಇಂ):** ಮ.1.15ಕ್ಕೆ, ಮ.3.10ಕ್ಕೆ, ಸಂ.5.05ಕ್ಕೆ.
ಸ್ಕ್ರೀನ್ 2	**ತ್ರಿವಿಕ್ರಮ (ಕ):** ಬೆ.10.10ಕ್ಕೆ, **ಯಾನೈ (ತ):** ಮ.1.05ಕ್ಕೆ, **ಬೈರಾಗಿ (ಕ):** ಸಂ.4.15ಕ್ಕೆ, **ಪಕ್ಕ ಕಮರ್ಷಿಯಲ್ (ತೆ):** ರಾ.7.10ಕ್ಕೆ, **ರಾಷ್ಟ್ರ ಕವಚ್ ಓಂ (ಹಿಂ):** ರಾ.10.05ಕ್ಕೆ.
ಸ್ಕ್ರೀನ್ 3	**ಹರಿಕಥೆ ಅಲ್ಲ ಗಿರಿಕಥೆ (ಕ):** ಬೆ.10.45ಕ್ಕೆ, **ರಾಕೆಟ್ರಿ (ತ):** ಮ.1.20ಕ್ಕೆ, ರಾ.7.05ಕ್ಕೆ, **ವಿಂಡೋಸೀಟ್ (ಕ):** ಸಂ.4.20ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 4	**ಬೈರಾಗಿ (ಕ):** ಬೆ.10.40ಕ್ಕೆ, ಮ.1.20ಕ್ಕೆ, ರಾ.7.20ಕ್ಕೆ, ರಾ.10ಕ್ಕೆ, **777 ಚಾರ್ಲಿ (ಕ):** ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ರಾಕೆಟ್ರಿ (ತ):** ಬೆ.9.55ಕ್ಕೆ, ಸಂ.5.15ಕ್ಕೆ, **ಮಿನಿಯನ್ಸ್: ದಿ ರೈಸ್ ಆಫ್ ಗ್ರೂ (3ಡಿ)(ಇಂ):** ಮ.1.05ಕ್ಕೆ, ಮ.3.10ಕ್ಕೆ, ರಾ.8.25ಕ್ಕೆ, **ರಾಕೆಟ್ರಿ (ಹಿಂ):** ರಾ.10.30ಕ್ಕೆ.
ಸ್ಕ್ರೀನ್ 2	**ವಿಂಡೋಸೀಟ್ (ಕ):** ಬೆ.9.50ಕ್ಕೆ, ಮ.12.45ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, **777 ಚಾರ್ಲಿ (ಕ):** ಮ.3.40ಕ್ಕೆ.
ಸ್ಕ್ರೀನ್ 3	**777 ಚಾರ್ಲಿ (ಕ):** ಬೆ.10ಕ್ಕೆ, ರಾ.10.10ಕ್ಕೆ, **ರಾಷ್ಟ್ರ ಕವಚ್ ಓಂ (ಹಿಂ):** ಮ.1.25ಕ್ಕೆ, ಸಂ.4.20ಕ್ಕೆ, **ವಿಂಡೋಸೀಟ್ (ಕ):** ರಾ.7.15ಕ್ಕೆ.
ಸ್ಕ್ರೀನ್ 4	**ವಿಂಡೋ ಸೀಟ್ (ಕ):** ಬೆ.9.55ಕ್ಕೆ, **ಯಾನೈ (ತ):** ಮ.12.45ಕ್ಕೆ, **ಪಕ್ಕ ಕಮರ್ಷಿಯಲ್ (ತೆ):** ಮ.3.55ಕ್ಕೆ, ರಾ.10.20ಕ್ಕೆ, **777 ಚಾರ್ಲಿ (ಕ):** ರಾ.7ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ತ್ರಿವಿಕ್ರಮ (ಕ):** ಬೆ.10.25ಕ್ಕೆ, **ಪಕ್ಕ ಕಮರ್ಷಿಯಲ್ (ತೆ):** ಮ.1.15ಕ್ಕೆ, ಸಂ.6.40ಕ್ಕೆ, **ರಾಷ್ಟ್ರ ಕವಚ್ ಓಂ (ಹಿಂ):** ಸಂ.4.05ಕ್ಕೆ, **ರಾಕೆಟ್ರಿ (ತ):** ರಾ.9.30ಕ್ಕೆ.
ಸ್ಕ್ರೀನ್ 2	**ರಾಷ್ಟ್ರ ಕವಚ್ ಓಂ (ಹಿಂ):** ಬೆ.11ಕ್ಕೆ, **ರಾಕೆಟ್ರಿ (ತ):** ಮ.1.40ಕ್ಕೆ, **777 ಚಾರ್ಲಿ (ಕ):** ಸಂ.4.40ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 3	**ಬೈರಾಗಿ (ಕ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**777 ಚಾರ್ಲಿ (ಕ):** ಬೆ.10.05ಕ್ಕೆ, ರಾ.9.15ಕ್ಕೆ, **ತ್ರಿವಿಕ್ರಮ (ಕ):** ಮ.1.10ಕ್ಕೆ, **ವಿಂಡೋ ಸೀಟ್ (ಕ):** ಸಂ.4ಕ್ಕೆ, ಸಂ.6.40ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, **ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು):** ಸಂ.6.05ಕ್ಕೆ, **ಮೆಟಡೊರ್ (ಕ):** ಬೆ.11.45ಕ್ಕೆ, **ಟಾಪ್ ಗನ್ (ಇಂ):** ಮ.2.45ಕ್ಕೆ, **ಸಾಮ್ರಾಟ್ ಪೃಥ್ವಿರಾಜ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಬೂಲ್‌ಬುಲಯ್ಯ 2(ಹಿಂ):** ಮ.12.30ಕ್ಕೆ, ಸಂ.6.40ಕ್ಕೆ, **ಮೇಜರ್ (ಹಿಂ):** ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, **ವಿಕ್ರಮ್ (ತ):** ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, **ಮೇಜರ್ (ತೆ):** ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, **F3 (ತೆ):** ಮ.3.35ಕ್ಕೆ, **ಸರ್ಕಾರು ವಾರಿ ಪಾಠ (ತೆ):** ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪಕ್ಕ ಕಮರ್ಷಿಯಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಓಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪಕ್ಕ ಕಮರ್ಷಿಯಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರಾಗಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಯಾನೈ (ತ)	4 ಪ್ರದರ್ಶನಗಳು
ಸಂಗಂ	
ಭೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ವಿಂಡೋಸೀಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಓಂ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓಂ (ಹಿಂ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ತ್ರಿವಿಕ್ರಮ (ಕ)	4 ಪ್ರದರ್ಶನಗಳು

ವಂಚನೆ ಕೇಸ್

137.60 ಕೋಟಿ ಮೌಲ್ಯದ ಸ್ಥಿರಾಸ್ತಿ ಇಡಿ ವಶಕ್ಕೆ

ಬೆಂಗಳೂರು: ವಂಚನೆ ಕೇಸ್‌ಗೆ ಸಂಬಂಧಿಸಿದಂತೆ ಡ್ರೀಮ್ಜ್ ಇನ್ಫ್ರಾ ಇಂಡಿಯಾ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ದಿಶಾ ಚೌಧರಿ ಮತ್ತು ಟಿಜಿಎಸ್ ಕನ್‌ಸ್ಟ್ರಕ್ಷನ್ ಪ್ರೈ ಲಿಮಿಟೆಡ್ ಮ್ಯಾನೇಜಿಂಗ್ ಡೈರೆಕ್ಟರ್ ಮನದೀಪ್ ಕೌರ್ ಮತ್ತಿತರಿಗೆ ಸಂಬಂಧಿಸಿದ 16 ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿರುವುದಾಗಿ ಇಡಿ ತಿಳಿಸಿದೆ.

ಬೆಂಗಳೂರಿನ ವಿವಿಧೆಡೆ ಕೃಷಿ ಭೂಮಿ, ವಸತಿ ಪ್ರದೇಶ ಸೇರಿದಂತೆ ಸುಮಾರು 137.60 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿಯನ್ನು ವಶಕ್ಕೆ ಪಡೆದಿರುವುದಾಗಿ ಇಡಿ ಹೇಳಿದೆ. ಡ್ರೀಮ್ಜ್ ಇನ್ಫ್ರಾ ಇಂಡಿಯಾ ಲಿಮಿಟೆಡ್, ಟಿಜಿಎಸ್ ಕನ್ಸ್ ಟ್ರಕ್ಷನ್ ಪ್ರೈ. ಲಿಮಿಟೆಡ್, ಗೃಹ ಕಲ್ಯಾಣ, ಸಚಿನ್ ನಾಯಕ್ ಆಲಿಯಾಸ್ ಯೋಗೇಶ್ ಚೌಧರಿ, ಕೌರ್ ಮತ್ತಿತರ ವಿರುದ್ಧ ಬೆಂಗಳೂರಿನಲ್ಲಿ ದಾಖಲಾಗಿದ್ದ 125 ಕ್ಕೂ ಹೆಚ್ಚು ಎಫ್ ಐಆರ್ ಆಧಾರದ ಮೇಲೆ ಇಡಿ ಅಕ್ರಮ ಹಣ ವರ್ಗಾವಣೆಯ ತನಿಖೆ ನಡೆಸುತಿತ್ತು.

ಈ ಕಂಪನಿಗಳು ಮತ್ತು ವ್ಯಕ್ತಿಗಳು ಬೆಂಗಳೂರು ಸುತ್ತಮುತ್ತ ಕೈಗೆಟುಕುವ ದರದಲ್ಲಿ ಅಪಾರ್ಟ್ ಮೆಂಟ್ ನೀಡುವುದಾಗಿ ಭರವಸೆ ನೀಡುವುದರೊಂದಿಗೆ ಅಪಾರ ಪ್ರಮಾಣದಲ್ಲಿ ಡೆಪಾಸಿಟ್ ಮಾಡಿಸಿಕೊಂಡು ವಂಚಿಸಿರುವುದಾಗಿ ಈವರೆಗಿನ ತನಿಖೆಯಲ್ಲಿ ತಿಳಿದು ಬಂದಿದೆ. 2011-12ರಿಂದ 2016-17 ರವರೆಗೂ ಆರೋಪಿಗಳು 10,299ಕ್ಕೂ ಹೆಚ್ಚು ಗ್ರಾಹಕರಿಂದ ರೂ. 722 ಕೋಟಿಗೂ ಹೆಚ್ಚು ಹಣವನ್ನು ಸಂಗ್ರಹಿಸಿದ್ದಾರೆ.

ಅಲ್ಲದೇ, ಗ್ರಾಹಕರಿಗೆ ಫ್ಲಾಟ್ ನೀಡದೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ಇಡಿ ಸೋಮವಾರ ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದೆ.

ನಿಧನ

ಗಂಗಾಧರ್



ಮೈಸೂರು,ಜು.4-ಮೈಸೂರು ಪಡುವಾರಹಳ್ಳಿ ನಿವಾಸಿ ಗಂಗಾಧರ್ (70) ಅವರು ಇಂದು ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಬೆಳಗ್ಗೆ 11 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಂ.ಬಾಬುರವರು
ಮರಣ: 24.06.2022
ಭೋಜನ: ಮಧ್ಯಾಹ್ನ 1ಕ್ಕೆ

ಇವರು ದಿ. 24.06.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ.05.07.2022 ಮಂಗಳವಾರ ಬೆಳಗ್ಗೆ 10.30ಕ್ಕೆ ಶ್ರೀ ಮರುಳೇಶ್ವರ ಶಾಂತಿಧಾಮ (ಕಾವೇರಿ ಸ್ಕೂಲ್ ಹತ್ತಿರ) ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ದುಃಖತಪ್ತರು: ಶ್ರೀಮತಿ ಪುಟ್ಟತಾಯಮ್ಮ, ಮಕ್ಕಳು ಹಾಗೂ ಕುಟುಂಬವರ್ಗದವರು

6ನೇ ವರ್ಷದ ಚಿರಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 6ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ ಇವರ ಆತ್ಮಕ್ಕೆ ಶಾಂತಿ ಸಿಗಲೆಂದು ಎಲ್ಲರೂ ದೇವರಲ್ಲಿ ಪ್ರಾರ್ಥಿ ಸೋಣ,
ದುಃಖತಪ್ತರು:
ಹೆಂಡತಿ: ಪದ್ಮ,
ಮಗಳು: ಎಸ್.ಭಾವನ
ಎಸ್.ಸೋನಾಲಿ.
ತಂಗಿ-ಗಾಯತ್ರಿ

ವಿ.ಶಿವಣ್ಣ, ಕೆ.ಇ.ಬಿ
#2673, 3ನೇ ಕ್ರಾಸ್
ಕೆ.ಜಿ.ಕೊಪ್ಪಲು

COURT AUCTION SALE OF PROPERTY NOTICE

IN THE COURT OF I ADDN SENIOR CIVIL JUDGE, AT MYSURU

F.D.P. No. 27/2005
Petitioner: **P. SUBRAMANYA**
V/S
Respondent: **P. NARAYANA**
(Since dead by his L R's) & others.

By virtue of the orders passed in the final decree proceedings by the Hon'ble I Addn senior civil Judge, Mysuru, the schedule described property is ordered to be sold through public auction.

PROPERTY SCHEDULE

Item No. 2 of 'B' schedule property bearing site No. 294, 2nd stage, Siddartha nagar layout, T. Narasipura road, Nazarbad Mohalla, Mysuru, measuring East-West 40' and North-South 80' AREA OF SITE 40'x80'=3200.00 SFT. Boundary: East–Site No 295, West-Site No.293, North-Site No.299, South-Road.

Including Garage : 14'9"x18'0"=265.50 SFT.

TERMS AND CONDITIONS: The auction sale of the schedule mentioned property will be held at site bearing No. 294, 2nd stage, Siddartha nagar Layout, T. Narasipura road, **Nazarbad Mohalla, Mysuru on 14.07.2022 at 9.00AM to 1.00PM. The reserved price of the property is 1,92,00,000/-**

1. The property is being sold on "as is where and as is what" basis.
2. The minimum opening bid shall be not less than that the reserved price determined by the Hon'ble court.
3. The highest bidder shall be declared to be the purchaser of the auctioned property.
4. That as soon as the bidding ends, the highest bidder if his/her bid is accepted by the court commissioner 25% of the highest bid price in the form of the Demand Draft, to be paid to the Hon'ble 1 Addn. Senior Civil Judge Court, at Mysore and for the remaining amount the highest bidder should appear before the court and to get Reasonable Time To Deposit, the remaining amount as per the order of the court.
5. The successful shall bear the charges payable for conveyance, registration fee, stamp duty etc., as applicable.

Sd/- **S.V. SANGAMESHWARAN,**
B.Sc., B.E, MIE, B.L, COURT COMMISSIONER IN FDP 27/2005 ON THE FILE OF I Addn Senior Civil Judge, and CJM Court, At Mysore.

Client:
Mob-9945653141

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ಸಾರ್ವಜನಿಕ ಆಸ್ಪತ್ರೆ, ನಂಜನಗೂಡು, ಮೈಸೂರು ಜಿಲ್ಲೆ. 571124
ದೂ:- 08221-226415 ಇ-ಮೇಲ್: ghngud@gmail.com
ಸಂಖ್ಯೆ/ಸಾ.ಆ.ತಿ.ನ.ಪು/ಟೆಂಡರ್/ನಾನ್ ಕ್ಲೀನಿಕಲ್/02/2022-23
ದಿ: 27.06.2022

ಹೊರಗುತ್ತಿಗೆ ನಾನ್ ಕ್ಲೀನಿಕಲ್ ಸೇವಾ ಸಂಬಂಧ ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ ನಂಜನಗೂಡು ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಇಲ್ಲಿಗೆ 2022-23ನೇ ಸಾಲಿನ (01.04.2022 ರಿಂದ 31.03.2023 ರವರೆಗೆ) ಅವಧಿಗೆ ಹೊರಗುತ್ತಿಗೆ **ನಾನ್ ಕ್ಲೀನಿಕಲ್** ಸೇವೆಯನ್ನು ಪಡೆಯಲು ಇ-ಸಂಗ್ರಹಣೆ ವೇದಿಕೆ ಮೂಲಕ ದ್ವಿ-ಲಕೋಟೆ ಪದ್ಧತಿ ಮುಖಾಂತರ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ http://www.eproc.karnataka.gov.in ಸಂಪರ್ಕಿಸುವುದು.

1) ಟೆಂಡರ್ ಅಂದಾಜು ಮೌಲ್ಯ: **26,19,000/-** 2) ಟೆಂಡರ್ ಇ.ಎಂ.ಡಿ ಮೌಲ್ಯ: **5,24,000/-** 3) ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭ ದಿ: **27.06.2022** 4) ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **23.07.2022 5.00 P.M.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **24.07.2022 11.00 A.M.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **26.07.2022 11.00 A.M.** 7) ಟೆಂಡರ್ ತೆರೆಯುವ ಸ್ಥಳ: ಸಾರ್ವಜನಿಕ ಆಸ್ಪತ್ರೆ, ನಂಜನಗೂಡು, ಮೈಸೂರು ಜಿಲ್ಲೆ. 8) ಇ-ಮೇಲ್ ವಿಳಾಸ: **ghngud@gmail.com**

ಸಹಿ/-ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ನಂಜನಗೂಡು

DIPR/DD-MYS/MCA/193/2022-23

ಕರ್ನಾಟಕ ಸರ್ಕಾರ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ ತಿ.ನರಸೀಪುರ ತಾಲ್ಲೂಕು
Telephone No. 08227-261435 Email: adatnpur@rediffmail.com

ಸಂಖ್ಯೆ: ಸಕೃನಿ/ತಿನಪು/ಲೆಕ್ಕ-2/ವಾ.ಬಾ/ಮರು.ಟೆಂ.ಪ್ರ/2022-23 ದಿನಾಂಕ: 02-07-2022

ಮರು ಟೆಂಡರ್ ಪ್ರಕಟಣೆ

2022-23ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು, ತಿ.ನರಸೀಪುರ ಇವರು ತಾಲ್ಲೂಕಿನಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರವಾಸ ಕೈಗೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನದ (ಕಾರು) ಅವಶ್ಯಕತೆ ಇದ್ದು, ಈಗಾಗಲೇ ಈ ಬಗ್ಗೆ ಟೆಂಡರ್ ಕರೆದಿದ್ದು, ತಾಂತ್ರಿಕ ಕಾರಣಗಳಿಂದ ಟೆಂಡರ್ ಮಾನ್ಯವಾಗದ ಕಾರಣ ಮರುಟೆಂಡರ್ ಕರೆಯಲಾಗಿದೆ. ಅಧಿಕೃತ (ನೋಂದಾಯಿತ) ಟ್ರಾವೆಲ್ ಏಜೆನ್ಸಿಗಳಿಂದ ವಾಹನ ಸರಬರಾಜು ಮಾಡಬಯಸುವ ಟೆಂಡರ್‌ದಾರರು (ಟ್ರಾವೆಲ್ ಏಜೆನ್ಸಿಗಳು) ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

1	ಟೆಂಡರ್ ಅರ್ಜಿ ಬೆಲೆ	ರೂ. 100/-
2	ಟೆಂಡರ್ ಅರ್ಜಿ ವಿತರಿಸುವ ದಿನಾಂಕ	02-07-2022 ರಿಂದ 08-07-2022 ರವರೆಗೆ ಅಪರಾಹ್ನ 3.00 ಗಂಟೆಯೊಳಗೆ
3	ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ	15-07-2022 ಸಂಜೆ 5.00 ಗಂಟೆಯೊಳಗೆ
4	ಟೆಂಡರ್ ತೆರೆಯುವ ದಿನಾಂಕ	16-07-2022 ಬೆಳಿಗ್ಗೆ 11.00 ಗಂಟೆಗೆ
5	ಟೆಂಡರ್ ತೆರೆಯುವ ಸ್ಥಳ	ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ-ನರಸೀಪುರ.
6	ಇ.ಎಂ.ಡಿ. ಮೊಬಲಗು (ಡಿ.ಡಿ.) (ಒಂದು ವಾಹನಕ್ಕೆ)	ರೂ. 8500/-
7	ಡಿ.ಡಿ. ತೆಗೆಯಬೇಕಾದ ವಿಳಾಸ	ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ-ನರಸೀಪುರ

ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ-ನರಸೀಪುರ ಇವರ ಹೆಸರಿನಲ್ಲಿ ರೂ. 100/- ನೀಡಿ ಟೆಂಡರ್ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ-ನರಸೀಪುರ ಇವರಿಂದ ಪಡೆಯಬಹುದು. ಟೆಂಡರಿನ ಷರತ್ತುಗಳ ಇನ್ನಿತರೆ ವಿವರಗಳನ್ನು ಈ ಕಛೇರಿ ವತಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಸಹಾಯಕ ಕೃಷಿ ನಿರ್ದೇಶಕರು, ತಿ-ನರಸೀಪುರ

ಪಟ್ಟಣ ಪಂಚಾಯಿತಿ ಕಾರ್ಯಾಲಯ
ಶ್ರೀರಾಂಪುರ, ಮೈಸೂರು ಜಿಲ್ಲೆ- 570008
ಸಾರ್ವಜನಿಕ ಸೂಚನೆ

ಏಕ ಬಳಕೆಯ ಪ್ಲಾಸ್ಟಿಕ್ (SUP) ವಸ್ತುಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸುವ ಸೂಚನೆ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳ ಅನುಸರಣೆ 2021

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ FEE 17 EPC 2012, ದಿನಾಂಕ: 11.03.2016ರ ಪ್ರಕಾರ, ಕೆಳಗಿನ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪಾದನೆಯನ್ನು 11.03.2016ರಿಂದ ಈಗಾಗಲೇ ನಿಷೇಧಿಸಲಾಗಿದೆ. ಅಂದರೆ, ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಬ್ಯಾನರ್‌ಗಳು, ಪ್ಲಾಸಿಕ್ ಬಂಟಿಂಗ್ಸ್, ಪ್ಲಾಸ್ಟಿಕ್ ಫ್ಲೆಕ್ಸ್, ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕಪ್‌ಗಳು, ಪ್ಲಾಸ್ಟಿಕ್ ಸ್ಪೂನ್‌ಗಳು, ಅಂಟಿಕೊಳ್ಳುವ ಫಿಲ್ಮ್‌ಗಳು, ಎಲ್ಲಾ ದಪ್ಪದ ಡೈನಿಂಗ್ ಟೇಬಲ್‌ನಲ್ಲಿ ಹರಡಲು ಬಳಸುವ ಹಾಳೆಗಳು, ಸ್ಟ್ರಾಗಳು, ಥರ್ಮಾಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಮಣಿಗಳಿಂದ ಮಾಡಿದ ವಸ್ತುಗಳು.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEF ಮತ್ತು CC) ನವದೆಹಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳು, 2021ರಲ್ಲಿ ಮೇಲಿನ ನಿಷೇಧಿತ ಉತ್ಪನ್ನಗಳ ಜೊತೆಗೆ ಕೆಳಗಿನ ಹೆಚ್ಚುವರಿ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ನಿಷೇಧಿಸಿ ದಿನಾಂಕ: 12ನೇ ಆಗಸ್ಟ್ 2021ರಂದು ಅಧಿಸೂಚನೆ (G.S.R.No. 571 (E)) ಯನ್ನು ಹೊರಡಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳನ್ನು 2016ರ ನಿಯಮ 4(2)ರ ಪ್ರಕಾರ (ತಿದ್ದುಪಡಿಯಂತೆ), "ಪಾಲಿಸ್ಟೀರಿಯನ್ ಮತ್ತು ವಿಸ್ತರಿತ ಪಾಲಿಸ್ಟೀರಿಯನ್ ಸೇರಿದಂತೆ ಕೆಳಗಿನ ಏಕ ಬಳಕೆಯ ಪ್ಲಾಸ್ಟಿಕ್ (SUP) ತಯಾರಿಕೆ ಆಮದು, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ಜುಲೈ 1, 2022 ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ.

(ಎ) ಪ್ಲಾಸ್ಟಿಕ್ ಸ್ಟಿಕ್‌ಗಳೊಂದಿಗೆ ಇಯರ್ ಬಡ್‌ಗಳು, ಬಲೂನ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕ್ಯಾಂಡಿ ಸ್ಟಿಕ್‌ಗಳು ಪ್ಲಾಸ್ಟಿಕ್ ಐಸ್‌ಕ್ರೀಮ್ ಸ್ಟಿಕ್‌ಗಳು, ಅಲಂಕಾರಕ್ಕಾಗಿ ಬಳಸುವ ಪಾಲಿಸ್ಟೈರೀನ್ (ಥರ್ಮಾಕೋಲ್).

(ಬಿ)ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಕಪ್‌ಗಳು ಮತ್ತು ಲೋಟಗಳು, ಫೋರ್ಕ್‌ಗಳು, ಪ್ಲಾಸ್ಟಿಕ್ ಚಮಚಗಳು, ಪ್ಲಾಸ್ಟಿಕ್ ಚಾಕುಗಳು, ಪ್ಲಾಸ್ಟಿಕ್ ಟ್ರೇಗಳಂತಹ ಕಟ್ಲರಿಗಳು, ಸ್ವೀಟ್ ಬಾಕ್ಸ್‌ಗಳ ಸುತ್ತ ಸುತ್ತುವ ಅಥವಾ ಪ್ಯಾಕಿಂಗ್ ಫಿಲ್ಮ್‌ಗಳು, ಆಮಂತ್ರಣ ಪತ್ರಗಳು ಮತ್ತು ಸಿಗರೇಟ್ ಪ್ಯಾಕೆಟ್‌ಗಳು, 100 ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಅಥವಾ PVC ಬ್ಯಾನರ್‌ಗಳು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEF ಮತ್ತು CC) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಟೈಮ್‌ಲೈನ್‌ಗಳ ಪ್ರಕಾರ ಮೇಲಿನ ಎಲ್ಲಾ ವಸ್ತುಗಳ ಉತ್ಪಾದಕರು, ದಾಸ್ತಾನುದಾರರು, ಚಿಲ್ಲರೆ ವ್ಯಾಪಾರಿಗಳು, ಅಂಗಡಿ ಮಾಲೀಕರುಗಳು, ಇ-ಕಾಮರ್ಸ್ ಕಂಪನಿಗಳು, ಬೀದಿ ವ್ಯಾಪಾರಿಗಳು, ವಾಣಿಜ್ಯ ಸಂಸ್ಥೆಗಳು (ಮಾಲ್‌ಗಳು/ ಮಾರುಕಟ್ಟೆ ಸ್ಥಳ/ಶಾಪಿಂಗ್ ಕೇಂದ್ರಗಳು/ ಸಿನಿಮಾ ಮನೆಗಳು/ ಪ್ರವಾಸೋದ್ಯಮ ಸ್ಥಳಗಳು/ ಶಾಲೆಗಳು/ ಕಾಲೇಜುಗಳು/ ಕಛೇರಿ ಸಂಕೀರ್ಣಗಳು/ ಆಸ್ಪತ್ರೆಗಳು, ಇತರೆ ಸಂಸ್ಥೆಗಳು ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಏಕ ಬಳಕೆಯ ಪ್ಲಾಸಿಕ್ ಉತ್ಪಾದನೆ, ಸಂಗ್ರಹಣೆ, ವಿತರಣೆ ಮಾರಾಟ ಮತ್ತು ಬಳಕೆಯನ್ನು ನಿಲ್ಲಿಸುವಂತೆ ತಿಳಿಸಲು ಈ ಸೂಚನೆಯನ್ನು ನೀಡಲಾಗಿದೆ.

ಇದಲ್ಲದೆ, ಜೂನ್ 30, 2022ರೊಳಗೆ ಮೇಲೆ ತಿಳಿಸಲಾದ ವಸ್ತುಗಳ ಶೂನ್ಯ ದಾಸ್ತಾನುಗಳನ್ನು ಖಚಿತಪಡಿಕೊಳ್ಳಲು ಸಂಬಂಧಿಸಿದ ಘಟಕಗಳಿಂದ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ಎಲ್ಲಾ ಇ-ಕಾಮರ್ಸ್ ಕಂಪನಿಗಳ ವೆಬ್ಸೈಟ್‌ನಲ್ಲಿ ಏಕ ಬಳಕೆಯ ಪ್ಲಾಸಿಕ್ (SUP) ವಸ್ತುಗಳ ಮಾರಾಟ ಮತ್ತು ಪ್ರದರ್ಶನ/ ಜಾಹೀರಾತುಗಳನ್ನು ಕೂಡ ಜುಲೈ1, 2022ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ.

ಮೇಲಿನ ಆದೇಶವನ್ನು ಕೈಗಾರಿಕೆಗಳು, ಮಾಲ್‌ಗಳು/ ಮಾರುಕಟ್ಟೆ ಸ್ಥಳ/ಶಾಪಿಂಗ್ ಕೇಂದ್ರಗಳು/ ಸಿನಿಮಾ ಮನೆಗಳು/ ಪ್ರವಾಸೋದ್ಯಮ ಸ್ಥಳಗಳು/ ಶಾಲೆಗಳು/ ಕಾಲೇಜುಗಳು/ ಕಛೇರಿಗಳು ಆಸ್ಪತ್ರೆಗಳು ಮತ್ತು ಇತರೆ ಸಂಸ್ಥೆಗಳು ಉಲ್ಲಂಘಿಸಿದರೆ ಪರಿಸರ (ಸಂರಕ್ಷಣೆ) ಕಾಯ್ದೆ 1986ರಡಿಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳ ವಶಪಡಿಸಿಕೊಳ್ಳುವ ಮತ್ತು ಮುಚ್ಚುವ ಆದೇಶವನ್ನು ನೀಡಲಾಗುವುದು. ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಹೊರಡಿಸಿದ ಮಾರ್ಗಸೂಚಿಯ ಪ್ರಕಾರ ಪರಿಸರ ಪರಿಹಾರವನ್ನು ಪ್ರತಿ ಟನ್‌ಗೆ ರೂ 5,000/- ವನ್ನು ದಂಡ ವಿಧಿಸಲಾಗುವುದು.

ಸಹಿ/- (ಜಿ.ಎಸ್ ಗಿರೀಶ್)	ಸಹಿ/- (ಎ.ಎಂ.ಶ್ರೀಧರ್)
ಆಡಳಿತಾಧಿಕಾರಿಗಳು	ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ	ಪಟ್ಟಣ ಪಂಚಾಯಿತಿ
ಶ್ರೀರಾಂಪುರ ಮೈಸೂರು	ಶ್ರೀರಾಂಪುರ ಮೈಸೂರು